ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 50
ಡಿಸೆಂಬರ್ 11, 2011

ಪುಟ 16 ರೂ. 5/-



ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಹೂಡಿಕೆ :







ಜನತೆಯ ಬದುಕಿಗೆ ಗದಾಪ್ರಹಾರ



ಕೃಷಿಗೆ ಗೋರಿ ತೋಡಿದ ಬಂಡವಾಳಗಾರರ ಸಮಾವೇಶ : ಪ್ರತಿರೋಧ



ರೆಡ್ಡಿ ಬಳಗ : ಅಂದು ಗಾಂಧಿಗಳು ? ಇಂದು ಗೂಂಡಾಗಳು!!



ಮಡೆ ಸ್ನಾನ ನಿಲ್ಲಿಸಲಾಗಿಲ್ಲ ಯಾಕೆ ?



ಯಲಬುರ್ಗಾ : ಕಾಣದ ಶಾಸಕ

ಮನೆ ನಿವೇಶನಕ್ಕಾಗಿ – ಮಂಡ್ಯ ಡಿ.ಸಿ. ಕಛೇರಿ ಮುತ್ತಿಗೆ

ವರದಿ: ಹನುಮೇಗೌಡ

ಸ್ವಂತ ಮನೆ ನಿವೇಶನ ಇಲ್ಲದ ಬಡ ಕೃಷಿ ಕೂಲಿಕಾರರು ರೈತರು, ದುಡಿಯುವ ಮಹಿಳೆಯರಿಗೆ ಯುವಜನರಿಗೆ ಮನೆ, ನಿವೇಶನಕ್ಕಾಗಿ ಹಾಗೂ ವಿವಿಧ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕ್ ಕೇಂದ್ರಗಳಲ್ಲಿ ಗ್ರಾಮ ಪಂಚಾಯತಿ ಕಛೇರಿಗಳ ಮುಂದೆ ಹಾಗೂ ಡಿ.ಸಿ ಕಛೇರಿಯ ಮುಂಭಾಗ ಪ್ರತಿಭಟನೆಗಳನ್ನು ಹಮ್ಮಿಕೊಳ್ಳುತ್ತಾ ಸಾಕಷ್ಟು ಹೋರಾಟಗಳನ್ನು ಮಾಡುತ್ತಾ ಬರಲಾಗಿದೆ. ಆದರೆ ಜಿಲ್ಲಾಧಿಕಾರಿ, ತಾಲ್ಲೂಕ್ ಅಧಿಕಾರಿಗಳು ಹಾಗೂ ಪಂಚಾಯತಿ ಅಧಿಕಾರಿ, ತಾಲ್ಲೂಕು ಅಧಿಕಾರಿಗಳು ಹಾಗೂ ಪಂಚಾಯತಿ ಅಧಿಕಾರಿಗಳಿಂದ ಇಲ್ಲಿಯವರೆಗೆ ಯಾವುದೇ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಏಪ್ರಿಲ್ 19 ಹಾಗೂ ಆಗಸ್ಟ್ 27. 2011 ರಂದು ಡಿ.ಸಿ. ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾದ ಸಂದರ್ಭದಲ್ಲಿ ಡಿ.ಸಿ.ಯವರು ಸಭೆ ಕರೆದು ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಮಾಡುತ್ತೇವೆ ಎಂದು ಆಶ್ವಾಸನೆ ನೀಡಿದ್ದರು. ಆದರೆ ಡಿ.ಸಿ ಯವರು ಯಾವುದೆ ಸಭೆ ಕರೆದು ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಲಿಲ್ಲ. ಈ ಹಿನ್ನಲೆಯಲ್ಲಿ ಡಿ.ಸಿ. ಕಛೇರಿಯನ್ನು ಮುತ್ತಿಗೆ ಹಾಕಿ ಸಮಸ್ಯೆ ಬಗೆಹರಿಯುವ ತನಕ ಹಗಲು–ರಾತ್ರಿ ಧರಣಿ ಮಾಡಲು ನಿರ್ಣಯ ಕೈಗೊಳ್ಳಲಾಯಿತು. ಅಕ್ಟೋಬರ್ 14/2011 ರಂದು ಬೆಳಿಗ್ಗೆ ಜಿಲ್ಲೆಯ ಎಲ್ಲಾ ತಾಲ್ಲೂಕ್‌ಗಳ ಜನಪರ ಸಂಘಟನೆಗಳ ಕಾರ್ಯಕರ್ತರು ಕೆಂಬಾವುಟಗಳನ್ನು ಹಿಡಿದು ಮಂಡ್ಯ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಸೇರಿದರು.

ರ್‍ಯಾಲಿಯಲ್ಲಿ 2000 ಕ್ಕೂ ಹೆಚ್ಚು ಜನರು ಮಂಡ್ಯ, ಹಾಸನ, ಮೈಸೂರು ಮುಖ್ಯ ರಸ್ತೆಯಲ್ಲಿ ಘೋಷಣೆಗಳನ್ನು ಕೂಗುತ್ತ ಡಿ.ಸಿ. ಕಛೇರಿ ಮುಂಭಾಗ ಸೇರಿದರು. ನಿವೇಶನ ರಹಿತರಿಗೆ ಮನೆ ಕಟ್ಟಲು ನಿವೇಶನ, ಎಲ್ಲ ಬಡವರಿಗೂ ಮನೆ ನಿರ್ಮಿಸಿ ಕೊಡಲು ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗಾಗಿ ರೈತರು ಕೃಷಿ ಕೂಲಿಕಾರರು ಮಹಿಳೆಯರು ಯುವಜನರಿಗೆ ಅಗತ್ಯ ಪ್ರಮಾಣದ ಬ್ಯಾಂಕ್ ಸಾಲಕ್ಕಾಗಿ ಬಲವಂತದ ಭೂಸ್ವಾಧೀನ ಕೈಬಿಡಲು, ಬಗರ್ ಹುಕುಂ ಮತ್ತು ಅರಣ್ಯ ಭೂಮಿ ಸಕ್ರಮಗೊಳಿಸಲು ಜಿಲ್ಲೆಯ ಎಲ್ಲಾ ತಾಲ್ಲೂಕ್‌ಗಳಲ್ಲಿ 10,000 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಕಾರರು, ರೈತರು, ಮಹಿಳೆಯರು , ಯುವಜನರು ಸಂಬಂಧಪಟ್ಟ ಗ್ರಾಮ ಪಂಚಾಯತಿ, ತಾಲ್ಲೂಕ್ ಕಛೇರಿ ಬ್ಯಾಂಕ್‌ಗಳಿಗೆ ಅರ್ಜಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಜಿಲ್ಲೆಯಲ್ಲಿ ಸುಮಾರು 30–40 ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ಗುಡಿಸಲು ಹಾಕಿಕೊಂಡು ವಾಸಮಾಡುತ್ತಿರುವ ಬಡ ಕೂಲಿಕಾರರಿಗೆ ಹಕ್ಕು ಪತ್ರ ನೀಡಬೇಕು ಹಾಗೂ ಹಕ್ಕು ಪತ್ರ ನೀಡಿರುವವರಿಗೆ ನಿವೇಶನ ತೋರಿಸಬೇಕು. ನೀರಾ ಮಾರಾಟಗಾರರು ಮತ್ತು ಉತ್ಪಾದಕರ ಮೇಲಿನ ದಾಳಿಗಳನ್ನು ನಿಲ್ಲಿಸಬೇಕು, ಕೇಸುಗಳನ್ನು ವಜಾ ಮಾಡಿ ಮುಕ್ತವಾಗಿ ನೀರಾ ಮಾರಾಟ ಮಾಡಲು ಅಬಕಾರಿ ಇಲಾಖೆಯವರು ಅವಕಾಶ ಮಾಡಿಕೊಡಬೇಕೆಂದು ಸ್ಥಳಕ್ಕೆ ಡಿ.ಸಿ.ಯವರು ಬಂದು ಎಲ್ಲ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿ ಪ್ರತಿಭಟಿಸಲಾಯಿತು. ಸಂಜೆ 3 ಘಂಟೆಯವರೆಗೆ ಡಿ.ಸಿ. ಕಛೇರಿ ಗೇಟಿನಿಂದ ಜನರು ಜಗ್ಗಲಿಲ್ಲ. ಡಿ.ಸಿ. ರವರು ಮುಖ್ಯಮಂತ್ರಿಗಳ ಸಭೆಗೆ ಬೆಂಗಳೂರಿಗೆ ಹೋಗಿದ್ದಾರೆಂದು ಅವರ ಪರವಾಗಿ ಉಪಜಿಲ್ಲಾಧಿಕಾರಿ ಮನವಿ ಸ್ವೀಕರಿಸಿ ಡಿ.ಸಿ. ರವರು ಬಂದ ತಕ್ಷಣ ಸಭೆಯ ದಿನಾಂಕ ನಿಗದಿ ಮಾಡಿ ತಿಳಿಸುವುದಾಗಿ ಹೋರಾಟವನ್ನು ನಿಲ್ಲಿಸಲು ಮನವಿ ಮಾಡಿದರು. ಇದಕ್ಕೆ ಸಂಘದ ಮುಖಂಡರು ಹಾಗೂ ಕಾರ್ಯಕರ್ತರು ಒಪ್ಪದೇ ಆಕ್ರೋಶ ವ್ಯಕ್ತಪಡಿಸಿ ಈಗಲೇ ಡಿ.ಸಿ. ಯವರಿಂದ ಸಭೆಯ ದಿನಾಂಕ ನಿಗದಿ ಮಾಡುವ ತನಕ ನಾವು ಹೋಗುವುದಿಲ್ಲವೆಂದು ಧರಣಿ ಕುಳಿತರು. ನಂತರ ಉಪಜಿಲ್ಲಾಧಿಕಾರಿ ನವೆಂಬರ್ 3, 2011ಕ್ಕೆ ಡಿ.ಸಿ. ಯವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಎಲ್ಲ ತಾಲ್ಲೂಕ್ ಅಧಿಕಾರಿಗಳ ಸಭೆ ಕರೆಯುವುದಾಗಿ ತಿಳಿಸಿದರು. ಧರಣಿಯ ನೇತೃತ್ವವನ್ನು ಕರ್ನಾಟಕ ಪ್ರಾಂತ ಕೃಷಿಕಾರರ ಸಂಘ, ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘ ಹಾಗೂ ಡಿವೈಎಫ್ಐ, ನೀರಾ ಉತ್ಪಾದಕರು ಮತ್ತು ಮಾರಾಟಗಾರರ ಸಂಘದ ಜಿಲ್ಲಾ ಸಮಿತಿಗಳು ವಹಿಸಿದ್ದವು. ಹೋರಾಟವನ್ನು ಬೆಂಬಲಿಸಿ ಜಿಲ್ಲಾ ಸಿಐಟಿಯು ಹಾಗೂ ಸಿಪಿಐ(ಎಂ) ಕಾರ್ಯದರ್ಶಿ ಜಿ. ರಾಮಕೃಷ್ಣ ಮಾತನಾಡಿದರು. ನೇತೃತ್ವವನ್ನು ಪುಟ್ಟಮಾದು, ಕೆ. ಬಸವರಾಜು, ಸುರೇಂದ್ರ, ಕೆ.ಹನುಮೇಗೌಡ, ಹನುಮೇಶ್, ಸರೋಜಮ್ಮ, ಶಾಂತಮ್ಮ, ಶಿವಮಲ್ಲು, ಶಂಕರಪ್ಪ, ದೇವಿ, ಕುಮಾರಿ, ಸುನಿತ, ಪ್ರೇಮಕುಮಾರಿ, ಕೃಷ್ಣೇಗೌಡ, ಯಶವಂತ, ಟಿ.ಹೆಚ್. ಆನಂದ, ಕೃಷ್ಣ, ಲಿಂಗರಾಜು, ಮೂರ್ತಿ ವಹಿಸಿದ್ದರು.



ನಗರ–ಕ್ಯಾಂಪುಗಳಿಗೆ, ನಾಲೆಗೆ ನೀರು ಕೊಡಿ– ಭತ್ತಕ್ಕೆ ಬೆಂಬಲ ಬೆಲೆಕೊಡಿ ಸಿಪಿಐ(ಎಂ) ಸಿಂಧನೂರು ಸಮ್ಮೇಳನ ಆಗ್ರಹ

14–11–2011 ರಂದು ಎ.ಪಿಎಂ.ಸಿ. ಯ ರೈತ ಭವನದಲ್ಲಿ ಭಾರತ ಕಮ್ಯುನಿಷ್ಟ ಪಕ್ಷ (ಮಾರ್ಕ್ಸವಾದಿ) 8ನೇ ಸಿಂಧನೂರು ತಾಲೂಕಾ ಸಮ್ಮೇಳನ ನಡೆಯಿತು. ಮಾರ್ಗದರ್ಶಕರಾಗಿ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ ಭಾಗ ವಹಿಸಿದ್ದರು. ಜಿಲ್ಲೆಯ ಮುಖಂಡರಾದ ಮಲ್ಲಯ್ಯ ಜಾಲಹಳ್ಳಿ, ಕಾ॥ ಕರಿಯಪ್ಪ ಹಚ್ಚೊಳ್ಳಿ ಇದ್ದರು.

ಧ್ವಜಾರೋಹಣವನ್ನು ಎಂ. ಗೋಪಾಲಕೃಷ್ಣ ಮಾಡಿದರು. ಶೇಕ್ಷಾಖಾದ್ರಿ ಸ್ವಾಗತಿಸಿದರು. ದೇವೆಂದ್ರಗೌಡ ಅಗಲಿದ ಹುತಾತ್ಮ ಸಂಗಾತಿಗಳು, ಗಣ್ಯರಿಗೆ ಶ್ರದ್ಧಾಂಜಲಿ ನಿರ್ಣಯ ಮಂಡಿಸಿದರು. ಸಭೆ ಒಂದು ನಿಮಿಷ ಶ್ರದ್ಧಾಂಜಲಿ ಸಲ್ಲಿಸಿತು.

ನಿತ್ಯಾನಂದ ಸ್ವಾಮಿ ಸಮ್ಮೇಳನವನ್ನು ಉದ್ಘಾಟಿಸಿದರು. ಹೆಚ್.ವಿ. ಗುಡಿ, ದೇವೆಂದ್ರಗೌಡ, ರೇಣುಕಮ್ಮ ಈ ಮೂರು ಜನರ ಅಧ್ಯಕ್ಷ ಮಂಡಳಿ ಸಮ್ಮೇಳನದ ಕಲಾಪ ನಡೆಸಿಕೊಟ್ಟಿತು..

ಕಾರ್ಯದರ್ಶಿ ಶೇಕ್ಷಾ ಖಾದ್ರಿಯವರು ವರದಿ ಮಂಡಿಸಿದರು. ವರದಿಯ ಮೇಲೆ ಸುಧೀರ್ಘ ಚರ್ಚೆ ನಡೆಯಿತು. ಚರ್ಚೆಗೆ ಉತ್ತರಿಸಲಾಯಿತು. ಕರಡು ವರದಿ ಅಂಗಿಕಾರವಾಯಿತು.

ನೂತನ ಸಮಿತಿ

ನರಸಿಂಹಪ್ಪ, ಹೆಚ್.ವಿ. ಗುಡಿ, ನಾರಾಯಣ ಕಿಲ್ಲೇದ, ಯಂಕಪ್ಪ ಅಪ್ಪಣ್ಣ ಕಾಂಬ್ಳೆ, ಆದನಗೌಡ, ಹನುಮಂತಪ್ಪ ಮ್ಯಾಗಳಮನಿ, ಜೈನಮ್ಮ, ಶೇಖಮ್ಮ, ಪಾರ್ವತಮ್ಮ, ಅಂಬಮ್ಮ ಈ ಹನ್ನೊಂದು ಜನ ನೂತನ ಸಮಿತಿಗೆ ಆಯ್ಕೆಯಾದರು. ನರಸಿಂಹಪ್ಪ ಈ ನೂತನ ಸಮಿತಿಯ ಕಾರ್ಯದಶಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು.

ಗೊತ್ತುವಳಿಗಳು

1) ಭತ್ತಕ್ಕೆ ಬೆಂಬಲ ಬೆಲೆ ರೂ. 2000/– ನಿಗದಿ ಪಡಿಸಬೇಕು.
2) ತುಂಗಭದ್ರಾ ಎಡದಂಡೆ ನಾಲೆಗೆ ಸಮರ್ಪಕ ನೀರು ಹರಿಸಬೇಕು.
3) ಸಮರ್ಪಕವಾಗಿ ಉದ್ಯೋಗ ಖಾತ್ರಿ ಜಾರಿಗೊಳಿಸಿ ವಲಸೆ ಹೋಗುವದನ್ನು ತಪ್ಪಿಸಬೇಕು.
4) ನಗರ ಮತ್ತು ಗ್ರಾಮೀಣ ಕ್ಯಾಂಪುಗಳಿಗೆ ಮೂಲಭೂತ ಸೌಕರ್ಯ– ಶಾಶ್ವತ ಶುದ್ಧ ಕುಡಿಯುವ ನೀರು ಪೂರೈಸಬೇಕು.
5) ನಿವೇಶನ ಮತ್ತು ವಸತಿಗಳನ್ನು ಬಡವರಿಗೆ ಒದಗಿಸ ಬೇಕು... ಇತ್ಯಾದಿ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು.

ವರದಿ:– ನರಸಿಂಹಪ್ಪ

ಸಂಪಾದಕೀಯ

ಪರಿಹಾರ ಪ್ರಚೋದನೆಯಲ್ಲ

ಕರ್ನಾಟಕ ಮತ್ತು ಮಹಾರಾಷ್ಟ್ರದ ಜನತೆಯನ್ನು ಎತ್ತಿ ಕಟ್ಟುವ ಪ್ರಯತ್ನಗಳು ಮತ್ತೇ ನಡೆದಿರುವುದು ಶೋಚನೀಯ. ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ॥ ಚಂದ್ರಶೇಖರ ಕಂಬಾರರು ಭಾಷಾ ಕಲಿಕೆಯ ಬಗೆಗೆ ಆಡಿದರೆನ್ನಲಾಗುತ್ತಿರುವ ಮಾತುಗಳಿಗೆ ಶಿವಸೇನಾ ನಾಯಕ ಬಾಳಾಠಾಕ್ರೆ 'ಸೊಂಟ ಮುರಿಯಿರಿ' ಎಂಬಂತಹ ಪ್ರಚೋದನಾತ್ಮಕ ಉದ್ಧಟತನದ ಮಾತುಗಳು ನೆರೆಹೊರೆಯ ಭಾಷಾ ಬದುಕಿನ ಸಾಮರಸ್ಯಕ್ಕೆ ಧಕ್ಕೆ ತರುವಂತಹವು. ಇಂತಹ ಪ್ರಯತ್ನಗಳು ಸತತ ನಡೆಯುತ್ತಿರುವುದು ಹಾನಿಕಾರಕ, ಖಂಡನೀಯ.

ಗಡಿ– ಭಾಷೆ ನೀರಿನ ಹಂಚಿಕೆಯಂತಹ ಪ್ರಶ್ನೆಗಳನ್ನೆತ್ತಿ ಜನತೆಯನ್ನು ಪ್ರಚೋದಿಸಿ ರಾಜಕೀಯ ದುರ್ಲಾಭ ಹೊಡ್ಡೆಯುವ ಪ್ರಯತ್ನಗಳು ಹಿಂದಿನಿಂದಲೂ ನಡೆಯುತ್ತಲೇ ಬಂದಿವೆ. ಕರ್ನಾಟಕ ಮಹಾರಾಷ್ಟ್ರದ ಗಡಿವಿವಾದದ ಭಾಗವಾಗಿ ಬೆಳಗಾಂ ಸುತ್ತ ವಿವಾದಗಳು ಏಳುತ್ತಲೇ ಇವೆ. ಘರ್ಷಣೆಗಳು ನಡೆದಿವೆ. ಇಂತಹ ಭಾವೋನ್ಮಾದ ವಿಭಜಕತೆಯನ್ನೇ ರಾಜಕೀಯ ಬಂಡವಾಳದ ನೆಲೆಯಾಗಿ ಬಳಸಲಾಗುತ್ತಿದೆ. ಇತ್ತೀಚೆಗೆ ಎದ್ದಿರುವ ವಿವಾದದಲ್ಲಿ ಎಂ.ಇ.ಎಸ್. ರಾಜ್ಯೋತ್ಸವದ ದಿನದಂದು ಕರಾಳ ದಿನಾಚರಣೆ ಮಾಡಿದ್ದು ದುರುದ್ದೇಶದಿಂದಲೇ ಕೂಡಿದೆ. ಇದು ತುಂಬಾ ತಪ್ಪುಕ್ರಮ. ಇಂತಹದ್ದನ್ನು ರಾಜಕೀಯವಾಗಿಯೇ ಎದುರಿಸಬೇಕೇ ವಿನಃ ಭಾಷಾಂಧತೆ ನೆಲೆಯಲ್ಲಿ ಅಲ್ಲ. ಕ.ರ.ವೇ.ಯ ಇಂತಹ ಪ್ರಯತ್ನಗಳು ಭಾಷಾಂಧ ಸಂಕುಚಿತ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತವೆ. ಹಾಗೆಯೇ ರಾಜ್ಯದ ಬಿಜೆಪಿ ಸರಕಾರವೂ ಎಂ.ಇ.ಎಸ್. ಸೃಷ್ಟಿಸುವ ಸಮಸ್ಯೆಗಳಿಗೆ ರಾಜಕೀಯವಾಗಿ ಕ್ರಮವಹಿಸಬೇಕೇ ಹೊರತು ಮಹಾನಗರ ಪಾಲಿಕೆಯನ್ನೇ ವಿಸರ್ಜಿಸುವಂತಹ ಕ್ರಮಗಳು ಪರಿಹಾರ ತರುವುದಿಲ್ಲ.ಬದಲಾಗಿ ಭಾಷಾ ಸಂಕುಚಿತವಾದಿಗಳು ನಿರೀಕ್ಷಿಸುವಂತೆ ಅವರನ್ನೇ ಬಲಪಡಿಸುತ್ತವೆ.

ಇದೇ ಹೊತ್ತಿನಲ್ಲಿ ನಾಡಿನ ಸಮಗ್ರತೆ, ಸಾಮರಸ್ಯತೆಗೆ ಧಕ್ಕೆ ತರುವ ಯಾವುದೇ ಪ್ರಯತ್ನಗಳನ್ನು ದೃಢತೆಯಿಂದ ಎದುರಿಸಬೇಕು ಎಂಬುದು ಅಷ್ಟೇ ಮಹತ್ವದ್ದಾಗಿದೆ.

ಭಾಷಾವಾರು ಪ್ರಾಂತ್ಯಗಳ ರಚನೆಯ ಸಂದರ್ಭದಲ್ಲೇ ಗಡಿ ರಚನೆಯಾಗಿ ಹೋಗಿದೆ. ಕೆಲವು ಸಮಸ್ಯೆಗಳು ಉಳಿದಿವೆಯಾದರೂ ಪ್ರಸಕ್ತವಾಗಿ ಒಂದೊಂದು ರಾಜ್ಯಕ್ಕೂ ಮರು ಹಂಚಿಕೆ ಕಾಯಕ ಸಾಧುವಲ್ಲ. ಪ್ರಮುಖ ಪ್ರಶ್ನೆಯೆಂದರೆ ಅಲ್ಲಿರುವ ಮರಾಠಿ ಹಾಗೂ ಕನ್ನಡ ಭಾಷಿಕರ ಮತ್ತು ಗಡಿನಾಡಿನ ಸಮಸ್ಯೆಗಳನ್ನು ವಿವರವಾಗಿ ಪರಿಶೀಲಿಸಿ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು. ಗಡಿನಾಡಿನ ಜನತೆ ಕುಡಿಯುವ ನೀರು, ರಸ್ತೆ, ವಿದ್ಯುತ್, ಮನೆ ಇಲ್ಲದಿರುವಿಕೆಯಂತಹ ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಉದ್ಯೋಗ ಹೀನತೆ, ವಲಸೆ ನಿತ್ಯದ ಮಾತಾಗಿದೆ. ಜೊತೆಗೆ ಶಿಕ್ಷಣ ಪಡೆಯುವಲ್ಲಿ, ಭಾಷೆ ಕಲಿಕೆಯಲ್ಲಿ ಸಮಸ್ಯೆಗಳವೆ. ಇವುಗಳತ್ತ ಗಮನ ಹರಿಸುವುದು ಅತ್ಯಗತ್ಯ. ಆ ಭಾಗದಲ್ಲಿರುವ, ಕರ್ನಾಟಕದಲ್ಲಿ ವಾಸಿಸುವ ಯಾರೇ ಆಗಲಿ, ಅವರದ್ದೇ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಲು ಮುಕ್ತ ಅವಕಾಶ ಇರಬೇಕು. ಇದು ಪ್ರಜಾಸತ್ತಾತ್ಮಕ ಮೂಲಭೂತ ಹಕ್ಕಾಗಿದೆ. ಇದನ್ನು ನಿರಾಕರಿಸುವ ಹಕ್ಕು ಯಾರಿಗೂ ಇಲ್ಲ. ಆದ್ದರಿಂದ ಕನ್ನಡ, ಮರಾಠಿ ಶಾಲೆಗಳನ್ನು ಗಡಿಯ ಎರಡೂ ಬದಿಯಲ್ಲಿಯೂ ಸ್ಥಾಪಿಸಿ ಶಿಕ್ಷಣ ನೀಡುವುದು ಕರ್ನಾಟಕ ಮಹಾರಾಷ್ಟ್ರ ಸರಕಾರಗಳ ಆದ್ಯ ಕರ್ತವ್ಯ.

ಈ ಸಂದರ್ಭದಲ್ಲಿ ಸಾಮರಸ್ಯ ಮೂಡಿಸಲು ಉಭಯ ಸರ್ಕಾರಗಳು ಸಂಘಟನೆ–ವ್ಯಕ್ತಿಗಳು ಪ್ರಯತ್ನಕ್ಕೆ ಮುಂದಾಗಲಿ. ಜನರ ಗಮನ ಗಡಿ–ಭಾಷಾಂಧತೆಯತ್ತ ಸೆಳೆದು ಹಾದಿ ತಪ್ಪಿಸುವ ಕೃತ್ಯಗಳನ್ನು ಕೈಬಿಡಲಿ. ಜನತೆಯೂ ಇಂತಹ ಹುನ್ನಾರಗಳನ್ನು ವಿಫಲಗೊಳಿಸಲಿ.

*

ಕೋಮುವಾದಿ ಹಿಂಸೆ ವಿರೋಧಿ ಮಸೂದೆ ವಿರೋಧಿಸಿ ಪೊಳ್ಳು ಪ್ರಚಾರ

ನವೆಂಬರ್ 23 ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ಹಿಂದುತ್ವಪರ ಸಂಘಟನೆಗಳು ಹಮ್ಮಿಕೊಂಡಿದ್ದ ಭಾರೀ ಹಿಂದೂ ಸಮಾವೇಶದಲ್ಲಿ ಭಾಷಣಕಾರರು ಆಡಿದ ಮಾತುಗಳು ಅಪ್ಪಟ ಸುಳ್ಳು ಎಂಬುದಾಗಿ 'ದಿ ಹಿಂದೂ' ಪತ್ರಿಕೆಯ ವರದಿಗಾರ್ತಿ ಅನಿತಾ ಶೇಟ್ ನವೆಂಬರ್ 25ರ ಪತ್ರಿಕೆಯಲ್ಲಿ ಬರೆದಿದ್ದಾರೆ. (ಮಂಗಳೂರು ಆವೃತ್ತಿಯ ಪತ್ರಿಕೆಯ ಪುಟ 7ರಲ್ಲಿ) ಅದರ ಅನುವಾದ ಕೆಳಗಿನದ್ದು.

ಮಂಗಳೂರು: ಕೋಮುವಾದಿ ಹಾಗೂ ಸಂಘಟಿತ ಹಿಂಸೆ ಮಸೂದೆ 2011ರ ವಿರುದ್ಧವಾಗಿ ಬುಧವಾರ ಹಿಂದೂ ಹಿತರಕ್ಷಣಾ ವೇದಿಕೆಯಿಂದ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಭಾಷಣಕಾರರು ಮುಂದಿಟ್ಟ ಹಲವಾರು ವಾದಗಳು–ಮಸೂದೆಯನ್ನು ಮೇಲ್ನೋಟದಲ್ಲಿ ಪರಿಶೀಲಿಸಿದರೂ ತೀರಾ ಎಳೆದುತಂದಂತೆ ಕಂಡು ಬರುತ್ತದೆ.

ವಿಶ್ವಹಿಂದೂ ಪರಿಷತ್, ಬಜರಂಗದಳ, ಶ್ರೀರಾಮಸೇನೆ, ಹಿಂದೂ ಜಾಗರಣ ಸಮಿತಿ ಇತ್ಯಾದಿ ಬಲಪಂಥೀಯ ಸಂಘಟನೆಗಳು ಕಳೆದೊಂದು ವರ್ಷದಿಂದ ಪ್ರಸ್ತಾಪಿತ ಮಸೂದೆಯ ಬಗ್ಗೆ ಪ್ರತಿಭಟನೆ ನಡೆಸುತ್ತಿದ್ದು, ಸದ್ರಿ ಮಸೂದೆಯು 'ಹಿಂದೂ ವಿರೋಧಿ' ಮತ್ತು ಅದರಿಂದಾಗಿ ಹಿಂದೂಗಳಿಗೆ ಕಾನೂನು ರಕ್ಷಣೆ ಇರುವುದಿಲ್ಲ ಎಂದು ಹೇಳುತ್ತಾ ಬಂದಿವೆ.

ಈ ಮಸೂದೆ ಬಂದದ್ದೇ ಆದರೆ ಭಾರತೀಯ ದಂಡ ಸಂಹಿತೆಯನ್ನೊಳಗೊಂಡು ದೇಶದ ಯಾವ ಕಾನೂನುಗಳನ್ವಯ ಯಾವೊಬ್ಬ ಮುಸ್ಲಿಮನ ಮೇಲೆ ಕಾನೂನು ಕ್ರಮವನ್ನು ಜರಗಿಸಲಾಗದು ಎಂದು ಬುಧವಾರದ ಪ್ರತಿಭಟನೆ ವೇಳೆ ಮಾತನಾಡಿದ ಇಬ್ಬರು ಭಾಷಣಕಾರರು ವಾದ ಮಂಡಿಸಿದರು. ವಜ್ರದೇಹಿ ಮಠದ ಮುಖ್ಯಸ್ಥರಾದ ರಾಜಶೇಖರಾನಂದ ಸ್ವಾಮಿಗಳು, ಈ ಮಸೂದೆಯಂತೆ ಹಿಂದೂಗಳು ನೀಡಿದ ದೂರನ್ನು ಪೋಲೀಸರು ನೋಂದಣಿ ಮಾಡಬೇಕಾಗಿಲ್ಲ ಎಂದೂ ಹೇಳಿದರು.

ಆರೆಸ್ಸೆಸ್‌ನ ದಕ್ಷಿಣ ಮಧ್ಯಮ ಕ್ಷೇತ್ರೀಯ ಸಂಪರ್ಕ ಪ್ರಮುಖರಾದ ಕಲ್ಲಡ್ಕ ಪ್ರಭಾಕರ ಭಟ್ಟರು, ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿಯೊಬ್ಬನು ಬಾಡಿಗೆಗೆ ಮನೆಯನ್ನು ಅಪೇಕ್ಷಿಸಿದಾಗ ಮನೆ ಮಾಲಿಕನು ತಾನು ಸಸ್ಯಹಾರಿಗೆ ಮಾತ್ರ ಬಾಡಿಗೆ ಕೊಡುತ್ತೇನೆ ಎಂದು ಹೇಳಿದ್ದೇ ಆದಲ್ಲಿ, ತನ್ನ ಭಾವನೆಗಳನ್ನು ನೋಯಿಸಲಾಗಿದೆ ಎಂದು ಮೊದಲನೆಯವನು ಪೋಲೀಸರಿಗೆ ದೂರು ಸಲ್ಲಿಸಲು ಮಸೂದೆ ಅವಕಾಶ ಕೊಡುತ್ತದೆ ಎಂದು ಹೇಳಿದರು. ಆದರೆ ಮಸೂದೆಯ ವ್ಯಾಪ್ತಿಯಲ್ಲಿ ಅಂಥದ್ದೊಂದು ಅಪರಾಧವೇ ಇರುವುದಿಲ್ಲ.

ಈ ಮಸೂದೆ ಅನುಮೋದಿತವಾದ ಬಳಿಕ, ಅಲ್ಪಸಂಖ್ಯಾತರು ಚೈನು ಕಿತ್ತುಕೊಂಡರೂ ಇಲ್ಲವೇ 'ಲವ್ ಜಿಹಾದ್' ಎನ್ನಲಾಗುವ ಪರಿಸ್ಥಿತಿಗೆ ಬಲಿ ಮಾಡಿದರೂ ಅವರ ವಿರುದ್ಧ ಪೋಲೀಸರು ದೂರು ದಾಖಲು ಮಾಡುವಂತಿಲ್ಲ ಎಂದು ಭಟ್ಟರು ತಿಳಿಸಿದರು.

ಭಾರತೀಯ ದಂಡ ಸಂಹಿತೆ (ಐಪಿಸಿ) ಯಂತೆ ಅಪರಾಧದ ಸನ್ನಿವೇಶಕ್ಕನುಗುಣವಾಗಿ ಕಳವು ಹಾಗೂ ದರೋಡೆಗೆ ಸಂಬಂಧಿಸಿದ ವಿವಿಧ ಸೆಕ್ಷನುಗಳಲ್ಲಿ ಚೈನು ಕಿತ್ತುದನ್ನು ದೂರಾಗಿ ದಾಖಲಿಸಬಹುದು. 'ಲವ್ ಜಿಹಾದ್' ಆರೋಪಗಳನ್ನು ಈಗಾಗಲೇ ತನಿಖೆಗೊಳಪಡಿಸಲಾಗಿದೆ ಮತ್ತು ಯಾವುದೇ ಸಮೂಹವಾಗಲೀ ವ್ಯಕ್ತಿಯಾಗಲೀ ಹುಡುಗಿಯರನ್ನು ಇಲ್ಲವೇ ಮಹಿಳೆಯರನ್ನು ಮದುವೆಗೆ ಬಲತ್ಕರಿಸುವ ಪ್ರಯತ್ನ ಅಲ್ಲಿ ಇರುವುದಿಲ್ಲವೆಂದು ಎಪ್ರಿಲ್ 2010 ರಲ್ಲಿ ಕರ್ನಾಟಕ ಪೋಲೀಸ್ ಹೈಕೋರ್ಟಿಗೆ ವರದಿ ಮಾಡಿದೆ.

ಪ್ರಸ್ತಾವಿತ ಮಸೂದೆಯು ಕೋಮುವಾದಿ ಮತ್ತು ಸಂಘಟಿತ ಹಿಂಸೆಯನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಮತ್ತು ಕಾಯ್ದೆಯಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿ ಕರ್ತವ್ಯದ ಬಗ್ಗೆ ನಿರ್ಲಕ್ಷ್ಯ ತೋರುವ ಅಪರಾಧಿಗಳ ಮೇಲೆ ಫಿರ್ಯಾದು ಕೈಗೊಳ್ಳಲು ಅವಕಾಶ ಕೊಡುತ್ತದೆ.

ಕಾಯಿದೆಯಲ್ಲಿ ಅಪರಾಧಗಳಿಗೆ ಸಂಬಂಧಿಸಿದ ಅಧ್ಯಾಯವು ಲೈಂಗಿಕ ಧಾಳಿ, ದ್ವೇಷದ ಪ್ರಚಾರ, ಸಂಘಟಿತ ಕೋಮುವಾದೀ ಹಾಗೂ ನಿರ್ದೇಶಿತ ಹಿಂಸೆ ಮತ್ತು ಕಾಯ್ದೆಯಲ್ಲಿನ ಅಪರಾಧಗಳಿಗೆ ಬೆಂಬಲವೀಯುವುದನ್ನು ಒಳಗೊಂಡು ವಿವರಣೆ ನೀಡುತ್ತದೆ. ಮಸೂದೆ ಪ್ರಕಾರ ಕೋಮುವಾದೀ ಮತ್ತು ನಿರ್ದೇಶಿತ ಹಿಂಸೆ ಎಂದರೆ, "ಯಾವುದೇ ಕೃತ್ಯ ಅಥವಾ ಕೃತ್ಯಗಳ ಸರಣಿಯು – ಅನಿರೀಕ್ಷಿತವಿರಲಿ ಯೋಚಿತವಿರಲಿ ಅದು ಒಬ್ಬನು ಯಾವುದಾದರೂ ಗುಂಪಿಗೆ ಸೇರಿದ್ದಾನೆಂಬ ಕಾರಣಕ್ಕೇ ಆಗಿದ್ದು ಆ ವ್ಯಕ್ತಿಯ ಮೇಲೆ ಗಾಯ ಅಥವಾ ಆತನ ಸೊತ್ತಿನ ಮೇಲೆ ಹಾನಿ ಆಗಿರುತ್ತದೆ. ಹಿಂದೂಗಳು ದೈಹಿಕವಾಗಿ ಗಾಯಗೊಂಡರೂ ಅಥವಾ ಸೊತ್ತಿನ ಹಾನಿಗೊಳಗಾದರೂ ಒಬ್ಬ ಬಲಿಪಶುವಾಗಿ ಪರಿಗಣಿಸಲ್ಪಡುವುದಿಲ್ಲ ಎಂದು ಭಟ್ಟರು ಹೇಳಿದರು. ಆದರೆ ಮಸೂದೆಯ ಪ್ರಕಾರ ನಿರ್ದೇಶಿತ ಹಿಂಸೆಯ ಪರಿಣಾಮವಾಗಿ ಯಾವನೇ ವ್ಯಕ್ತಿಯು ದೈಹಿಕ, ಮಾನಸಿಕ ಅಥವಾ ಆರ್ಥಿಕ ಹಾನಿಗೊಳಗಾದಲ್ಲಿ ಆತನು ಅಥವಾ ತನ್ನ ಸೊತ್ತಿನ ಹಾನಿಗೊಳಪಟ್ಟವನು" ಬಲಿಪಶು ಎಂದು ಪರಿಣಿತನಾಗುತ್ತಾನೆ. ಸೆಕ್ಷನ್ 87 ರಂತೆ ಎಲ್ಲ ಭಾಧಿತರೂ ಯಾವ ಗುಂಪಿಗೆ ಸೇರಿದವರೆಂಬ ಪರಿಗಣನೆಯಿಲ್ಲದೆ ಕಾನೂನು ಪ್ರಕಾರ ಪರಿಹಾರ ಮತ್ತು ಪುನರ್ವಸತಿಗೆ ಅರ್ಹರಾಗಿರುತ್ತಾರೆ.

*

ಕಾರ್ಟೂನ್ ಕಾರ್ನರ್



ಕೃಪೆ : ಪ್ರಜಾವಾಣಿ

ಜನರನ್ನು ಕತ್ತಲಲ್ಲಿಟ್ಟು ರೈತರ ಭೂಮಿ ದೋಚುವ ಬಿಜೆಪಿ ಸರ್ಕಾರದ ಬಗೆಗೆ ಎಚ್ಚರ !!

ಗದಗ್‌ನಲ್ಲಿ ರಾಜ್ಯಮಟ್ಟದ ಭೂಸ್ವಾಧೀನ ವಿರೋಧಿ ಸಮಾವೇಶದ ಕರೆ

" ಸುದೀರ್ಘ ಕಾಲ ಹೋರಾಟ ಮಾಡಿ ಲಕ್ಷಾಂತರ ಜನರ ತ್ಯಾಗ ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಬದ್ಧರಾದ ನಾವು ದೇಶದ ಸ್ವಾವಲಂಬನೆ-ಸ್ವಾತಂತ್ರ್ಯಕ್ಕೆ ಚ್ಯುತಿ ತರುವ ಯಾವ ಪ್ರಯತ್ನವನ್ನೂ ಸಹಿಸಲಾರೆವು.

ಜಾಗತೀಕರಣದ ಪ್ರಕ್ರಿಯೆಯಲ್ಲಿ ಸಂಪನ್ಮೂಲಗಳನ್ನು ಲೂಟಿ ಮಾಡಲು ದೇಶದೊಳಗೆ ಬಂದು ನಮ್ಮ ನೆಲ-ಜಲಗಳ ಖರೀದಿಗೆ ನಿಂತ ಬಹುರಾಷ್ಟ್ರೀಯ ಕಂಪನಿಗಳಿಗೆ ಭೂಮಿ ಕೊಡಲು ನಾವು ಸಿದ್ಧರಿಲ್ಲ.

ಕೃಷಿ ವಲಯದಲ್ಲಿ ವಿದೇಶಿ ಬಂಡವಾಳದ ನೇರ ಹೂಡಿಕೆಗೆ ಮತ್ತು ಕಾರ್ಪೋರೇಟ್ ಕೃಷಿಗೆ ಅವಕಾಶ ಕಲ್ಪಿಸುವ ಕೇಂದ್ರ-ರಾಜ್ಯ ಸರಕಾರದ ನಿಲುವಿನಿಂದಾಗಿ ರೈತರು ತಮ್ಮ ಜೀವನಾಧಾರದ ಭೂಮಿಯನ್ನು ಕಳೆದುಕೊಂಡು ಕಾರ್ಪೋರೇಟ್ ಕಂಪನಿಗಳ ಗುಲಾಮರಾಗುವುದು ನಿಶ್ಚಿತ. ಇಲ್ಲಿಯ ಭೂಮಿಯನ್ನು ವಿದೇಶಿ ಕಂಪನಿಗಳಿಗೆ ಪರಭಾರೆ ಮಾಡಿ ರೈತರನ್ನು ಗುಲಾಮರನ್ನಾಗಿ ಮಾಡುವ ಸರಕಾರದ ನಿಲುವಿಗೆ ನಮ್ಮ ಧಿಕ್ಕಾರ! ಬಹುರಾಷ್ಟ್ರೀಯ ಕಂಪನಿಗಳಿಗಾಗಿ ಕೃಷಿ ಯೋಗ್ಯ ಭೂಮಿಯ ಸ್ವಾಧೀನಕ್ಕೆ ಅವಕಾಶ ನೀಡೆವು.

ನಮಗಾಗಿ, ನಮ್ಮ ನಾಡಿಗಾಗಿ, ನಮ್ಮ ಮುಂದಿನ ಪೀಳಿಗೆಗಾಗಿ ಈ ತನಕ ಸಲುಹಿಕೊಂಡು ಬಂದ ಈ ನಮ್ಮ ಭೂಮಿಯನ್ನು ರಕ್ಷಿಸಿಕೊಳ್ಳಲು ಭೂಸ್ವಾಧೀನಕ್ಕೆ ಮುಂದಾಗುವ ಸರಕಾರಗಳ ವಿರುದ್ಧ ಪ್ರಾಣದ ಹಂಗು ತೊರೆದು ಶಾಂತಿಯುತ ಹೋರಾಟ ಮಾಡಲು ನಾವು ಬದ್ಧರಾಗಿದ್ದೇವೆ."

ಇಂಥದೊಂದು ಪ್ರಮಾಣವನ್ನು ಸಮಾವೇಶದ ಮುಂದೆ ಓದುವ ಮೂಲಕ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೈಸ್ವಾಮಿ ಅಕ್ಟೋಬರ್ 17, 2011 ರಂದು ಗದುಗಿನಲ್ಲಿ ನಡೆದ ರಾಜ್ಯಮಟ್ಟದ ಭೂಸ್ವಾಧೀನ ವಿರೋಧಿ ಸಮಾವೇಶವನ್ನು ಅರ್ಥಪೂರ್ಣವಾಗಿ ಉದ್ಘಾಟಿಸಿ ಮಾತನಾಡಿದರು.

ಭೂಸ್ವಾಧೀನ ವಿರೋಧಿ ಸಂಗ್ರಾಮ ಸಮಿತಿ ನೇತೃತ್ವದಲ್ಲಿ ನಡೆದ ಸಮಾವೇಶ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ, ಡಿ.ಎಸ್.ಎಸ್.(ಅಂಬೇಡ್ಕರ್‌ವಾದ)ನ ರಾಜ್ಯ ನಾಯಕ ಮಾವಳ್ಳಿ ಶಂಕರ, ರೈತ ಧುರೀಣ ಬಾಬಾಗೌಡ ಪಾಟೀಲ ಭಾಗವಹಿಸಿ ಮಾತನಾಡಿ, ಸರಕಾರಗಳು ಬೇಕಾಬಿಟ್ಟಿಯಾಗಿ" ರೈತರ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳುವುದನ್ನು ತೀವ್ರವಾಗಿ ಟೀಕಿಸಿ, ತರಾಟೆಗೆ ತೆಗೆದುಕೊಂಡರು.

ಸಮಾರಂಭದ ಅಧ್ಯಕ್ಷತೆಯನ್ನು ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ತೋಂಟದಾರ್ಯ ಮಠ ಡಂಬಳ-ಗದಗ ಇವರು ವಹಿಸಿ ಮಾತನಾಡಿ, ಜನರನ್ನು ಕತ್ತಲಲ್ಲಿಟ್ಟು ಭೂಮಿ ದೋಚುತ್ತಿರುವ ರಾಜ್ಯ ಸರಕಾರ ಜನರ ಮುಂದೆ ಹಸಿ ಸುಳ್ಳು



ಹೇಳುತ್ತಿದೆ. ಸಣ್ಣ, ಕೃಷಿಪೂರಕ ಕೈಗಾರಿಕೆ ಬರಲು ನಮ್ಮ ತಕರಾರಿಲ್ಲ. ನಮ್ಮ ನಿಸರ್ಗ.ಜನಪದ ಸಂಸ್ಕೃತಿಗೆ ಪೂರಕ ಕೈಗಾರಿಕೆ ಬರಲಿ ಎಂಬುದು ನಮ್ಮಾಶಯವಾಗಿದೆ. ಪೋಸ್ಕೋದಂತಹ ಬೃಹತ್ ಕೈಗಾರಿಕೆ ತಂದು ಇಲ್ಲಿನ ಉಷ್ಣತೆ ಹೆಚ್ಚಿಸಿ ಜನರ ಬಲಿ ಪಡೆಯೋದಕ್ಕೆ, ಕಪ್ಪತಗುಡ್ಡದಲ್ಲಿ ಲಭ್ಯವಿರುವ

ಇಂಟ್ರೋ: ರಾಜ್ಯ ಬಿಜೆಪಿ ಸರ್ಕಾರ ರೈತರ ಭೂಮಿ ಕಬಳಿಸಲು ಟೊಂಕ ಕಟ್ಟಿ ನಿಂತು ಬಿಟ್ಟಿದೆ. ಈ ಉದ್ದೇಶಕ್ಕೆ ನಾನಾ ಯೋಜನೆಗಳು. ಜೊತೆಗೆ ಬಂಡವಾಳಿಗರ ಸಕಲ ಮನೋಭಿಲಾಷೆ ಈಡೇರಿಸುವ ತವಕ. ಜನರು ರೈತರು ನಡೆಸುವ ಪ್ರತಿಭಟನೆಗಳಿಗೆ ಲೆಕ್ಕವೇ ಇಲ್ಲ. ಹೇಗಾದರೂ ಸರಿ ಮತ್ತೆ ಮತ್ತೆ ಭೂ ಕಬಳಿಕೆ ಯೋಜನೆಯನ್ನು ಮುಂದೊತ್ತುವ ಆಸೆ.

ಗದಗ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಪೋಸ್ಕೋ ಯೋಜನೆಯ ಪ್ರಶ್ನೆಯಲ್ಲಿಯೂ ಇಂಥದ್ದೇ ಪ್ರವೃತ್ತಿ. ಸರ್ಕಾರ ಜನಕ್ಕೆ ಕೊಟ್ಟ ಮಾತನ್ನು ಮರೆತು ಮತ್ತೆ ಮತ್ತೆ ಪೋಸ್ಕೋ ಭೂತವನ್ನು ಭೂ ಬಿಡುತ್ತಿದೆ. ಈ ನೀತಿಯನ್ನು ಖಂಡಿಸಿ ಗದಗನಲ್ಲಿ ನಡೆದ ಭೂಸ್ವಾಧಿನ ವಿರೋಧಿ ಸಮಾವೇಶದ ವರದಿ.

ಹೇರಳ ಅದಿರು ಸಂಪನ್ಮೂಲ

ರವೀಂದ್ರ ಹೊನವಾಡ

ದೋಚುವುದಕ್ಕೆ, ಸಿಂಗಟಾಲೂರು ಏತ ನೀರಾವರಿಯ ನೀರು ಕಬಳಿಸಲು ಹೊಂಚು ಹಾಕಿರುವ ಪೋಸ್ಕೋ ಕಂಪನಿಯಂಥ ದೈತ್ಯ ಕೈಗಾರಿಕೆ ಸ್ಥಾಪನೆಗೆ ನಾವು ಬಿಡುವುದಿಲ್ಲ ಎಂದು ಘೋಷಿಸಿದರು.

ಸರ್ಕಾರ ಸುಮ್ಮನೇ ರೈತರನ್ನು ಎತ್ತಿಕಟ್ಟೋ ಕಾರ್ಯ ಕೈಬಿಡಲಿ ಎಂದು ಎಚ್ಚರಿಸಿದರು.

ಪ್ರಾಸ್ತಾವಿಕವಾಗಿ ಸಂಗ್ರಾಮ ಸಮಿತಿ ಸಂಚಾಲಕ ಡಾ॥ ಸಿದ್ಧನಗೌಡ ಪಾಟೀಲ ಮಾತನಾಡಿದರು. ವೇದಿಕೆ ಮೇಲೆ ಶೌಕತ್ ಅಲಿ ಆಲೂರ, ರುದ್ರಮುನಿ ಆವರಗೆರೆ, ಬಿ.ಎಸ್.ಸೊಪ್ಪಿನ ಉಪಸ್ಥಿತರಿದ್ದರು. ಇನ್ನೋರ್ವ ಸಂಚಾಲಕ ಬಸವರಾಜ್ ಸೂಳಿಬಾವಿ ಎಲ್ಲರನ್ನು ಸ್ವಾಗತಿಸಿ, ಸಮನ್ವಯಗೊಳಿಸಿದರು.

ವಿಚಾರ ಗೋಷ್ಠಿಗಳು:

ಮಧ್ಯಾಹ್ನ ರೈತ-ರಾಜ್ಯ ಹಿತಾಸಕ್ತಿಯ ವಿಚಾರ ಗೋಷ್ಠಿಗಳು ನಡೆದವು.

ಕೇಂದ್ರ ಭೂಸ್ವಾಧೀನ ಮಸೂದೆ ಮತ್ತು ರೈತರ ಹಿತಾಸಕ್ತಿ ಕುರಿತು ಚಿಂತಕ ಕೆ.ಪಿ.ಸುರೇಶ್, ಕೃಷಿ ವಲಯ: ಜಾಗತಿಕ ಬಂಡವಾಳದ ಹರವಿನ ನೆಲೆಗಳು ಕುರಿತು ಅಂಕಣಕಾರ ಶಿವಸುಂದರ್, ಪೋಸ್ಕೋ ಹೋರಾಟ ಮತ್ತು ಕರ್ನಾಟಕದ ಜನ ಚಳುವಳಿಗಳ ಕುರಿತು ಪ್ರಾಧ್ಯಾಪಕ ಡಾ॥ ರಹಮತ್ ತರೀಕೆರೆ ಹಾಗೂ ಗದಗ ಜಿಲ್ಲೆ ವಾಸ್ತವ :ಆರ್ಥಿಕಾಭಿವೃದ್ಧಿಯ ಸಾಧ್ಯತೆಗಳು ಕುರಿತು ಪ್ರಾಧ್ಯಾಪಕ ಡಾ॥ ಟಿ.ಆರ್.ಚಂದ್ರಶೇಖರ ಇವರುಗಳು ವಿಷಯದ ಮಹತ್ವದ ವಿಚಾರಗಳನ್ನು ಮಂಡಿಸಿದರು.

ಅಧ್ಯಕ್ಷತೆಯನ್ನು ಹೊಸತು ಪತ್ರಿಕೆ ಸಂಪಾದಕ ಜಿ. ರಾಮಕೃಷ್ಣ ವಹಿಸಿ ಮಾತನಾಡಿ, ವಸ್ತುಸ್ಥಿತಿಯ ಭೀಕರತೆಯನ್ನು ಹೇಳಿದರು. ಇದನ್ನೆಲ್ಲ ನೆನಪಿನಲ್ಲಿಟ್ಟುಕೊಂಡು ಜನ ಚಳುವಳಿ ರೂಪಿಸಬೇಕೆಂದರು.

ಸಂಗ್ರಾಮ ಸಮಿತಿ ಸಂಚಾಲಕ ಬಿ.ಎಸ್. ಸೊಪ್ಪಿನ ಪ್ರಾಸ್ತಾವಿಕವಾಗಿ ಮಾತನಾಡಿದರು. ವೀರಣ್ಣ ಬೇವಿನಮರದ ಸ್ವಾಗತಿಸಿದರು. ಪ್ರಗತಿಪರ ಬರಹಗಾರ ಬಿ. ಪೀರಬಾಷಾ ಸಮನ್ವಯಗೊಳಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳು:


ಸಮಾವೇಶದಲ್ಲಿ ಮುಂಡರಗಿಯ ಛಾಯಾಗ್ರಾಹಕ ಮುತ್ತು ಹಾಳಕೇರಿ ಇವರ ಪೋಸ್ಕೋ ವಿರೋಧಿ ಹೋರಾಟದ ಛಾಯಾಚಿತ್ರ ಪ್ರದರ್ಶನ, ಇಪ್ಟಾ-ಸಮುದಾಯ ತಂಡಗಳ ಹೋರಾಟದ ಹಾಡುಗಳು, ಭೀಮೇಶ ತಂಡದಿಂದ 'ಭೂಮಿ ಕೊಡುವ ಮಾತಾಯಿತು' ಎಂಬ ಕಿರುನಾಟಕಗಳ ಪ್ರದರ್ಶನ ಗಮನ ಸೆಳೆದವು. ರಾಜ್ಯದ ವಿವಿಧ ಕಡೆಯಿಂದ ಬಂದ ರೈತರು, ನಾಯಕರು, ಪ್ರಗತಿಪರ ಸಂಘಟನೆಗಳು ಇದರಲ್ಲಿ ಪಾಲ್ಗೊಂಡಿದ್ದರು.

ಭೂಸ್ವಾಧೀನ ವಿರೋಧಿ ಸಮಾವೇಶ ಕಳಕಂಡ ನಿರ್ಣಯಗಳನ್ನು ಕೈಗೊಂಡಿತು.

ನಿರ್ಣಯಗಳು

* ಗದಗ ಜಿಲ್ಲೆಯಲ್ಲಿ ಪೋಸ್ಕೋ ಯೋಜನೆಯ ಭೂಸ್ವಾಧೀನ ಕೈಬಿಟ್ಟ ವಿಚಾರವನ್ನು ಗೆಜೆಟ್(ರಾಜ್ಯಪತ್ರ)ನಲ್ಲಿ ಕೂಡಲೇ ಪ್ರಕಟಿಸಬೇಕು.
* ಕೃಷಿ ವಲಯಕ್ಕಾಗಿ ನಡೆಸಲು ಉದ್ದೇಶಿಸಿರುವ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಕೈಬಿಡಬೇಕು. ಕೃಷಿ ವಲಯದಲ್ಲಿ ವಿದೇಶಿ ಬಂಡವಾಳದ ನೇರ ಹೂಡಿಕೆಗೆ ಅವಕಾಶ ಕಲ್ಪಿಸುವ ಚಿಂತನೆಯನ್ನು ವಾಪಸ್ಸು ಪಡೆಯಬೇಕು.
* ಹದಿನಾಲ್ಕು ಜಿಲ್ಲೆಗಳಲ್ಲಿ ನಡೆಸಿರುವ ಭೂಸ್ವಾಧೀನ ಪ್ರಕ್ರಿಯೆ ಕೂಡಲೇ ನಿಲ್ಲಿಸಬೇಕು.
* ಗುತ್ತಿಗೆ ಬೇಸಾಯ ಮತ್ತು ಕಾರ್ಪೋರೇಟ್ ಬೇಸಾಯಕ್ಕೆ ಅವಕಾಶ ನೀಡಬಾರದು. ಜಾಗತೀಕರಣ ಪ್ರಕ್ರಿಯೆಯಿಂದ ಕೃಷಿಯನ್ನು ಹೊರಗಿಡಬೇಕು.
* ಭೂಬ್ಯಾಂಕ್ ಯೋಜನೆ ತಕ್ಷಣ ರದ್ದುಗೊಳಿಸಬೇಕು.
* ರೈತರಿಗೆ ಮತ್ತು ಕೃಷಿಕಾರ್ಮಿಕರಿಗೆ ನಿವೃತ್ತಿ ವೇತನ ಘೋಷಿಸಬೇಕು.
* ಸಹಕಾರಿ ಮತ್ತು ಸರಕಾರಿ ಮಾರುಕಟ್ಟೆ ರೂಪಿಸಬೇಕು.

ಕುಕ್ಕೆ ಸುಬ್ರಮಣ್ಯದಲ್ಲಿ ಬ್ರಾಹ್ಮಣ ಸಮುದಾಯದವರು ಉಂಡ ಎಂಜಲು ಎಲೆಯ ಮೇಲೆ ಜನರು ಉರುಳಾಡುವ ಮಡೆ ಸ್ನಾನ ಎಂಬ ಆಚರಣೆಯಿದೆ. ಆಚರಿಸುವ ಜನರೇ ಇದನ್ನು ಬಯಸುವುದರಿಂದ ಯಾಕೆ ನಿಲ್ಲಿಸಬೇಕು ಎಂಬ ವಾದ ಮಂಡಿಸಲಾಗುತ್ತಿದೆ. ಮುಗ್ದ ಜನರು ನಿಜಕ್ಕೂ ಏನು ಬಯಸುತ್ತಿದ್ದಾರೆ ಎಂಬುದು ಬೇರೆಯದೇ ಚರ್ಚೆ. ಆದರೆ ದೇವಾಲಯದ ಆಡಳಿತ ಮಂಡಳಿಯ ಪ್ರಾಗ್ನರುಗಳು ಹಾಗೂ ರಾಜ್ಯ ಬಿಜೆಪಿ ಸರ್ಕಾರದ ಚುಕ್ಕಾಣಿ ಹಿಡಿದ ಈ ಭಾಗದ ಮುಖಂಡರು ಬಯಸುತ್ತಿರುವುದೇನು? ಅದು ನಿಜಕ್ಕೂ ನಾಚಿಕೆಗೇಡಿನ ಸಂಗತಿ



ಮಡೆಸ್ನಾನ ನಿಲ್ಲಿಸಲಾಗಿಲ್ಲ ಏಕೆ?

ವಾಸುದೇವ ಉಚ್ಚಿಲ

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಕಳೆದ ವರ್ಷದ ಷಷ್ಠಿ ಜಾತ್ರೆ ವೇಳೆ ಚರ್ಚೆಗೆ ಬಂದಿದ್ದ ಮಡೆಸ್ನಾನ ಈ ವರ್ಷವೂ ನಡೆದಿದೆ. ಮಡೆಸ್ನಾನದ ಸಾಮಾಜಿಕ ಸಾಂಸ್ಕೃತಿಕ ನೆಲೆಗಳನ್ನು ಕಳೆದ ವರ್ಷ 'ಜನಶಕ್ತಿ'ಯಲ್ಲಿ ಚರ್ಚಿಸಲಾಗಿತ್ತು. ಷಷ್ಠೀ ಜಾತ್ರೆಯ ವೇಳೆ ಮೂರು ದಿನ ಸುಬ್ರಹ್ಮಣ್ಯ ದೇವಳದ ಹೊರಾಂಗಣದಲ್ಲಿ ಬ್ರಾಹ್ಮಣರು ಉಂಡು ಎದ್ದ ಮೇಲೆ, ಎಂಜಲೆಲೆಗಳ ಮೇಲೆ ಹೊರಳಾಡಿ ದೇವಳವನ್ನು ಪ್ರದಕ್ಷಿಣೆ ಮಾಡುವ ಹರಕೆ ಸೇವೆಯೇ ಮಡೆಸ್ನಾನ. ಇದು ಹರಕೆ ಹೊತ್ತವರ ಆರೋಗ್ಯ ದೃಷ್ಟಿಯಿಂದ ಕೆಟ್ಟದೆಂದೂ, ಜಾತಿ ಪದ್ಧತಿಯ ಮೇಲು ಕೀಳುಗಳನ್ನು ಢಾಳಾಗಿ ಸಮರ್ಥಿಸುತ್ತದೆಂದೂ, ಮೂಢನಂಬಿಕೆಯಾದುದರಿಂದ ಅವೈಜ್ಞಾನಿಕವೆಂದೂ, ಸಾರ್ವಜನಿಕವಾಗಿ ಹೇಸಿಗೆ ಹುಟ್ಟಿಸುವ ವರ್ತನೆಯೆಂದೂ ಕಳೆದ ವರ್ಷದ ಜಾತ್ರೆ ಸಂದರ್ಭದಲ್ಲಿ ಸಾರ್ವಜನಿಕ ಅಭಿಪ್ರಾಯ ಮೂಡಿ ಬಂದಿತ್ತು. ಆ ಮಡೆಸ್ನಾನ ಪದ್ಧತಿಯನ್ನು ನಿಲ್ಲಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಗಿತ್ತು.

ದೇವಸ್ಥಾನದ ಆಡಳಿತ ಮಂಡಳಿಯೂ ಈ ವರ್ಷ ಮಡೆಸ್ನಾನ ಇರುವುದಿಲ್ಲವೆಂದು ಜಾತ್ರೆಗೆ ಮೊದಲೇ ಘೋಷಿಸಿತ್ತು. ಆದರೆ ಜಾತ್ರೆ ಆರಂಭವಾದಾಗ ಒತ್ತಡಗಳು ಆರಂಭವಾದವು. ಜನರ ಪಾರಂಪರಿಕ ನಂಬಿಕೆಗೆ ತಡೆಯೊಡ್ಡಿ ಅವರ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಡ್ಡಿ ನೀಡಬಾರದು ಎಂಬುದೇ ಈ ಒತ್ತಡ. ಈ ಒತ್ತಡ ಮೂಡಿ ಬರಲು ಕಾರಣಗಳು ಏನು? ಸುಬ್ರಹ್ಮಣ್ಯ ದೇವಾಲಯಕ್ಕೆ ಮಡೆಸ್ನಾನ ಹರಕೆ ನೆರವೇರಿಸುವುದರಿಂದ ಚರ್ಮ ರೋಗಕ್ಕೆ ಸಂಬಂಧಪಟ್ಟ ಕಾಯಿಲೆಗಳು ವಾಸಿಯಾಗುವುದು ಎಂಬ ನಂಬಿಕೆಯನ್ನು ದಶಕಗಳಿಂದಲೂ ಬಿತ್ತಲಾಗಿದೆ. ಈ ದೇವಳಕ್ಕೆ ಸಲ್ಲಿಸುವ ಇತರ ಪೂಜೆ ಹಾಗೂ ಹರಕೆಗಳಿಂದ, ನಾಗದೋಷದಿಂದ ಆಗಿವೆ ಎನ್ನಲಾದ ಕಾಯಿಲೆ ಕಸಾಲೆಗಳು ವಿಪತ್ತು ಸೋಲುಗಳು ನಿವಾರಣೆಯಾಗುತ್ತವೆ ಎಂಬುದನ್ನು ವ್ಯವಸ್ಥಿತವಾಗಿ ದೇವಾಲಯದ ಆಡಳಿತ ಮಂಡಳಿ ಹಾಗೂ ದ.ಕ.ಜಿಲ್ಲೆಯ ಸಂಪ್ರದಾಯವಾದಿ ಸಂಘಟನೆಗಳು ಪ್ರಚಾರ ಮಾಡುತ್ತಿವೆ. ರಾಷ್ಟ್ರೀಯ ಮಟ್ಟದ ಖ್ಯಾತನಾಮ ಆಟಗಾರರು ಇತ್ಯಾದಿ ಸೆಲೆಬ್ರಿಟಿಗಳು ತಮ್ಮ ರಂಗದಲ್ಲಿ ಒಂದು ಹಿನ್ನಡೆ ಅನುಭವಿಸಿದ್ದರೆ, ಅದರ ನಿವಾರಣೆಗಾಗಿ ಸುಬ್ರಹ್ಮಣ್ಯಕ್ಕೆ ಬರಮಾಡಲಾಗುತ್ತದೆ. ಅವರಿಂದ ಅಶ್ಲೇಷಾ ಬಲಿ, ನಾಗದೋಷ ನಿವಾರಣೆ ಮೊದಲಾದ ಹರಕೆಗಳನ್ನು ಪಡೆಯಲಾಗುತ್ತದೆ ಮತ್ತು ಅದಕ್ಕೆ ಪತ್ರಿಕೆಗಳಲ್ಲೂ ಫೋಟೋ ವರದಿಗಳ ಮೂಲಕ ವ್ಯಾಪಕ ಪ್ರಚಾರ ನೀಡಲಾಗುತ್ತದೆ. ದೇವಸ್ಥಾನದ ಅರ್ಚಕರಾದ ಜೋಗಿತ್ತಾಯರು ಮತ್ತು ಇತರ ಬ್ರಾಹ್ಮಣ ವರ್ಗ ಈ ಪ್ರಚಾರಗಳ ಫಲಾನುಭವಿಗಳಾಗಿದ್ದಾರೆ. ಇಂದಿನ ದೃಶ್ಯ ಹಾಗೂ ಮುದ್ರಣ ಮಾಧ್ಯಮದಿಂದಾಗಿ ಸುಬ್ರಹ್ಮಣ್ಯದ ಹರಕೆಗಳೆಂಬ ಮೂಢನಂಬಿಕೆಗಳು ಸಾಮಾನ್ಯ ಜನರಲ್ಲಿ ತೀರಾ ಅಂತರ್ಗತವಾಗಿವೆ. ದೇವಳದ ಆದಾಯದಲ್ಲಿ ತಮ್ಮ ಪಾಲನ್ನು ಲಪಟಾಯಿಸಲು ಹೊಂಚು ಹಾಕುವ ಆಡಳಿತ ಮಂಡಳಿ ಕೆಲವು ಮೊಕ್ತೇಸರರಿಗೂ ದೇವಸ್ಥಾನದ ಬಗೆಗಿನ ಈ 'ಪ್ರೊಪಾಗಾಂಡಾ' ಅಂದರೆ ಪ್ರಚಾರ ತುಂಬ ಅವಶ್ಯಕವಾಗಿದೆ. ಹೀಗಾಗಿ ಜನರು ಇಚ್ಛೆಯಿಂದಲೇ ಶ್ರದ್ಧೆಯಿಂದಲೇ ಮಡೆಸ್ನಾನ ಇತ್ಯಾದಿ ಹರಕೆ ಹೊರುತ್ತಿದ್ದಾರೆ ಎಂಬುದನ್ನು ಸಾರ್ವಜನಿಕವಾಗಿ ಬಿಂಬಿಸಲಾಗಿದೆ. ಮಡೆಸ್ನಾನ ಇಲ್ಲವಾದರೆ ತಮ್ಮಿಂದ ರಥಕಟ್ಟೋಣವೂ ಇಲ್ಲೆಂದು ಮಲೆಕುಡಿಯರು ಹೇಳುವಂತೆ ಮಾಡಲಾಗಿದೆ ಮತ್ತು ಅದಕ್ಕೆ ಮಾಧ್ಯಮ ಮೂಲಕ ಪ್ರಚಾರ ನೀಡಲಾಗಿದೆ. ಇದೀಗ ದೇವಸ್ಥಾನದ ಆಡಳಿತ ಮಂಡಳಿಯ ಸಿಬ್ಬಂದಿಗಳೇ ಸತ್ಯ ಶೋಧನೆಗಾಗಿ ಬಂದ ಹಿಂದುಳಿದ ವರ್ಗಗಳ ಜಾಗೃತಿ ಸಮಿತಿಯ ರಾಜ್ಯಾಧ್ಯಕ್ಷ ಶಿವರಾಮು ಅವರ ಮೇಲೆ ಮಾಡಿದ



ದಾಳಿಯನ್ನು ಈ ಹಿನ್ನೆಲೆಯಲ್ಲಿ ಅರ್ಥೈಸಬಹುದು.

ಈ ವರ್ಷ ಮಡೆಸ್ನಾನ ಇಲ್ಲ ಎಂದ ಆಡಳಿತ ಮಂಡಳಿಯೇ ಮಡೆಸ್ನಾನದ ಮೇಲೆ ಒತ್ತಡ ಹಾಕುವವರ ಮಾತಿಗೆ ಬಲಿಯಾದವರಂತೆ ನಟಿಸಿ, ಜಿಲ್ಲಾಡಳಿತವನ್ನು ಒಪ್ಪಿಸಿ ಮಡೆಸ್ನಾನಕ್ಕೆ ಒಪ್ಪಿಗೆ ಪಡೆದುಕೊಂಡಿದ್ದಾರೆ. ಜನರ ಶ್ರದ್ಧೆ ನಂಬಿಕೆಗಳಿಗೆ ಅಡ್ಡಿಪಡಿಸಲಾಗದು ಎಂದು ಧಾರ್ಮಿಕ ದತ್ತಿ ಸಚಿವ ಡಾ.ವಿ.ಎಸ್.ಆಚಾರ್ಯ ಜಿಲ್ಲಾಡಳಿತಕ್ಕೆ ಧಮಕಿ ಹಾಕಿದ್ದಾರೆ. ಅಂತೆಯೇ ದೇವಾಲಯದ ಹೊರಾವರಣದಲ್ಲಿ ಬ್ರಾಹ್ಮಣರಿಗೆ ಭೋಜನಪ್ರಸಾದ ನೀಡಲಾಗಿದೆ. ಬ್ರಾಹ್ಮಣರು ಉಂಡು ಎದ್ದಿದ್ದೇ, ಹರಕೆ ಹೊತ್ತವರು ಆ ಎಲೆಗಳ ಮೇಲೆ ಉರುಳು ಸೇವೆ ಸಲ್ಲಿಸಿದ್ದಾರೆ.

ಉರುಳು ಸೇವೆ ಇಲ್ಲವೇ ಮಡೆಸ್ನಾನವನ್ನು ನಡೆಸುವುದು ಬ್ರಾಹ್ಮಣರು ಉಂಡ ಎಲೆಗಳ ಮೇಲೆಯೇ ಹೊರತು, ಬ್ರಾಹ್ಮಣೇತರ ಶೂದ್ರಾದಿಗಳು ಉಂಡ ಎಲೆಗಳ ಮೇಲಲ್ಲ. ಈ ಹರಕೆ ಹೊರುವವರು ಕೆಳ ಜಾತಿಗಳ ಶೂದ್ರರು. ಅಪೂರ್ವವಾಗಿ ಬ್ರಾಹ್ಮಣರು ಇಂಥ ಹರಕೆ ಹೊರುವುದೂ ಇದೆ. ಆದರೆ ಸಾಮಾನ್ಯವಾಗಿ ಬ್ರಾಹ್ಮಣರು ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮಡೆಸ್ನಾನದ ಹರಕೆ ಹೊರುವುದಿಲ್ಲ. ಉಡುಪಿಯಲ್ಲಿ ಕೃಷ್ಣ ದೇವಾಲಯ ಸಂಕೀರ್ಣದ ಒಳಗಡೆಯೇ ಒಂದು ಪುಟ್ಟ ಸುಬ್ರಹ್ಮಣ್ಯ ಗುಡಿ ಇದೆ. ಅಲ್ಲಿ ವರ್ಷಕ್ಕೊಮ್ಮೆ ಹರಕೆ ಹೊತ್ತ ಬ್ರಾಹ್ಮಣರೆ ಮಡೆಸ್ನಾನ ನಡೆಸುತ್ತಾರೆ. ಅಲ್ಲಿ ಬ್ರಾಹ್ಮಣರು ಉಂಡ ಬಳಿಕ ಎಂಜಲೆಲೆಯಲ್ಲಿ ಬ್ರಾಹ್ಮಣರು ಮಾತ್ರ ಮಡೆಸ್ನಾನ ನಡೆಸುತ್ತಾರೆ. ಆದರೆ ಎಲ್ಲಿಯೂ ಬ್ರಾಹ್ಮಣೇತರರು ಎಂದರೆ ಶೂದ್ರರು ಉಂಡ ಎಲೆಗಳ ಮೇಲೆ ಬ್ರಾಹಣರು ಮಡೆಸ್ನಾನ ಮಾಡುವುದಿಲ್ಲ, ಶೂದ್ರರೂ ಮಡೆಸ್ನಾನ ಮಾಡುವುದಿಲ್ಲ.

ಈ ಅಂಶವು ಮಡೆಸ್ನಾನದ ಆಚರಣೆಯಲ್ಲಿರುವ ಜಾತಿಯ ಮೇಲು ಕೀಳೂ, ಜಾತಿ ಶ್ರೇಷ್ಠತೆಗಳ ವ್ಯವಸ್ಥೆಯನ್ನು ಘನೀಕರಿಸುವ ವಿದ್ಯಾಮಾನದೆಡೆಗೆ ಬೆರಳು ತೋರಿಸುತ್ತದೆ. ಹಿಂದೂ ಮತೀಯ ವ್ಯವಸ್ಥೆಯಲ್ಲಿ ಬ್ರಾಹ್ಮಣರ ಎಂಜಲು ಪವಿತ್ರವೆಂದೂ, ಶೂದ್ರರ ಎಂಜಲು ಅಪವಿತ್ರವೆಂದೂ ಸ್ಥಾಪಿಸುವ ವಿದ್ಯಾಮಾನ ಇದಾಗಿದೆ. ಹೀಗಾಗಿ ತಾರತಮ್ಯವನ್ನು ಆ ಮೂಲಕ ಅಸಮಾನತೆಯನ್ನು ಎತ್ತಿಕೊಳ್ಳುವ ಬಲಗೊಳಿಸುವ ವಿದ್ಯಾಮಾನ ಮಡೆಸ್ನಾನದ ಹರಕೆಯಾಗಿದೆ. ಆದುದರಿಂದಲೇ ಅದು ಸಂವಿಧಾನ ವಿರೋಧಿ ಮಾತ್ರವಲ್ಲ, ಸುಧಾರಣೆಯ ಗತಿಯಲ್ಲಿ ಸಾಗುತ್ತಿರುವ ಹಿಂದೂ ಧರ್ಮಕ್ಕೆ ಒಂದು ಕಳಂಕವೂ ಹೌದು.

ಈ ಕಳಂಕವನ್ನು ನಿವಾರಿಸುವುದು ಹೇಗೆ? ಹತ್ತೊಂಬತ್ತು ಇಪ್ಪತ್ತನೆಯ ಶತಮಾನದಲ್ಲಿದ್ದ ಬಾಲ್ಯ ವಿವಾಹ, ಸತಿ ಸಹಗಮನ, ಅಸ್ಪೃಶ್ಯತೆ, ದೇವದಾಸಿ, ಬೆತ್ತಲೆ ಸೇವೆಯಂಥ ಕೆಡುಕು ಆಚರಣೆಗಳನ್ನು ಸರ್ಕಾರಗಳು ಹಿಂದೂ ಸುಧಾರಕರ ಬೆಂಬಲದೊಂದಿಗೆ ನಿಲುಗಡೆ ಮಾಡಿದ್ದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಹೆಚ್ಚಿನವು ಬ್ರಿಟಿಷರ ಆಡಳಿತ ಇದ್ದಾಗಲೇ ಆದುವು. ಕರ್ನಾಟಕ ರಾಜ್ಯ ಸರ್ಕಾರವು ಕೆಲವು ವರ್ಷಗಳ ಹಿಂದೆ ಕಾನೂನಿನ ಬಲವನ್ನು ಪ್ರದರ್ಶಿಸದಿದ್ದರೆ ಬೆತ್ತಲೆ ಸೇವೆಯುನ್ನು ನಿಲ್ಲಿಸಲಾಗುತ್ತಿತ್ತೇ? ಬೆತ್ತಲೆ ಸೇವೆಯನ್ನು ತಮ್ಮ ಧಾರ್ಮಿಕ ಶ್ರದ್ಧೆ ಮತ್ತು ಸ್ವಾತಂತ್ರ್ಯದ ಭಾಗವಾಗಿ ಆಚರಿಸುತ್ತಿದ್ದೇವೆ ಎಂದು ವಾದಿಸಿದ್ದ ದಲಿತ ಶ್ರದ್ಧಾಳುಗಳೂ ಇದ್ದರು. ಅದನ್ನು ನಿಲ್ಲಿಸಲು ಸಾಧ್ಯವಾಗಿದ್ದರೆ, ಮಡೆಸ್ನಾನವನ್ನು ಕೂಡಾ ನಿಲ್ಲಿಸಲು ಸಾಧ್ಯವಾಗಬೇಕು.

ಬ್ರಾಹ್ಮಣರಿಗೆ ಪ್ರತ್ಯೇಕವಾದ ಭೋಜನ ಪ್ರಸಾದದ ವ್ಯವಸ್ಥೆಯಿರುವುದು ಜಾತಿ ತಾರತಮ್ಯದ ಇನ್ನೊಂದು ನೆಲೆ. ಧರ್ಮಸ್ಥಳ, ಉಡುಪಿಗಳೂ ಸೇರಿದಂತೆ ದಕ್ಷಿಣ ಕನ್ನಡದ ದೇವಾಲಯಗಳಲ್ಲಿ ಭೋಜನ ವ್ಯವಸ್ಥೆ ನೀಡಿದಾಗಲೆಲ್ಲಾ ಬ್ರಾಹ್ಮಣರಿಗೆ ಬೇರೆ ಪಂಕ್ತಿ ಎಂದು ಅಲಿಖಿತ ನಿಯಮವಿದೆ. ಹೆಚ್ಚಿನ ದೇವಾಲಯಗಳಲ್ಲಿ ಬ್ರಾಹ್ಮಣರ ಊಟ ಮುಗಿದ ಆನಂತರ ಇತರರಿಗೆ ಊಟ ನೀಡುವ ಸಂಪ್ರದಾಯವಿದೆ. ಇದನ್ನು ಬ್ರಾಹ್ಮಣೇತರರು ಒಪ್ಪಿಕೊಂಡೇ ಉಣ್ಣುತ್ತಾರೆ. ಹೆಚ್ಚು ಕಡಿಮೆ ಸಂಪೂರ್ಣ ವಿದ್ಯಾವಂತರೇ ಆಗಿರುವ ಬ್ರಾಹ್ಮಣರಿಗೂ ಇದು ತಪ್ಪು ಎಂದು ಅನಿಸಿಲ್ಲ. ತಮಗೆ ಪ್ರತ್ಯೇಕವಾಗಿ ಊಟವಿಕ್ಕಬೇಡಿ ಎಂದು ಅವರೆಂದೂ ಹೇಳಿಲ್ಲ. ಅವರ ದೊಡ್ಡ ಗುರುಗಳಾದ ಪೇಜಾವರ ಶ್ರೀಗಳೂ ಹೇಳುತ್ತಿಲ್ಲ. ನಾನು ಹಿಂದೆ ಕೆಲಸ ಮಾಡುತ್ತಿದ್ದ ಮಹಿಳಾ ಇಲಾಖೆಯ ಅಂಗನವಾಡಿ ಕಾರ್ಯಕರ್ತೆಯರೊಡನೆ ನಾನು ಧರ್ಮಸ್ಥಳ ದೇವಸ್ಥಾನದಲ್ಲಿ ಭೋಜನಕ್ಕೆ ಹೋಗುತ್ತಿದ್ದಾಗ, ಬ್ರಾಹ್ಮಣ ಕಾರ್ಯಕರ್ತೆಯರು ಪ್ರತ್ಯೇಕವಾಗಿರುವ ಬ್ರಾಹ್ಮಣ ಭೋಜನ ಗೃಹಕ್ಕೆ ಊಟಕ್ಕೆ ಹೋಗುತ್ತಿದ್ದರು; ಅಲ್ಲಿ ಸಾಮಾನ್ಯ ಭೋಜನ ಶಾಲೆಗಿಂತ ಹೆಚ್ಚಿನ ಭಕ್ಷ್ಯಗಳು ಇರುತ್ತವೆ ಎಂದು ಇತರೆ ಕಾರ್ಯಕರ್ತೆಯರು ನನ್ನಲ್ಲಿ ಹೇಳಿದ್ದರು. ಬ್ರಾಹ್ಮಣ ಮಹಿಳೆಯರಲ್ಲೂ ಈ ಜಾತೀಯ ಮೇಲರಿಮೆಯನ್ನು ಉಳಿಸಿಕೊಳ್ಳಲಾಗಿದೆ. ಬ್ರಾಹ್ಮಣರು ಮೇಲರಿಮೆಯನ್ನು ತೊರೆದು ಎಲ್ಲರೊಂದಿಗೆ ಉಣ್ಣಲು ಮುಂದಾಗಬೇಕು. ಬ್ರಾಹ್ಮಣರಿಗೆ ಪ್ರತ್ಯೇಕ ಭೋಜನವನ್ನು ನಿಷೇಧಿಸಿ. ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು. ಜಾತಿ ತಾರತಮ್ಯ ಇಲ್ಲವಾದ ವ್ಯವಸ್ಥೆಯಲ್ಲಿ ಮಾತ್ರ ಬ್ರಾಹ್ಮಣರ ಎಂಜಲೆಲೆಯ ಮೇಲೆ ನಡೆಯುವ ಮಡೆಸ್ನಾನ ನಿಂತು ಹೋದೀತು. ಜಾತಿ ವ್ಯವಸ್ಥೆಯ ಸನಾತನ ಧರ್ಮಕ್ಕಾಗಿ ಬದ್ಧವಾಗಿರುವ ಸಂಘಪರಿವಾರದ ರಾಜಕೀಯ ಪಕ್ಷವಾದ ಬಿಜೆಪಿಯ ಸರ್ಕಾರ ಇಂಥ ದಿಟ್ಟ ಕ್ರಮಗಳನ್ನು ಕೈಗೊಂಡೀತೇ ಎಂಬುದು ಇಲ್ಲಿನ ಸವಾಲು.

ಉಡುಪಿ : ನಿವೇಶನ ಮತ್ತು ನಿರಾತಂಕ ಜೀವನಕ್ಕಾಗಿ

ಉಡುಪಿ ನಗರಸಭಾ ವ್ಯಾಪ್ತಿಯಲ್ಲಿರುವ ನೂರಾರು ನಿವೇಶನ ರಹಿತರು ಮತ್ತು ವಸತಿ ರಹಿತರು ನವಂಬರ್ 29 ರಂದು ಉಡುಪಿ



ನಗರಸಭಾ ಕಚೇರಿ ಎದುರು ಪ್ರತಿಭಟನಾ ಧರಣಿ ನಡೆಸಿ ನಿವೇಶನ ಹಾಗೂ ಮನೆ ನೀಡಬೇಕೆಂದು ಆಗ್ರಹಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಉಡುಪಿ ತಾಲೂಕು ಸಮಿತಿಯು ಮುಂದಾಳುತ್ವದಲ್ಲಿ ನಗರದ ಬಸ್ ನಿಲ್ದಾಣದ ಬಳಿಯಿಂದ ನಗರ ಸಭೆಯ ವರೆಗೆ ಮೆರವಣಿಗೆ ಬಂದು ಬಳಿಕ ಧರಣಿ ನಡೆಸಿ ಪೌರಾಯುಕ್ತರಿಗೆ ಮನವಿ ಸಲ್ಲಿಸಿದರು.

ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಎರಡು ಸಾವಿರ ನಿವೇಶನ ಹಾಗೂ ವಸತಿ ರಹಿತರು ಪ್ರಾಂತ ಕೃಷಿ ಕೂಲಿಕಾರರ ಸಂಘದ ಮೂಲಕ




ತಹಶೀಲ್ದಾರರಿಗೆ ಈಗಾಗಲೇ ಅರ್ಜಿ ಸಲ್ಲಿಸಲಾಗಿದ್ದರೂ ಈ ಬಗ್ಗೆ ನಗರಸಭಾ ಕಚೇರಿಯಿಂದ ಯಾವೊಂದು ಮಾಹಿತಿಗಳೂ ಅರ್ಜಿದಾರರಿಗೆ ಬಂದಿರದ ಕಾರಣ ಈ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಾದ ಪಿ.ವಿಶ್ವನಾಥ ರೈ, ಕೆ.ಶಂಕರ್, ದೋಗು ಸುವರ್ಣ, ಯು.ದಾಸ್ ಭಂಡಾರಿ, ವೆಂಕಟೇಶ್ ಕೋಣಿ, ವಿಠಲ ಪೂಜಾರಿ, ರಮೇಶ್ ಮೆಂಡನ್, ಸುಶೀಲಾ ಕುಂದರ್ ಮಲ್ಪೆ, ಸಾಯಿರಾ ಬಾನು ಮತ್ತು ಕೃಷಿಕೂಲಿಕಾರರ ಸಂಘದ ತಾಲೂಕು ಮುಖಂಡರು ಭಾಗವಹಿಸಿದ್ದರು.

★

ಡಿವೈಎಫ್ಐ ಪ್ರತಿಭಟನೆಗಳು

ಮಹಿಳೆ ಕೊಲೆ ತನಿಖೆಗಾಗಿ ಕುಂದಾಪುರ ಡಿವೈಎಫ್ಐನಿಂದ ಪ್ರತಿಭಟನೆ



ಕುಂದಾಪುರ ಪಟ್ಟಣದ ಹೃದಯ ಭಾಗದಲ್ಲಿ ಅಕ್ಟೋಬರ್ 22 ರಂದು ಕುಸುಮ ಮೊಗವೀರ ಎಂಬ ಒಂಟಿ ಮಹಿಳೆ ಕೊಲೆ ನಡೆದು ತಿಂಗಳೇ ಕಳೆದಿದ್ದರೂ ಕೊಲೆಗಾರರ ಬಂಧನವಾಗಿಲ್ಲ; ಕೊಲೆಯ ಕಾರಣವೂ ತಿಳಿದು ಬಂದಿಲ್ಲ. ನಗರದಲ್ಲಿ ಮಹಿಳೆಯರು ಒಂಟಿಯಾಗಿ ವಾಸವಾಗಿರಲು ಆತಂಕ ಪಡುವ ಪರಿಸ್ಥಿತಿ ಉಂಟಾಗಿದೆ. ಈ ಕೊಲೆಯ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಯಬೇಕೆಂದು ನವಂಬರ್ 22 ರಂದು ಕುಂದಾಪುರ ಶಾಸ್ತ್ರಿ ವೃತ್ತದ ಬಳಿ ಡಿವೈಎಫ್ಐ ಕುಂದಾಪುರ ತಾಲೂಕು ಸಮಿತಿ ಪ್ರತಿಭಟನಾ ಸಭೆ ನಡೆಸಿತು. ಜನರು ನಿರಾತಂಕವಾಗಿ ವಾಸ ಮಾಡುವ ವಾತಾವರಣವನ್ನು ಪೋಲೀಸು ಹಾಗೂ ಆಡಳಿತ ವ್ಯವಸ್ಥೆ ಮಾಡಿ ಕೊಡಬೇಕೆಂದು ಒತ್ತಾಯಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್ಐ ತಾಲೂಕು ಸಮಿತಿ ಅಧ್ಯಕ್ಷ ಸುಬ್ರಹ್ಮಣ್ಯ ಆಚಾರ್ ಪಡುಕೋಣೆ ಹಾಗೂ ಅಶ್ವಥ್ ಕುಂದಾಪುರ ಮಾತನಾಡಿದರು. ಪ್ರತಿಭಟನಾ ಸಭೆಗೂ ಮೊದಲು ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಕುಂದಾಪುರ ಉಪವಿಭಾಗಾಧಿಕಾರಿಗಳಿಗೂ ಪೋಲೀಸ್ ಎಸ್‌ಪಿಯವರಿಗೂ ಮನವಿ ಸಲ್ಲಿಸಿದರು. ಡಿವೈಎಫ್ಐ ಮುಖಂಡರಾದ ಸುರೇಶ್ ಕಲ್ಲಾಗರ, ಗಣೇಶ್ ಕಲ್ಲಾಗರ, ರಾಜೇಶ್ ವಡೇರಹೋಬಳಿ, ಪ್ರಭಾಕರ ನೇರಳಕಟ್ಟೆ ಅಲ್ಲದೆ ಕಾರ್ಮಿಕ ಮುಖಂಡರಾದ ಎಚ್.ನರಸಿಂಹ ಮೊದಲಾದವರು ಭಾಗವಹಿಸಿದ್ದರು.

★

ಒಳರಸ್ತೆಗಳ ದುರಸ್ತಿಗೆ ಡಿವೈಎಫ್ಐ ಮಂಗಳೂರು ನಗರ ಸಮಿತಿ ಒತ್ತಾಯ:

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಹುತೇಕ ಒಳ ರಸ್ತೆಗಳು ಕೆಟ್ಟು ಹೋಗಿದ್ದು, ದುರಸ್ತಿಯಾಗದೇ ಬಹಳವೇ ಕಾಲವಾಗಿದೆ. ಕಳಪೆ ಕಾಮಗಾರಿ, ಅಸಮರ್ಪಕ ಒಳಚರಂಡಿ ವ್ಯವಸ್ಥೆ ಪರಿಸ್ಥಿತಿಯನ್ನು ಹದಗೆಡಿಸಿವೆ. ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಡಿವೈಎಫ್ಐನ ಘಟಕಗಳು ಇರುವೆಡೆ ಈಗಾಗಲೇ ಹಲವು ತಿಂಗಳ ಹಿಂದೆ ರಸ್ತೆ ದುರಸ್ತಿ ಆಗ್ರಹಿಸಿ ಕಾರ್ಯಕ್ರಮ ಹಮ್ಮಿಕೊಂಡಿದ್ದವು. ಡಿವೈಎಫ್ಐ ನಗರ ಸಮಿತಿಯೂ ಈ ಮೊದಲೊಮ್ಮೆ ಪಾಲಿಕೆ ಎದುರು ಪ್ರತಿಭಟನೆ ನಡೆಸಿ ಪಾಲಿಕೆಯ ಗಮನಕ್ಕೆ ತಂದಿದ್ದರೂ ಒಳರಸ್ತೆಗಳ ದುರಸ್ಥಿ ನಡೆದಿರುವುದಿಲ್ಲ. ಪಾಲಿಕೆಯು ಈ ದೀರ್ಘಕಾಲೀನ ಅವಗಣನೆಯನ್ನು ಪ್ರತಿಭಟಿಸಿ ಮಂಗಳೂರು ನಗರ ಸಮಿತಿಯ ನೇತೃತ್ವದಲ್ಲಿ ಪಾಲಿಕೆ ಕಚೇರಿ ಎದುರು ನವಂಬರ್ 28 ರಂದು ಪ್ರತಿಭಟನೆ ನಡೆಸಲಾಯಿತು.

'ಸುಂದರ ಮಂಗಳೂರು' ಯೋಜನೆ ಹೆಸರಲ್ಲಿ ಬಹುಮಹಡಿ ಕಟ್ಟಡಗಳಿಗೆ ಪರವಾನಿಗೆ ನೀಡುವ ಮೂಲಕ ಬಿಲ್ಡರ್‌ಗಳ, ಶ್ರೀಮಂತರ ಹಿತಾಸಕ್ತಿಯನ್ನು ಕಾಪಾಡುವ ಪ್ರಯತ್ನ ನಡೆಯುತ್ತಿದೆ. ನಗರದ ಮುಖ್ಯ ರಸ್ತೆಗಳು ಕಾಂಕ್ರೀಟೀಕರಣವಾಗುತ್ತಿವೆ. ಆದರೆ ಒಳರಸ್ತೆಗಳನ್ನು ಕೇಳುವವರೇ ಇಲ್ಲ. ನೂರಾರು ಕೋಟಿ ವೆಚ್ಚದಲ್ಲಿ ನಡೆದಿರುವ ಕಾಂಕ್ರೀಟೀಕರಣವೂ ಅವೈಜ್ಞಾನಿಕವಾಗಿದೆ. ಶೀಘ್ರದಲ್ಲಿಯೇ ಒಳರಸ್ತೆಗಳ ದುರಸ್ತಿಯನ್ನು ಕೈಗೊಳ್ಳಲು ಮುಂದಾಗದಿದ್ದರೆ ಜನಪ್ರತಿನಿಧಿಗಳಿಗೆ ಕಪ್ಪು ಬಾವುಟ ಪ್ರದರ್ಶಿಸಲಾಗುವುದು ಎಂಬುದಾಗಿ ಡಿವೈಎಫ್ಐ ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಎಚ್ಚರಿಕೆ ನೀಡಿದರು.

ಪ್ರತಿಭಟನೆಗೂ ಮುನ್ನ ಬಲ್ಲಾಳ್‌ಬಾಗ್‌ನಿಂದ ನಗರ ಪಾಲಿಕೆ ಕಚೇರಿವರೆಗೆ ಮೆರವಣಿಗೆಯಲ್ಲಿ ಬಂದು ಪಾಲಿಕೆ ಎದುರು ಧರಣಿ ನಡೆಸಲಾಯಿತು. ಬಳಿಕ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು. ಡಿವೈಎಫ್ಐ ಘಟಕಗಳು



ನಗರದ ಬಜಾಲು, ಅಳಪೆ, ಪಂಜಿಮೊಗರು, ಉರ್ವಸ್ಟೋರ್, ಕಣ್ಣೂರು, ಕೊಂಚಾಡಿ, ಕಾವೂರು ಮತ್ತು ಶಕ್ತಿನಗರಗಳಲ್ಲಿ ಈ ಹಿಂದೆ ರಸ್ತೆ ದುರಸ್ತಿ ಆಗ್ರಹಿಸಿ ಕಾರ್ಯಕ್ರಮ ಹಮ್ಮಿಕೊಂಡಿದ್ದವು. ನಗರ ಪಾಲಿಕೆ ಚಲೋ ಕಾರ್ಯಕ್ರಮದ ನೇತೃತ್ವವನ್ನು ಡಿವೈಎಫ್ಐ ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ ಹಾಗೂ ಡಿವೈಎಫ್ಐ ನಗರ ಸಮಿತಿ ಸದಸ್ಯರು ವಹಿಸಿದ್ದರು.

ಸಿಪಿಐ(ಎಂ) ಬೈಂದೂರು ವಲಯ ಸಮ್ಮೇಳನ

ಭಾರತ ಕಮ್ಯುನಿಷ್ಟ ಪಕ್ಷ (ಮಾರ್ಕ್ಸವಾದಿ)ದ ಬೈಂದೂರು ವಲಯ ಸಮಿತಿಯ ಸಮ್ಮೇಳನವು ಗುಲ್ವಾಡಿ ಮಾವಿನ ಕಟ್ಟೆಯಲ್ಲಿ ಇತ್ತೀಚೆಗೆ ಯಶಸ್ವಿಯಾಗಿ ಜರಗಿತು. ಬೈಂದೂರು ವಲಯ ಸಮಿತಿ ವ್ಯಾಪ್ತಿಯಲ್ಲಿ ಪಕ್ಷದ 24 ಪ್ರಾಥಮಿಕ ಶಾಖೆಗಳ ಸಮ್ಮೇಳನವು ಜರಗಿದ್ದು, ಆಯ್ಕೆಗೊಂಡ ಪ್ರತಿನಿಧಿಗಳು ಬೈಂದೂರು ವಲಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಸಿಪಿಐ(ಎಂ) ಕುಂದಾಪುರ ತಾಲೂಕು ಕಾರ್ಯದರ್ಶಿ ಮಹಾಬಲ ವಡೇರಹೋಬಳಿ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಾ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ದುಡಿಯುವ ವರ್ಗದ ಸುಲಿಗೆ, ಶೋಷಣೆ ನಿರಂತರವಾಗಿ ನಡೆಯುತ್ತಿರುವುದರಿಂದ ವಿರುದ್ಧ ಸಿಪಿಐ(ಎಂ) ಸಮರಧೀರ ಹೋರಾಟ ಚಳವಳಿಯನ್ನು ಸಂಘಟಿಸುತ್ತಾ ಬಂದಿದೆ. ಕಾರ್ಮಿಕ ವರ್ಗದ ನೇತೃತ್ವದಲ್ಲಿ ದುಡಿಯುವ ಜನರ ರಾಜಕೀಯ ಅಧಿಕಾರ ಹಿಡಿಯಲು ನಮ್ಮ ಹೋರಾಟ ಮುಂದುವರಿದಿದೆ ಎಂದರು. ಸಮ್ಮೇಳನದ ಮುಖ್ಯ ಅತಿಥಿ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ ಇವರು ಬೆಲೆ ಏರಿಕೆ, ಭ್ರಷ್ಟಾಚಾರ, ಬಡತನ, ನಿರುದ್ಯೋಗ ಅನರಕ್ಷತೆ ವಿರುದ್ಧ ಪಕ್ಷ ಮಾಡಿದ ಹೋರಾಟದ ವಿವರ ತಿಳಿಸಿದರು. ಸಿಪಿಐ(ಎಂ) ಬೈಂದೂರು ವಲಯ ಸಮಿತಿ ಕಾರ್ಯದರ್ಶಿ ವೆಂಕಟೇಶ್ ಕೋಣಿ ಮಂಡಿಸಿದ ಪಕ್ಷದ ಚಟುವಟಿಕೆಯ ವರದಿಯ ಮೇಲೆ ರಾಜೀವ ಪಡುಕೋಣೆ, ರಾಜೀವ ಶೆಟ್ಟಿ, ಗೋಪಾಲ ಮಾವಿನ ಕೆರೆ, ಗಣೇಶ ತೊಂಡೆಮಕ್ಕಿ ಹಾಗೂ ಡಿ. ಸುಬ್ಬ ಇವರು ತಮ್ಮ ಅಭಿಪ್ರಾಯ ಮಂಡಿಸಿದರು.

ಬೆಲೆ ಏರಿಕೆ, ಭ್ರಷ್ಟಾಚಾರ ವಿರುದ್ಧ, ಗುಲ್ವಾಡಿ, ಮಾವಿನಕಟ್ಟೆ ರಸ್ತೆ ದುರಸ್ತಿಗೆ ಒತ್ತಾಯ, ಮಾರ

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಣ್ಣದ ಮಾತುಗಳ ಮೂಲಕ ರಾಜ್ಯ ಬಿಜೆಪಿ ಸರ್ಕಾರ ಭಾರಿ ಕೃಷಿ ಅಭಿವೃದ್ಧಿಯ ಕನಸುಗಳನ್ನು ಬಿತ್ತಿ ರೈತರ ಭೂಮಿ ಕಬಳಿಸುವ ಸಂಚು ನಡೆಸಿದೆ. ರಾಜ್ಯದ ರೈತ-ಕೂಲಿಕಾರರು, ದುಡಿಯುವ ಜನ ಅದನ್ನು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ.



ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಪ್ರತಿರೋಧ

ರೈತ-ಕೂಲಿಕಾರರ ಸಮಾಧಿಯ ಮೇಲೆ ಬಿಜೆಪಿ ಸರ್ಕಾರದ ಕೃಷಿ ಅಭಿವೃದ್ಧಿಗೆ ತೀವ್ರ ಖಂಡನೆ

ಕರ್ನಾಟಕದ ಕೃಷಿ ಹಾಗೂ ರೈತ-ಕೂಲಿಕಾರರ ನಾಶದ ಮೇಲೆ ವಿಶ್ವ ಬಂಡವಾಳ ಹೂಡಿಕೆದಾರರ ಮೂಲಕ ಕೃಷಿ ಅಭಿವೃದ್ಧಿ ಸಾಧಿಸಲು ಹೊರಟಿರುವ ಬಿ.ಜೆ.ಪಿ ರಾಜ್ಯ ಸರ್ಕಾರದ ವಿಶ್ವ ಕೃಷಿ ಹೂಡಿಕೆದಾರರ ಸಮಾವೇಶವನ್ನು ಪ್ರತಿಭಟಿಸಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಬೃಹತ್ ಜಂಟಿ ಪ್ರತಿಭಟನಾ ಸಭೆಯನ್ನು ನೈಸ್‌ರಸ್ತೆಯ ಮಾಧಾವರ ಗ್ರಾಮದ ಹತ್ತಿರ ನಡೆಸಿದವು. 5000ಕ್ಕೂ ಅಧಿಕ ರೈತರು, ಕೂಲಿಕಾರರು, ಕಾರ್ಮಿಕರು ಮತ್ತು ಅಂಗನವಾಡಿ ಕಾರ್ಯಕರ್ತೆಯರು, ವಿದ್ಯಾರ್ಥಿ ಯುವಜನರು, ಮಹಿಳೆಯರು ಪಾಲ್ಗೊಂಡಿದ್ದರು.

ಬೃಹತ್ ಪ್ರತಿಭಟನಾ ಸಭೆಯ ಜಂಟಿ ಅಧ್ಯಕ್ಷತೆಯನ್ನು ಕಾಂ॥ ಮಾರುತಿ ಮಾನ್ಪಡೆ ಮತ್ತು ಕಾಂ॥ ನಿತ್ಯಾನಂದ ಸ್ವಾಮಿ ವಹಿಸಿದ್ದರು.

ಶತಶತಮಾನಗಳಿಂದ ಕರ್ನಾಟಕಕ್ಕೆ ಅನ್ನ ನೀಡುತ್ತಿರುವ ರೈತ-ಕೂಲಿಕಾರರನ್ನು ಭೂಮಿಯಿಂದ ಹೊರಗಟ್ಟಿ ಸಂಕಷ್ಟದಲ್ಲಿರುವ ಅವರನ್ನು ಇನಷ್ಟು ಸಂಕಷ್ಟಕ್ಕೆ ದೂಡಿ, ಹಸಿವಿನ ಸಾವುಗಳ ಹಾಗೂ ಆತ್ಮಹತ್ಯೆಗಳ ತೆಕ್ಕೆಗೆ ತಳ್ಳುವ ಸಂಚನ್ನು ಬಿ.ಜೆ.ಪಿ-ಆರ್.ಎಸ್.ಎಸ್ ಮಾಡುತ್ತಿದ್ದು, ರೈತ-ಕೂಲಿಕಾರರ ದ್ರೋಹದಲ್ಲಿ ತೊಡಗಿವೆಎಂದು ಅವರು ಕಟುವಾಗಿ ಟೀಕಿಸಿದರು.

30-40 ವರ್ಷಗಳಿಂದ ಸಾಗುವಳಿಯಲ್ಲಿ ತೊಡಗಿರುವ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡುವ ಬದಲು ಆ ಜಮೀನನ್ನು ಭೂ ಬ್ಯಾಂಕ್ ಹೆಸರಿನಲ್ಲಿ ಸ್ವಾಧೀನ ಪಡಿಸಿಕೊಂಡು ಲಕ್ಷಾಂತರ ಬಡವರನ್ನು ಒಕ್ಕಲೆಬ್ಬಿಸಿ ವಿಶ್ವಬಂಡವಾಳ ಹೂಡಿಕೆದಾರರಿಗೆ ಒದಗಿಸಲು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ್ಯ ಕೃಷಿ ಕೂಲಿಕಾರರ ಸಂಘ ಬಿಡುವುದಿಲ್ಲವೆಂದು ಪ್ರಕಟಿಸಿದರು.

ಕೃಷಿಯಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಪ್ರವೇಶವು ಖಂಡಿತಾ 65 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿರುವ ಕೂಲಿಕಾರರ ಎಲ್ಲಾ ಕೆಲಸವನ್ನು ಕಸಿದುಕೊಂಡು ಆ ಜಾಗದಲ್ಲಿ ಆಧುನಿಕ ಯಂತ್ರಗಳನ್ನು ಬಳಸಿ ಅವರನ್ನು ಹಸಿವಿನ ಸಾವುಗಳಿಗೆ ಅಪೌಷ್ಠಿಕತೆಯ ಸಾವುಗಳಿಗೆ ತಳ್ಳಲಿವೆ. ಮಾತ್ರವಲ್ಲ ಸಾವುಗಳ ಸಂಖ್ಯೆಯನ್ನು ಅದರ ವೇಗವನ್ನು ಅಪಾರವಾಗಿ ಹೆಚ್ಚಿಸಲಿವೆಯೆಂದು ಆತಂಕವನ್ನು ಕರ್ನಾಟಕ ಪ್ರಾಂತ್ಯ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸಕೇರಾ ವ್ಯಕ್ತಪಡಿಸಿದರು. ಕೂಲಿಕಾರರ ಸರ್ವನಾಶಕ್ಕೆ ಮುಂದಾಗಿರುವ ಬಿ.ಜೆ.ಪಿ-ಆರ್.ಎಸ್.ಎಸ್ ನ್ನು ಬಲವಾಗಿ ಎದುರಿಸಲು ಕರೆನೀಡಿದರು.

ಬಹುರಾಷ್ಟ್ರೀಯ ಬಂಡವಾಳಗಾರರಿಗೆ ಉಚಿತವಾಗಿ ವಿದ್ಯುತ್, ಭೂಮಿ, ನೀರು ಮತ್ತು ಆದಾಯ ತೆರಿಗೆ ಕಡಿತ ಮಾಡಿ ಅವರಿಗೆ ಮಣೆ ಹಾಕುತ್ತಿರುವ ಹಾಗೂ ಭೂಗಳ್ಳರಿಗೆ ಬೆಂಬಲ ನೀಡುವ ಸದಾನಂದಗೌಡರ ಬಿ.ಜೆ.ಪಿ ಸರ್ಕಾರ, ರೈತರನ್ನು ಕೂಲಿಕಾರರನ್ನು ರಾಜ್ಯದ ಪರಂಪರೆಯ ವ್ಯವಸಾಯವನ್ನು ನಾಶಮಾಡಲು, ಬಗರಹುಕ್ಕುಂ ರೈತರನ್ನು ಭೂಮಿಯಿಂದ ಒಕ್ಕಲೆಬ್ಬಿಸಲು ಹೊರಟಿರುವುದನ್ನು ರಾಜ್ಯದ ಕಾರ್ಮಿಕರು ಸುಮ್ಮನೆ ನೋಡುತ್ತಾ ಕುಳಿತುಕೊಳ್ಳಲು ಸಾಧ್ಯವಿಲ್ಲ. ಸದಾನಂದಗೌಡರೇ ರೈತ - ಕೂಲಿಕಾರರ ಜೊತೆ ಕಾರ್ಮಿಕರು ಸೇರಿ ಪ್ರತಿಭಟನೆ ನಡೆಸುತ್ತೇವೆ. ಕೃಷಿನಾಶವಾಗಲು ಬಿಡುವುದಿಲ್ಲ ಎಂದು ಸಿ.ಐ.ಟಿ.ಯು ರಾಜ್ಯ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಮುಖಂಡ ಎಸ್.ಪ್ರಸನ್ನಕುಮಾರ್ ಎಚ್ಚರಿಸಿದರು. ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಬಂಡವಾಳಕ್ಕೆ ಅವಕಾಶ ನೀಡುವ ಕೋಟಿ-ಕೋಟಿ ಕಾರ್ಮಿಕರನ್ನು ಬೀದಿಗೆ ತಳ್ಳುವ ಕಾಂಗ್ರೆಸ್; ಬಿ.ಜೆ.ಪಿ ಎರಡೂ ಕೂಡ ಬೇರೆ, ಬೇರೆ ಯಲ್ಲ ಬಹುರಾಷ್ಟ್ರೀಯರ ಬಂಡವಾಳದ ಎಂಜಲಿಗೆ ಆಶೆ ಪಡುವ ಅವರ ಏಜೆಂಟರೆಂದು ಪ್ರಸನ್ನಕುಮಾರ್ ಜರಿದರು.

ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ಜಿ.ಎನ್.ನಾಗರಾಜ್, ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಬೆಂಗಳೂರು ಜಿಲ್ಲಾಧ್ಯಕ್ಷರಾದ ವೆಂಕಟಾಚಲಯ್ಯ, ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ.ವರಲಕ್ಷ್ಮಿ, ಡಿವೈಎಫ್ಐ ನ ರಾಜ್ಯ ಅಧ್ಯಕ್ಷರಾದ ಭರತ್‌ರಾಜ್, ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ, ಎಸ್ಎಫ್ಐ ರಾಜ್ಯ ಕಾರ್ಯದರ್ಶಿ ಉಳ್ಳಿ ಉಮೇಶ್ ವೇದಿಕೆಯಲ್ಲಿದ್ದರು.

ಕಾರ್ಮಿಕ ನೇತಾರರಿಂದ ಬೆಂಬಲ ಎಸ್.ಪ್ರಸನ್ನಕುಮಾರ್, ಎಸ್.ವರಲಕ್ಷ್ಮಿ....





ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಗೆ ಅನುಮತಿಯಿಂದ ಬೆಲೆಗಳು ಇಳಿಯುತ್ತವೆ, ಉದ್ಯೋಗಾವಕಾಶ ಹೆಚ್ಚುತ್ತದೆ, ರೂಪಾಯಿಯ ಮೌಲ್ಯದಲ್ಲಾಗುತ್ತಿರುವ ಗಮನಾರ್ಹ ಇಳಿಕೆಯನ್ನು ತಡೆಯಲು ನೆರವಾಗುತ್ತದೆ, ಉತ್ಪಾದಕನಿಗೆ ಉತ್ತಮ ಬೆಲೆ ಸಿಗುತ್ತದೆ ಎಂಬುದೆಲ್ಲ ಮಿಥ್ಯೆಗಳು, ಭ್ರಮೆಗಳು ಎಂದು ಈಗಾಗಲೇ ಅಧ್ಯಯನಗಳಿಂದ ದೃಢಪಟ್ಟಿದೆ. ವಾಸ್ತವವಾಗಿ, ಪ್ರಧಾನ ಮಂತ್ರಿಗಳು ಬಾಲಿಯಲ್ಲಿ ಇತ್ತೀಚೆಗೆ ಅಧ್ಯಕ್ಷ ಒಬಾಮರನ್ನು ಭೇಟಿ ಮಾಡಿದಾಗ ಕೊಟ್ಟ ಒಂದು ವಚನದ ಪರಿಣಾಮ ಎಂಬ ವಾಸನೆಯನ್ನು ಈ ನಿರ್ಧಾರ ಬೀರುತ್ತಿದೆ ಎಂಬುದು ಸ್ಪಷ್ಟ. ಆದ್ದರಿಂದ ಚಳಿಗಾಲದ ಅಧಿವೇಶನವನ್ನು ಉಳಿಸಬೇಕೋ ಅಥವ ವ್ಯರ್ಥವಾಗಲು ಬಿಡಬೇಕೋ ಎಂಬುದು ಇಂತಹ ಒಂದು ತರ್ಕಬದ್ಧ ಬೇಡಿಕೆಗೆ ಒಪ್ಪಲು ಸರ್ಕಾರ ಸಿದ್ಧವಿದೆಯೇ ಎಂಬುದನ್ನೇ ಅವಲಂಬಿಸಿದೆ.

ಸಂಸತ್ತಿನ ಕಲಾಪಗಳಿಗೆ ಅಡಚಣೆ ಯುಪಿಎ ಸರಕಾರವೇ ಹೊಣೆ

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಹೂಡಿಕೆ ಜನತೆಯ ಬದುಕಿಗೆ ಗದಾಪ್ರಹಾರ

('ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಡಿಸೆಂಬರ್ 1, 2011 ರ ಸಂಪಾದಕೀಯ)

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ, ಸಂಸತ್ತಿನ ಚಳಿಗಾಲದ ಅಧಿವೇಶನದ ಕಲಾಪಗಳು ಅಸ್ತವ್ಯಸ್ತಗೊಂಡೇ ಇವೆ. ಹಿಂದೊಂದು ಸಂದರ್ಭದಲ್ಲಿ ಒಂದಿಡೀ ಅಧಿವೇಶನ ಸರಕಾರದ ಹಠಮಾರಿತನದಿಂದಾಗಿ ವ್ಯರ್ಥಗೊಂಡಿತ್ತು. ಅಂದು ಸರಕಾರ 2ಜಿ ತರಂಗಾಂತರ ಹಗರಣದ ತನಿಖೆಗೆ ಒಂದು ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯನ್ನು ನೇಮಿಸಲು ನಿರಾಕರಿಸಿತ್ತು. ಕೊನೆಗೂ ಅದು ಆ ಬೇಡಿಕೆಯನ್ನು ಒಪ್ಪಿಕೊಂಡು ಜೆಪಿಸಿ ಯನ್ನು ನೇಮಿಸಿತು. ಈ ಬುದ್ಧಿ ಅದಕ್ಕೆ ಮೊದಲೇ ಬಂದಿದ್ದರೆ, ಇಡೀ ಅಧಿವೇಶನ ವ್ಯರ್ಥವಾಗಿರಬೇಕಾಗಿರಲಿಲ್ಲ. ಹೀಗಿದೆ ಸಂಸತ್ತು ಮತ್ತು ಸಂದೀಯ ಪ್ರಜಾಪ್ರಭುತ್ವ ಕುರಿತಂತೆ ಮನಮೋಹನ್ ಸಿಂಗ್ ಸರಕಾರದ ತಿರಸ್ಕಾರ ಮತ್ತು ತುಚ್ಛೀಕಾರ.

ಈಗ ಮತ್ತೊಮ್ಮೆ ಸರಕಾರ ಅಂತಹ ಸನ್ನಿವೇಶವನ್ನು ನಿರ್ಮಿಸಿದೆ–ಕೇಂದ್ರ ಸಂಪುಟ ಬಹು–ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗೆ ಅನುಮತಿ ಕೊಡುವ ನಿರ್ಣಯ ಕೈಗೊಂಡು ವಾಲ್ ಮಾರ್ಟ್, ಕೇರ್ಫೋರ್ ಮತ್ತು ಟೆಸ್ಕೊದಂತಹ ಅಂತರ್ರಾಷ್ಟ್ರೀಯ ಸೂಪರ್ ಮಾರುಕಟ್ಟೆ ದೈತ್ಯರು ನಮ್ಮ ದೇಶದಲ್ಲಿ ಅಂಗಡಿ ತೆರೆಯಲು ಹಾದಿ ತೆರೆದು ಕೊಟ್ಟಿದೆ.

ಕೇಂದ್ರ ಸಂಪುಟಕ್ಕೆ ಕಾರ್ಯಾಂಗದ ನಿರ್ಧಾರಗಳನ್ನು ಕೈಗೊಳ್ಳುವ ಹಕ್ಕು ಇದೆಯೆಂಬುದೇನೋ ನಿಜ. ಆದರೆ ಹಿಂದೆಂದೂ ಸಂಸತ್ತು ಅಧಿವೇಶನದಲ್ಲಿರು ವಾಗಲೇ ಇಂತಹ ನಿರ್ಧಾರಗಳನ್ನು ಕೈಗೊಂಡಿರಲಿಲ್ಲ, ಪ್ರಕಟಿಸಿರಲಿಲ್ಲ. ಇದು ಸಂಸದೀಯ ಪ್ರಜಾಪ್ರಭುತ್ವದ ಸತ್ವಕ್ಕೆ, ನಮ್ಮ ಸಂವಿಧಾನಿಕ ಆಚರಣೆಗಳಿಗೆ ಸಂಪೂರ್ಣ ತದ್ವಿರುದ್ಧವಾದದ್ದು. ಆದ್ದರಿಂದ ಈ ನಿರ್ಧಾರವನ್ನು ಎರಡೂ ಸದನಗಳಲ್ಲಿ ಚರ್ಚಿಸಿದ ನಂತರ ಕೈಗೊಳ್ಳಬೇಕಾಗಿತ್ತು ಎಂದ ಎಲ್ಲ ಪಕ್ಷಗಳ ಸಂಸದರು ಆಗ್ರಹಿಸುತ್ತಿದ್ದರೆ ಅದು ಅತಾರ್ಕಿಕವೇನಲ್ಲ. ಒಮ್ಮೆ ನಿರ್ಧಾರ ಕೈಗೊಂಡ ಮೇಲೆ ಆ ಪ್ರಶ್ನೆಯ ಮೇಲೆ ಚರ್ಚೆ ನಿಷ್ಪ್ರಯೋಜಕ. ನಿಜ, ಸರಕಾರ ತನ್ನ ನಿರ್ಧಾರವನ್ನು ಬದಲಿಸಿ, ಭಾರತ ಅದರ ಕುರಿತು ಎಂತಹ ನಿರ್ಣಯ ಕೈಗೊಳ್ಳಬೇಕು ಎಂಬುದನ್ನು ನಿರ್ಧರಿಸಲಿಕ್ಕಾಗಿ ಸಂಸತ್ತು ಅರ್ಥಪೂರ್ಣ ಚರ್ಚೆ ನಡೆಸಲು ಅವಕಾಶ ಕೊಡಲು ಸಿದ್ಧವಿದ್ದರೆ, ಆ ಮಾತು ಬೇರೆ.

ಪ್ರಜಾಪ್ರಭುತ್ವಕ್ಕೆ ಅಪಚಾರ

ಈ ಹಿಂದೆ ಸ್ವತಃ ಕಾಂಗ್ರೆಸ್ ಪಕ್ಷವೇ ಇಂತಹ ಕ್ರಮಗಳಿಗೆ ತೀವ್ರ ಆಕ್ಷೇಪ ವ್ಯಕ್ತ ಪಡಿಸಿತ್ತು ಎಂಬುದು ಗಮನಾರ್ಹ. 1989ರಲ್ಲಿ ಸಂಸತ್ತು ಅಧಿವೇಶನದಲ್ಲಿದ್ದ ಸಂದರ್ಭದಲ್ಲಿ ನ್ಯಾಶನಲ್ ರೈಫಲ್ಸ್ ಎಂಬ ಅರೆ ಸೈನಿಕ ಪಡೆಯನ್ನು ಸ್ಥಾಪಿಸುವ ನಿರ್ಣಯ ಪ್ರಕಟಿಸಿದಾಗ ಆಗಿನ ಪ್ರಧಾನ ಮಂತ್ರಿ ವಿ.ಪಿ.ಸಿಂಗ್ ವಿರುದ್ಧ ಈಗಿನ ಗೃಹಮಂತ್ರಿಗಳು ಒಂದು ಹಕ್ಕುಚ್ಯುತಿ ನಿಲುವಳಿಯನ್ನು ಮಂಡಿಸಿದ್ದರು.ಇದು ಮಾಧ್ಯಮಗಳಲ್ಲೂ ವರದಿಯಾಗಿದೆ. ಆ



ಕೃಪೆ: ದಿ ಹಿಂದು

ನಿಲುವಳಿ ಸೂಚನೆಗೆ ಅವಕಾಶ ಕೊಡದಿದ್ದರೂ, ಆಗಿನ ಲೋಕಸಭಾಧ್ಯಕ್ಷ ರಬಿ ರಾಯ್ ಅವರು ಸರಕಾರದ ನಿರ್ಧಾರ ಸಮಂಜಸವಲ್ಲ ಎಂಬ ರೂಲಿಂಗ್ ಕೊಟ್ಟಿದ್ದರು. ನಂತರ 1999ರಲ್ಲಿ, ಪ್ರಧಾನ ಮಂತ್ರಿ ವಾಜಪೇಯಿಯವರು ಸದನದ ಹೊರಗೆ ಸಂಪುಟ ಮಂತ್ರಿಗಳ ರಾಜೀನಾಮೆಯನ್ನು ಪ್ರಕಟಿಸಿದಾಗ, ಕಾಂಗ್ರೆಸ್ ಸದಸ್ಯ ಸಂತೋಷ ಮೋಹನ್ ದೇಬ್ ಅವರ ವಿರುದ್ಧ ಇಂತಹುದೇ ನಿಲುವಳಿ ಸೂಚನೆ ಮಂಡಿಸಿದ್ದರು. ಆಗಲೂ ಲೋಕಸಭಾಧ್ಯಕ್ಷರಾಗಿದ್ದ ಜಿಎಂಸಿ ಬಾಲಯೋಗಿ ಇಂತಹುದೇ ರೂಲಿಂಗ್ ಕೊಟ್ಟಿದ್ದರು.

ಆದರೆ ಇಂದು ಅದೇ ಕಾಂಗ್ರೆಸ್ ಸಂಸದೀಯ ಪ್ರಜಾಪ್ರಭುತ್ವದ ಸತ್ವವನ್ನು ಸಂಪೂರ್ಣವಾಗಿ ಉಲ್ಲಂಘಿಸಿದೆ. ಅಷ್ಟೇ ಅಲ್ಲ, ಪ್ರಧಾನ ಮಂತ್ರಿಗಳು ಯುವಕಾಂಗ್ರೆಸ್ ಸಮಾರಂಭವೊಂದರಲ್ಲಿ ಮಾತನಾಡುತ್ತ ಸರಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡದ್ದಷ್ಟೇ ಅಲ್ಲ, ಇದು ಎಂತಹ ಒಳ್ಳೆಯ ನಿರ್ಧಾರ ಎಂದು ವಿವರಿಸಲೂ ಹೊರಟರು. ಇದರಿಂದ ಉದ್ಯೋಗಾವಕಾಶ ಹೆಚ್ಚುತ್ತದೆ, ಬೆಲೆಗಳು ಇಳಿಯುತ್ತವೆ ಮತ್ತು ರೈತರಿಗೆ ಇನ್ನೂ ಉತ್ತಮ ಪ್ರತಿಫಲ ದೊರೆಯುತ್ತದೆ, ಎಂದೆಲ್ಲಾ ಹೇಳಿದರು.

ಇಂತಹುದೇ ಮಾತುಗಳು ಈ ಹಿಂದೆ ವಿದ್ಯುತ್ ಉತ್ಪಾದನೆ ಹೆಚ್ಚಿಸುವ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿ ಎನ್ರೋನ್‌ಗೆ ಪ್ರವೇಶ ನೀಡಿದ್ದನ್ನು ಸಮರ್ಥಿಸಿಕೊಳ್ಳುವಾಗಲೂ ಕೇಳ ಬಂದಿದ್ದವು. ಭಾರತದ ರೋಗಗ್ರಸ್ತ ವಿದ್ಯುತ್ ವಲಯಕ್ಕೆ ಒಂದು ವರವಾಗಿ ಬಂದಿರುವ ಅದು ವಿದ್ಯುತ್ ಭದ್ರತೆಯ ಒಂದು ಯುಗಾರಂಭ ಎಂದು ಹೇಳಲಾಗಿತ್ತು. ಅದೇ ರೀತಿ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಶರಣಾಗಿ ಮಾಡಿಕೊಂಡ ಭಾರತ–ಅಮೆರಿಕಾ ಪರಮಾಣು ವ್ಯವಹಾರವೂ ರೈತರಿಗೆ ವರವಾಗಲಿದೆ, ಅವರಿಗೆ ಅಡೆ ತಡೆಯಿಲ್ಲದೆ ವಿದ್ಯುತ್ ಸಿಗಲಿದೆ, ಮಕ್ಕಳು ವಿದ್ಯುತ್ ಕಡಿತಗಳಿಲ್ಲದೆ ರಾತ್ರಿಯಲ್ಲೂ ಓದಿಕೊಳ್ಳಬಹುದು ಎಂದು ಸಮರ್ಥಿಸಿಕೊಳ್ಳಲಾಗಿತ್ತು. ಅತ್ತ ಎನ್ರೋನ್ ಮುಖಮುಚ್ಚಿಕೊಂಡು ಭಾರತದಿಂದ ನಿರ್ಗಮಿಸಿದರೆ, ಇತ್ತ ಪರಮಾಣು ವ್ಯವಹಾರ ದೇಶಕ್ಕೆ ಮತ್ತು ಜನತೆಗಂತೂ ಯಾವುದೇ ಪ್ರಯೋಜನ ತಂದಿಲ್ಲ, ಭಾರತದ ಸ್ವತಂತ್ರ ವಿದೇಶಾಂಗ ನೀತಿಗೂ ಕುಂದು ತಂದಿದೆ.

ಆರಂಭದಿಂದಲೂ ವಿರೋಧ

ಚಿಲ್ಲರೆ ವ್ಯಾಪಾರ ವಲಯದಲ್ಲಿ ಎಫ್‌ಡಿಐ ಗೆ ವಿರೋಧ 2004–05ರ ಬಜೆಟ್ ಭಾಷಣದಲ್ಲಿ ಅದನ್ನು ಮೊದಲ ಬಾರಿಗೆ ಪ್ರಕಟಿಸಿದಾಗಲೇ ಆರಂಭವಾಗಿತ್ತು. ಎಡಪಕ್ಷಗಳು ಇದನ್ನು ದೃಢವಾಗಿ ವಿರೋಧಿಸಿದ್ದರಿಂದ ಆಗಿನ ಯುಪಿಎ–1 ಸರಕಾರಕ್ಕೆ ಎಡಪಕ್ಷಗಳ ಬೆಂಬಲ ಬೇಕಾಗಿದ್ದುದರಿಂದ ಅದು ಮೂಲೆಗುಂಪಾಯಿತು.

ಈ ಪ್ರಸ್ತಾಪವನ್ನು ವಿರೋಧಿಸುತ್ತ ಎಡಪಕ್ಷಗಳು, ಆಗಿದ್ದ ಯುಪಿಎ–ಎಡಪಕ್ಷಗಳ ಸಂಯೋಜನಾ ಸಮಿತಿಗೆ ಅಕ್ಟೋಬರ್ 2005ರಲ್ಲಿ ಒಂದು ಟಿಪ್ಪಣಿಯನ್ನು ಸಲ್ಲಿಸಿದವು. ಒಂದು ಸಾಮಾನ್ಯ ಅಂದಾಜಿನ ಪ್ರಕಾರ ಭಾರತದ ಒಟ್ಟು ಉತ್ಪಾದನೆ(ಜಿಡಿಪಿ)ಯಲ್ಲಿ ಚಿಲ್ಲರೆ ವ್ಯಾಪಾರದ ಪಾಲು ಸುಮಾರು 11 ಶೇಕಡಾ, ಸುಮಾರು 4 ಕೋಟಿ ಜನಗಳು ಆಗ ಈ ವಲಯದಲ್ಲಿ ಕೆಲಸ ಮಾಡುತ್ತಿದ್ದರು. ನಾಲ್ಕನೇ ಆರ್ಥಿಕ ಗಣತಿಯ ಪ್ರಕಾರ ಕೃಷಿಯೇತರ ಸ್ವಂತ ಖಾತೆ ಉದ್ದಿಮೆಗಳಲ್ಲಿ, ಗ್ರಾಮೀಣ ಪ್ರದೇಶದಲ್ಲಿ 42.5ಶೇ. ಚಿಲ್ಲರೆ ವ್ಯಾಪಾರದಲ್ಲಿ ತೊಡಗಿದ್ದರೆ, ನಗರ ಪ್ರದೇಶಗಳಲ್ಲಿ ಇದು 50.5ಶೇ. ಉದ್ಯೋಗಾವಕಾಶಗಳ ದೃಷ್ಟಿಯಿಂದ ನೋಡಿದರೆ, ಗ್ರಾಮೀಣ ಪ್ರದೇಶಗಳಲ್ಲಿ 38.2ಶೇ. ಮತ್ತು ನಗರ ಪ್ರದೇಶಗಳಲ್ಲಿ 46.4ಶೇ. ಇಂತಹ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬ ಸಂಗತಿಯನ್ನು ಎತ್ತಿ ತೋರಿದ್ದೆವು. ಆದ್ದರಿಂದ ಇಂದು ಚಿಲ್ಲರೆ ವ್ಯಾಪಾರದ ಮೇಲೆ ಕೋಟ್ಯಂತರ ಭಾರತೀಯ ಜನರ ಬದುಕು ನಿಂತಿದೆ. ಇದನ್ನೆಲ್ಲ ಬುಡಮೇಲು ಮಾಡಿ ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರವೇಶ ನೀಡಿದರೆ, ಅದು ಲಕ್ಷಾಂತರ ಮಂದಿಯನ್ನು ಬಡತನ ಮತ್ತು ಸಂಕಟಗಳಿಗೆ ನೂಕುವ ಕೆಲಸವಾಗುತ್ತದೆ. ಇದು ಈಗಾಗಲೇ ದಿನಕ್ಕೆ 20ರೂ.ಗಿಂತಲೂ ಕಡಿಮೆ ಆದಾಯದಲ್ಲಿ ಬದುಕುತ್ತಿರುವ 80 ಕೋಟಿ 'ನಿಜವಾದ ಭಾರತದ' ಜನತೆಯ ಸಂಕಟಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಸೂಪರ್ ಮಾರ್ಕೆಟ್ ದೈತ್ಯ ಕಂಪನಿಗಳ ಪ್ರವೇಶದಿಂದ ಬೆಲೆಗಳು ಇಳಿಯುತ್ತವೆ, ಉದ್ಯೋಗಾವಕಾಶ ಹೆಚ್ಚುತ್ತದೆ ಎಂಬುದು ಕೇವಲ ಮಿಥ್ಯೆ ಎಂಬುದನ್ನು ಹಲವು ಅಧ್ಯಯನಗಳು ತೋರಿಸಿವೆ. ಅಮೆರಿಕಾದ ಪ್ರತಿನಿಧಿ ಸದನದ ಸಮಿತಿಯ ಒಂದು ವರದಿ "ವಾಲ್‌ಮಾರ್ಟ್‌ನ ಯಶಸ್ಸು ಎಂದರೆ ಸಂಬಳ–ಸೌಲಭ್ಯಗಳನ್ನು ಕೆಳಕ್ಕೆ ತಳ್ಳುವ ಒತ್ತಡ, ಮೂಲಭೂತ ಕಾರ್ಮಿಕ ಹಕ್ಕುಗಳ ವ್ಯಾಪಕ ಉಲ್ಲಂಘನೆ ಮತ್ತು ದೇಶದೆಲ್ಲೆಡೆ ಸಮುದಾಯಗಳಲ್ಲಿ ಬದುಕುವ ಜನಗಳ ಜೀವನ ಮಟ್ಟಗಳಿಗೆ ಬೆದರಿಕೆ ಎಂದೇ ಅರ್ಥ ಬಂದಿದೆ. ಒಂದು ವ್ಯವಹಾರದ ಯಶಸ್ಸು ಅಲ್ಲಿಯ ಕಾರ್ಮಿಕರ ಮತ್ತು ಅವರ ಕುಟುಂಬಗಳ ಹಿತಗಳನ್ನು ಬಲಿಗೊಟ್ಟು ಬರಬೇಕಾಗಿಲ್ಲ. ಇಂತಹ ದೂರದೃಷ್ಟಿಯಿಲ್ಲದ ಲಾಭಬಡುಕ ಕಾರ್ಯತಂತ್ರಗಳು ನಮ್ಮ ಆರ್ಥಿಕವನ್ನು ಬುಡಮೇಲು ಮಾಡುತ್ತವೆ" ಎಂದು ಹೇಳಿತ್ತು.

ಎಲ್ಲವೂ ಒಬಾಮರಿಗೆ ಕೊಟ್ಟ ಮಾತಿನಂತೆ

ಪ್ರಧಾನ ಮಂತ್ರಿಗಳು ಬಾಲಿಯಲ್ಲಿ ಇತ್ತೀಚೆಗೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಅಧ್ಯಕ್ಷ ಒಬಾಮರನ್ನು ಭೇಟಿ ಮಾಡಿದಾಗ ಕೊಟ್ಟ ಒಂದು ವಚನದ ಪರಿಣಾಮ ಎಂಬ ವಾಸನೆಯನ್ನು ಈ ನಿರ್ಧಾರ ಬೀರುತ್ತಿದೆ ಎಂಬುದು ಸ್ಪಷ್ಟ. ಗಂಭೀರವಾದ ಜಾಗತಿಕ ಬಿಕ್ಕಟ್ಟು ಮತ್ತು ದುಪ್ಪಟ್ಟು ಹಿಂಜರಿತದ ಹಿನ್ನೆಲೆಯಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಲಾಭ ಗಳಿಸುವ ಹೊಸ ಮಾರ್ಗಗಳ ಹುಡುಕಾಟದಲ್ಲಿದೆ. ಇಂತಹ ಸನ್ನಿವೇಶದಲ್ಲಿ ಭಾರತೀಯ ಚಿಲ್ಲರೆ ಮಾರಾಟ ವಲಯ ಅದಕ್ಕೆ ಒಂದು ಲಾಭದಾಯಕ ಆಯ್ಕೆ. ಯುಪಿಎ–2 ಸರಕಾರದ ಈ ನಿರ್ಣಯ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಭಾರತೀಯ ಜನತೆ ಮತ್ತು ಭಾರತೀಯ ಆರ್ಥಿಕವನ್ನು ಬಲಿಗೊಟ್ಟು ತಮ್ಮ ಲಾಭವನ್ನು ಗರಿಷ್ಟಗೊಳಿಸಿಕೊಳ್ಳಲು ಅವಕಾಶ ನೀಡುತ್ತದೆ.

ಅಲ್ಲದೆ, ಈ ನಿರ್ಧಾರ ರೂಪಾಯಿಯ ಮೌಲ್ಯದಲ್ಲಾಗುತ್ತಿರುವ ಗಮನಾರ್ಹ ಇಳಿಕೆಯನ್ನು ತಡೆಯಲು ನೆರವಾಗುತ್ತದೆ ಎಂಬುದೂ ಕೂಡ ಭ್ರಮೆಯಷ್ಟೇ. ಎಫ್‌ಡಿಐ ಗೆ ಅವಕಾಶ ಕಲ್ಪಿಸಿದರೆ, ಡಾಲರನ್ನು ತಮ್ಮ ಮೀಸಲು ಕರೆನ್ಸಿಯಾಗಿಸುವ ಪ್ರವೃತ್ತಿ ತೋರುತ್ತಿರುವ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಮತ್ತು ದೇಶೀ ಬಂಡವಾಳಕ್ಕೆ ಅದನ್ನು ಬದಲಿಸಲು ಸಕಾರಾತ್ಮಕ ಸಂಕೇತ ನೀಡಿದಂತಾಗುತ್ತದೆ, ಅದರಿಂದ ರೂಪಾಯಿಯ ಮೌಲ್ಯದಲ್ಲಿನ ಇಳಿಕೆ ನಿಲ್ಲುತ್ತದೆ ಎಂಬುದು ಅವರ ತರ್ಕ. ಆದರೆ ಇಂತಹ ಪ್ರವೃತ್ತಿ ಕಾಣುತ್ತಿರುವುದು ಯುರೋಪಿಯನ್ ಒಕ್ಕೂಟವನ್ನು ಆವರಿಸಿರುವ ಬಿಕ್ಕಟ್ಟು ಮತ್ತು ಅದರಿಂದಾಗಿ ಯುರೋಪಿನ ಸರ್ವಸಾಮಾನ್ಯ ಕರೆನ್ಸಿಯಾಗಿ 'ಯುರೋ'ದ ಅಸ್ತಿತ್ವಕ್ಕೇ ಸಂಚಕಾರ ಬಂದಿರುವುದು, ಜಪಾನಿನ ತೀವ್ರ ಆರ್ಥಿಕ ಹಣದಿಳಿಕೆಯಿಂದಾಗಿ ಯೆನ್ ಮೌಲ್ಯ ಗಮನಾರ್ಹವಾಗಿ ಇಳಿದಿರುವುದು ಇತ್ಯಾದಿ ಅಂತರ್ರಾಷ್ಟ್ರೀಯ ಬೆಳವಣಿಗೆಗಳಿಂದಾಗಿ. ಆದ್ದರಿಂದ ಸರಕಾರದ ಈ ತರ್ಕ, ಭಾರತದ ಚಿಲ್ಲರೆ ವ್ಯಾಪಾರ ವಲಯವನ್ನು ಅಂತರ್ರಾಷ್ಟ್ರೀಯ ಬಂಡವಾಳಕ್ಕೆ ತನ್ನ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಿಕೊಳ್ಳಲಿಕ್ಕಾಗಿ ತೆರೆಯುವುದನ್ನು ಸಮರ್ಥಿಸಿಕೊಳ್ಳಲು ತೊಡಿಸುವ ಮುಖವಾಡವಷ್ಟೇ.

ಇನ್ನು, ಆಹಾರ ಹಣದುಬ್ಬರವನ್ನು ತಡೆಯುವಲ್ಲಿ ಎಫ್‌ಡಿಐ ಪ್ರೇರಿತ ಸುಪರ್ ಮಾರ್ಕೆಟ್‌ಗಳ ಪಾತ್ರದ ಬಗ್ಗೆ ಹಲವು ಅಧ್ಯಯನಗಳಾಗಿವೆ. ಮೆಕ್ಸಿಕೊ, ನಿಕರಗುವ, ಅರ್ಜೆಂಟಿನಾ ಮುಂತಾದ ಲ್ಯಾಟಿನ್ ಅಮೆರಿಕನ್ ದೇಶಗಳ, ಕೀನ್ಯಾ, ಮಡಗಾಸ್ಕರ್ ಮುಂತಾದ ಆಫ್ರಿಕನ್ ದೇಶಗಳ ಹಾಗೂ ವಿಯೆಟ್ನಾಮ್, ಥಾಯ್ಲೆಂಡಿನ ಅನುಭವಗಳ ಪ್ರಕಾರ ಸುಪರ್ ಮಾರ್ಕೆಟ್‌ಗಳಲ್ಲಿ ಆಹಾರ ವಸ್ತುಗಳು ಮತ್ತು ತರಕಾರಿಗಳ ಬೆಲೆಗಳು ಸಾಂಪ್ರದಾಯಿಕ ಮಾರುಕಟ್ಟೆಗಳಿಗಿಂತ ಹೆಚ್ಚಿರುತ್ತವೆ.

ಈ ದೈತ್ಯಗಾತ್ರದ ಸರಣಿ ಸೂಪರ್ ಮಾರ್ಕೆಟ್‌ಗಳು ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತವೆ ಎಂಬ ತರ್ಕವೂ ವಿಯಟ್ನಾಮಿನ ಅನುಭವದಲ್ಲಿ ಸುಳ್ಳಾಗಿದೆ. ಒಂದು ನಿರ್ದಿಷ್ಟ ಪ್ರಮಾಣದ ಮಾರಾಟವನ್ನು ನಿರ್ವಹಿಸುವಲ್ಲಿ ಬೀದಿ ಮಾರಾಟದಲ್ಲಿ 18 ಉದ್ಯೋಗಾವಕಾಶಗಳು ನಿರ್ಮಾಣವಾದರೆ,



ಕೃಪೆ: ಪ್ರಜಾವಾಣಿ

ಸಾಂಪ್ರದಾಯಿಕ ಚಿಲ್ಲರೆ ವ್ಯಾಪಾರದಲ್ಲಿ 10, ಅಂಗಡಿಗಳಲ್ಲಿ 8 ಉದ್ಯೋಗಾವಕಾಶಗಳು ಉಂಟಾಗುತ್ತವೆ, ಆದರೆ ಅಷ್ಟು ಕೆಲಸ ಮಾಡಲು ಸೂಪರ್ ಮಾರ್ಕೆಟಿನಲ್ಲಿ ನಾಲ್ಕೇ ಮಂದಿ ಸಾಕು. ನಾಲ್ಕು ಟನ್ ಟೊಮೆಟೋ ಮಾರಾಟದಲ್ಲಿ ಈ ಸೂಪರ್ ಮಾರ್ಕೆಟ್‌ಗಳು ಸರಾಸರಿ ಸುಮಾರು 5 ಮಂದಿಗೆ ಕೆಲಸ ಕೊಟ್ಟರೆ, ಸಾಂಪ್ರದಾಯಿಕ ಮಾರಾಟದಲ್ಲಿ 11–12 ಮಂದಿಗೆ ಕೆಲಸ ಸಿಗುತ್ತದೆ. ಇದು ಎಲ್ಲೆಡೆ ಆಗಿರುವ ಅನುಭವ.

ಉತ್ಪಾದಕನಿಗೆ ಈ ಚಿಲ್ಲರೆ ವ್ಯಾಪಾರ ವಲಯದ ದೈತ್ಯಕಂಪನಿಗಳಿಂದ ಉತ್ತಮ ಬೆಲೆ ಸಿಗುತ್ತದೆ ಎಂಬುದು ಕೂಡ ಒಂದು ಮಿಥ್ಯೆಯೇ. ಘಾನಾದ ಒಬ್ಬ ಕೋಕೋ ರೈತನ ಉತ್ಪನ್ನಕ್ಕೆ ಅದರಿಂದ ತಯಾರಿಸುವ ಮಿಲ್ಕ್ ಚಾಕೊಲೆಟ್‌ನ ಬೆಲೆಯ 3.9% ಮಾತ್ರ ಸಿಗುತ್ತದೆ, ಆದರೆ ಅದರ ಚಿಲ್ಲರೆ ಮಾರಾಟದ ಲಾಭದ ಪ್ರಮಾಣ 34ಶೇ. ಒಬ್ಬ ಬಾಳೆಹಣ್ಣು ಉತ್ಪಾದಕ ಅದರಿಂದ ತಯಾರಿಸುವ ಆಹಾರ ಪದಾರ್ಥದ ಬೆಲೆಯಲ್ಲಿ 5ಶೇ, ಮಾತ್ರ ಪಡೆಯುತ್ತಾನೆ, 34 ಶೇ.ದಷ್ಟು ಸೂಪರ್ ಮಾರ್ಕೆಟ್ ಮಾಲಕನಿಗೆ ಲಾಭವಾಗಿ ಹೋಗುತ್ತದೆ. ಅದೇ ರೀತಿ ಒಂದು ಜತೆ ಜೀನ್ಸ್‌ಗೆ ಗ್ರಾಹಕ ತೆರುವ ಬೆಲೆಯಲ್ಲಿ ಮಾರಾಟ ಕಂಪನಿಯ ಲಾಭದ ಪಾಲು 54ಶೇ., ಅದನ್ನು ತಯಾರಿಸುವ ಕಾರ್ಮಿಕನಿಗೆ ಸಿಗುವುದು ಕೇವಲ 12ಶೇ.

ಯುಪಿಎ ಸರಕಾರ ತನ್ನ ನಿರ್ಧಾರವನ್ನು ರಾಜ್ಯ ಸರಕಾರಗಳು ಒಪ್ಪಿದರೆ ಮಾತ್ರವೇ ಜಾರಿಗೊಳಿಸಲಾಗುವುದು ಎಂದು ಈಗ ವಾದಿಸುತ್ತಿದೆ. ರಾಜ್ಯ ಸರಕಾರಗಳು ಅದನ್ನು ಜಾರಿಗೊಳಿಸಬಹುದು, ಅಥವ ಜಾರಿಗೊಳಿಸದೇ ಇರಬಹುದು. ಅಂದರೆ ಈ ರಾಜ್ಯಗಳನ್ನು ಬಿಟ್ಟು ಅಂಡಮಾನ್, ನಿಕೋಬಾರ್, ಲಕ್ಷದ್ವೀಪದಂತಹ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾತ್ರವೇ ಇದನ್ನು ಜಾರಿಗೆ ತರಲಾಗುವುದು ಎಂದು ನಾವು ನಂಬಬೇಕೆಂಬುದು ಮನಮೋಹನ್ ಸಿಂಗ್ ಸರಕಾರದ ಆಶಯವೇನು?

ಈ ಎಲ್ಲ ವಿಷಯಗಳಲ್ಲಿ ಏನಾದರೂ ಉತ್ತಮ ಅಂಶಗಳಿವೆಯೋ, ಇಲ್ಲವೇ ಎಂಬುದನ್ನು ಚರ್ಚಿಸಬೇಕಾದ್ದು ಸಂಸತ್ತಿನಲ್ಲಿ. ಅದು ಮೊದಲು ಸರಕಾರ ಈ ನಿರ್ಧಾರವನ್ನು ಹಿಂತೆಗೆದುಕೊಂಡು ಒಂದು ಅರ್ಥಪೂರ್ಣ ಚರ್ಚೆಗೆ ಅವಕಾಶ ಮಾಡಿಕೊಟ್ಟಾಗ ಮಾತ್ರವೇ ಸಾಧ್ಯ. ಇಂತಹ ಚರ್ಚೆಯ ನಂತರ ಸದನದ ಭಾವನೆಯನ್ನು ಎತ್ತಿ ಹಿಡಿಯುವ ಒಂದು ನಿರ್ಧಾರವನ್ನು ಕೈಗೊಳ್ಳುವುದಾಗಿ ಸರಕಾರ ವಚನ ಕೊಡಬೇಕಾಗುತ್ತದೆ.

ಸರಕಾರದ ಆಶಯಗಳ ಬಗ್ಗೆ ಗಂಭೀರ ಸಂದೇಹ

ಹೀಗೆ ಚಳಿಗಾಲದ ಅಧಿವೇಶನವನ್ನು ಉಳಿಸಬೇಕೋ ಅಥವ ವ್ಯರ್ಥವಾಗಲು ಬಿಡಬೇಕೋ ಎಂಬುದು ಇಂತಹ ಒಂದು ತರ್ಕಬದ್ಧ ಬೇಡಿಕೆಗೆ ಒಪ್ಪಲು ಸರ್ಕಾರ ಸಿದ್ಧವಿದೆಯೇ ಎಂಬುದನ್ನೇ ಅವಲಂಬಿಸಿದೆ. ಈ ಚಳಿಗಾಲದ ಅಧಿವೇಶನದ ಮುಂದೆ ಲೋಕಪಾಲ ಮಸೂದೆ ಸೇರಿದಂತೆ ಬಹಳ ಮಹತ್ವದ ಮಸೂದೆಗಳ ಅಂಗೀಕಾರದ ಅಜೆಂಡಾ ಇದೆ. ಕರಡು ಲೋಕಪಾಲ ಮಸೂದೆಯನ್ನು ಪರೀಕ್ಷಿಸುತ್ತಿರುವ ಸಂಸದೀಯ ಸ್ಥಾಯಿ ಸಮಿತಿ ಸಂಸತ್ತಿಗೆ ಸೂಚನೆಗಳ ಶಿಫಾರಸು ಮಾಡಲು ತನ್ನ ಕಲಾಪಗಳನ್ನು ಮುಗಿಸಿದೆ ಎಂದು ತಿಳಿದು ಬಂದಿದೆ. ಸರಕಾರ ನೀಡಿದ ವಚನದಂತೆ ಮತ್ತು ಎರಡೂ ಸದನಗಳ ಒಂದು ಸರ್ವಸಮ್ಮತ ನಿರ್ಣಯದಂತೆ ಈ ಮಸೂದೆ ಪ್ರಸಕ್ತ ಅಧಿವೇಶನದಲ್ಲಿ ಬೆಳಕು ಕಾಣಬಹುದೇ ಎಂಬುದು ಚಿಲ್ಲರೆ ವ್ಯಾಪಾರ ವಲಯದಲ್ಲಿ ಎಫ್‌ಡಿಐ ಗೆ ಅನುಮತಿ ನೀಡುವ ಕೇಂದ್ರ ಸಂಪುಟದ ನಿರ್ಧಾರವನ್ನು ಬದಲಿಸುವ ಬಗ್ಗೆ ಸರಕಾರದ ನಿಲುವು ಏನಿರುತ್ತದೆ ಎಂಬುದನ್ನೇ ಅವಲಂಬಿಸಿದೆ.

ಆ ನಿರ್ಧಾರ ಬದಲಾಗದಿದ್ದರೆ, ಸರಕಾರದ ಆಶಯಗಳ ಬಗ್ಗೆ ಗಂಭೀರ ಮತ್ತು ಸಕಾರಣ ಸಂದೇಹಗಳು ಏಳುವುದು ಸಹಜ. ಚಳಿಗಾಲದ ಅಧಿವೇಶನ ಈ ರೀತಿ ಭಂಗಗೊಂಡರೆ ಸರಕಾರಕ್ಕೆ ಬೆಲೆಯೇರಿಕೆ, ಭ್ರಷ್ಟಾಚಾರ, ಕಪ್ಪುಹಣದ ಪ್ರಶ್ನೆಗಳನ್ನು ಮಾತ್ರವಲ್ಲದೆ, ಲೋಕಪಾಲ ಮಸೂದೆಯಲ್ಲಿ ಇರುವ ವಿವಾದಾತ್ಮಕ ಪ್ರಶ್ನೆಗಳನ್ನು ಎದುರಿಸುವುದರಿಂದ, ಅದರಿಂದಾಗುವ ಮುಜುಗರವನ್ನು ತಪ್ಪಿಸಿಕೊಳ್ಳಲು ಅವಕಾಶವಾಗುತ್ತದೆ. ಕಳೆದ ಎರಡು ದಶಕಗಳಲ್ಲಿ ಲೋಕಪಾಲ ಮಸೂದೆ ಒಂದಕ್ಕಿಂತ ಹೆಚ್ಚು ಬಾರಿ ಸಂಸತ್ತಿನ ಮುಂದೆ ಬಂತು, ಆದರೂ ಪ್ರಧಾನ ಮಂತ್ರಿಗಳನ್ನು ಅದರ ವ್ಯಾಪ್ತಿಗೆ ಸೇರಿಸಬೇಕೇ–ಬೇಡವೆ ಮುಂತಾದ ಪ್ರಶ್ನಗಳಲ್ಲಿ ಭಿನ್ನಾಭಿಪ್ರಾಯಗಳಿಂದಾಗಿ ಇನ್ನೂ ಅದು ಬೆಳಕು ಕಂಡಿಲ್ಲ ಎಂಬುದನ್ನು ಇಲ್ಲಿ ನೆನೆಪಿಸಿಕೊಳ್ಳಬಹುದು. ಈ ಅಧಿವೇಶನದಲ್ಲಿ ಸಂಸತ್ತಿನ ಕಲಾಪಗಳಿಗೆ ಅಡ್ಡಿ ಕೂಡ ಇಂತಹ ಕಾಲಹರಣವನ್ನು ಮುಂದುವರೆಸಿ ದೇಶಕ್ಕೆ ಒಂದು ಪರಿಣಾಮಕಾರಿ ಲೋಕಪಾಲ ವ್ಯವಸ್ಥೆ ಬರದಂತೆ ಮಾಡಬಹುದು. ಸಂಸತ್ತಿನ ಕಲಾಪಗಳಿಗೆ ಈ ರೀತಿ ಅಡ್ಡಿ ತರುತ್ತಿರುವುದಕ್ಕೆ ಇಂದು ಸರಕಾರವೇ ಹೊಣೆ.

ಮುಂದೇನು ಎಂದು ಈಗ ಸರಕಾರವೇ ನಿರ್ಧರಿಸಬೇಕಾಗಿದೆ. ಅದು ನಿಜವಾಗಿಯೂ 'ಆಮ್ ಆದ್ಮಿ'ಯ ಕಲ್ಯಾಣಕ್ಕೆ ಬದ್ಧವಾಗಿದ್ದರೆ, ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಕುರಿತ ಸಂಪುಟ ನಿರ್ಧಾರವನ್ನು ಹಿಂತೆಗೆದುಕೊಂಡು ಈ ಇಕ್ಕಟ್ಟನ್ನು ಬಗೆಹರಿಸಬೇಕು, ಸಂಸತ್ತಿನಲ್ಲಿ ಅದನ್ನು ಚರ್ಚಿಸಬೇಕು ಮತ್ತು ಸದನದ ಭಾವನೆಗೆ ಅನುಗುಣವಾಗಿ ಒಂದು ನಿರ್ಣಯ ಕೈಗೊಳ್ಳಬೇಕು.

ಸದನದಲ್ಲಿ ಈ ಸಮರ ಸಾಗಿರುವಂತೆಯೇ, ಸರಕಾರ ಈ ನಿರ್ಣಯವನ್ನು ಹಿಂತೆಗೆದುಕೊಳ್ಳುವಂತೆ ಜನತೆಯು ಹೋರಾಟಗಳ ಮೂಲಕ ಒತ್ತಡ ಹೆಚ್ಚಿಸಬೇಕು. ವ್ಯಾಪಾರಿಗಳ ಸಂಘಟನೆಗಳು ಕರೆ ನೀಡಿರುವ ಹರತಾಳಕ್ಕೆ ಹಲವು ರಾಜಕೀಯ ಪಕ್ಷಗಳು ಬೆಂಬಲ ಸೂಚಿಸಿವೆ. ಭಾರತದ ಚಿಲ್ಲರೆ ವ್ಯಾಪಾರವನ್ನು ತೆರೆಯುವ ಹೆಸರಿನಲ್ಲಿ, ಈಗಾಗಲೇ ನಿರಂತರ ಬೆಲೆಯೇರಿಕೆಗಳಿಂದ ಸಂಕಟ ಪಡುತ್ತಿರುವ ನಮ್ಮ ಜನಗಳ ಬದುಕನ್ನು ಬಲಿಗೊಟ್ಟು ವಿದೇಶಿ ಬಂಡವಾಳದ ಲಾಭಗಳಿಗೆ ತೆರೆದಿಡುವ ಮೂಲಕ ಭಾರತದ ಸಾರಾಸಗಟು ಮಾರಾಟಕ್ಕೆ ಮುಂದಾಗಿರುವುದನ್ನು ತಡೆಯಲು ಇಂತಹ ಹೋರಾಟವನ್ನು ಇನ್ನಷ್ಟು ಬಲಪಡಿಸಬೇಕಾಗಿದೆ.



ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ದುಡಿಯುವ ವರ್ಗಕ್ಕೆ ದ್ರೋಹವೆಸಗಿವೆ – ಕುಂದಾಪುರ ಸಮ್ಮೇಳನದಲ್ಲಿ ಬಿ. ಮಾಧವ

ಸಿಪಿಐ(ಎಂ) ಪಕ್ಷದ 20ನೇ ಕುಂದಾಪುರ ತಾಲೂಕು ಸಮ್ಮೇಳನದ ಅಂಗವಾಗಿ ನಡೆದ ಬಹಿರಂಗ ಅಧಿವೇಶನದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ. ಮಾಧವರವರು ಪ್ರತಿ 3 ವರ್ಷಕ್ಕೆ ಒಮ್ಮೆ ಸ್ಥಳೀಯ ಸಮಿತಿ ಮತ್ತು ಶಾಖೆಗಳಿಂದ ಅಖಿಲ ಭಾರತದ ಮಟ್ಟದವರೆಗೆ ಸಮ್ಮೇಳನಗಳನ್ನು ನಡೆಸಿ, ಈ ಹಿಂದಿನ 3 ವರ್ಷಗಳ ಅವಧಿಯಲ್ಲಿ ನಡೆದ ಸಂಘಟನೆ ಮತ್ತು ಹೋರಾಟದ ವಿಮರ್ಶೆ ಮಾಡಿ, ಮುಂದೆ ಮಾಡಬೇಕಾದುದರ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳುವುದು ಹಾಗೂ ಸಮಿತಿ ಸದಸ್ಯರ ಆಯ್ಕೆ ಮತ್ತು ಕಾರ್ಯದರ್ಶಿ ಆಯ್ಕೆ ನಡೆಯುವ ಆಂತರಿಕ ಪ್ರಜಾಪ್ರಭುತ್ವ ನಮ್ಮ ಪಕ್ಷದಲ್ಲಿ ಮಾತ್ರವಿದೆ ಎಂದು ವಿವರಿಸಿದರು. ಯಾವುದೇ ಭ್ರಷ್ಟಾಚಾರಕ್ಕೆ ಅವಕಾಶವಿಲ್ಲದೇ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಬೆಳವಣಿಗೆ ಆಗುತ್ತಿದೆ. ಚುನಾವಣೆಯೇ ಮುಖ್ಯವಲ್ಲ. ಜನತೆಯನ್ನು ಬಾಧಿಸುವ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಂಘಟಿತ ಹೋರಾಟಕ್ಕೆ ಹೆಚ್ಚಿನ ಆದ್ಯತೆ ನೀಡುತ್ತೇವೆ ಎಂದು ಹೇಳಿದರು.

ಎಡಪಕ್ಷಗಳನ್ನು ಮುಂದಿನ ಅವಧಿಗೆ ಅಧಿಕಾರದಲ್ಲಿರದಂತೆ ಮತ್ತು ಒಂದು ಪ್ರಮುಖ ರಾಜಕೀಯ ಶಕ್ತಿಯಾಗಿ ಹೊರ ಹೊಮ್ಮದಿರುವಂತ ಆಶಯಗಳು ಪಶ್ಚಿಮ ಬಂಗಾಳದ ನಕ್ಸಲರಿಂದ ಹಿಡಿದು ಅಮೇರಿಕಾದ ಬಂಡವಾಳ ಶಾಹಿಗಳ ಮನದಲ್ಲಿಯೂ ಇದ್ದಿತು. ಎಡಪಕ್ಷಗಳನ್ನು ವ್ಯವಸ್ಥಿತವಾಗಿ ಮುಗಿಸುವ



ಸಂಚು 2004ರ ಮಹಾ ಚುನಾವಣೆಯ ನಂತರದ ದಿನಗಳಿಂದಲೇ ಪ್ರಾರಂಭಗೊಂಡಿತ್ತು. ಕಾಂಗ್ರೇಸ್ ನೇತೃತ್ವದ ಯುಪಿಎ ಸರಕಾರದ ನವಉದಾರೀಕರಣ, ಖಾಸಗೀಕರಣ ನೀತಿಗಳನ್ನು ಸ್ಪಷ್ಟವಾಗಿ ವಿರೋಧಿಸುತ್ತಿದ್ದ ಎಡಪಕ್ಷಗಳ ಧೋರಣೆಗಳು ಅಂತರಾಷ್ಟ್ರೀಯ ಬಂಡವಾಳ ಶಾಹಿ ವ್ಯವಸ್ಥೆಗೆ ನುಂಗಲಾರದ ತುತ್ತಾಗಿದ್ದಿತು.ಎಡಪಕ್ಷಗಳು ಚುನಾವಣೆಯಲ್ಲಿ ಸೋಲನ್ನನುಭವಿಸಿರಬಹುದು. ಆದರೆ ಎಡಧೋರಣೆಗಳು ಸೋತಿಲ್ಲವೆನ್ನುವುದು ಸ್ಪಷ್ಟ ಮುಂದೆ ಜನರ ವಿಶ್ವಾಸಗಳಿಸುತ್ತೇವೆ ಎಂದು ವಿವರಿಸಿದರು. ದೇಶ ವ್ಯಾಪಿ, ಭ್ರಷ್ಟಾಚಾರ ತಾಂಡವವಾಡುತ್ತಿವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ಭ್ರಷ್ಟಾಚಾರ ಹಾಗೂ ಬೆಲೆ ಏರಿಕೆ ನೀತಿಗಳ ವಿರುದ್ಧ ಜನ ಸಾಮಾನ್ಯರು ಮಾತನಾಡುತ್ತಿದ್ದಾರೆ. ಹಾಗೂ ಪ್ರತಿಭಟನೆಗಳು ಆರಂಭಗೊಂಡಿವೆ. ದಕ್ಷಿಣ ಭಾರತದ ಬಿಜೆಪಿ ಹೆಬ್ಬಾಗಿಲು, ಕರ್ನಾಟಕ ಎಂಬ ಹಿರಿಮೆಯೊಂದಿಗೆ ಅಧಿಕಾರಕ್ಕೇರಿದ ಬಿಜೆಪಿ ಸರಕಾರದ ಬಗ್ಗೆ ಜನ ಬೇಸತ್ತು ಹೋಗಿದ್ದಾರೆ.

ಸ್ವಜನ ಪಕ್ಷಪಾತ, ಲಂಚಗುಳಿತನ, ಭೂ ಕಬಳಿಕೆ, ಗಣಿ ಹಗರಣ ಮುಂತಾದವುಗಳೊಂದಿಗೆ ಕೋಟಿಗಟ್ಟಲೆ ಹಣ ಮತ್ತು ಆಸ್ತಿ ಮಾಡಿಕೊಂಡಿರುವ ಯಡ್ಯೂರಪ್ಪ ಮತ್ತು ಅವರ ಭ್ರಷ್ಟ ಮಂತ್ರಿಗಳ ಲಜ್ಜೆಗೇಡಿತನದಿಂದ ಕರ್ನಾಟಕದ ಜನ ರಾಜಕೀಯವನ್ನೇ ದ್ವೇಷಿಸುವ ಪರಿಸ್ಥಿತಿ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಹೆಚ್ಚು ಹೆಚ್ಚು ಜನ ವಿರೋಧಿ ನೀತಿಯನ್ನು ಅನುಸರಿಸುತ್ತಿದ್ದು, ಅವುಗಳ ವಿರುದ್ಧ ಜಿಲ್ಲಾ ಮತ್ತು ರಾಜ್ಯವ್ಯಾಪಿ ಹೋರಾಟ ಬೆಳೆಸಿ ಎಂದು ಕರೆ ನೀಡಿದರು.

ಸಾರ್ವಜನಿಕ ಸಭೆಯನ್ನುದ್ದೇಶಿಸಿ ಪಕ್ಷದ ಜಿಲ್ಲಾ ಕಾರ್ಯದರ್ಶಿಯವರು ಮಾತನಾಡಿ ಜಿಲ್ಲಾ ಮತ್ತು ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯರು ಶ್ರಮಿಸಬೇಕೆಂದರು.


ಸಾರ್ವಜನಿಕ ಸಭೆಗೆ ಬಂದವರನ್ನು ತಾಲೂಕಾ ಕಾರ್ಯದರ್ಶಿಯವರು ಸ್ವಾಗತಿಸಿ, ತಾಲೂಕಾ ಸಮ್ಮೇಳನದಲ್ಲಿ ಅಂಗೀಕರಿಸಿದ ನಿರ್ಣಯಗಳನ್ನು ವಿವರಿಸಿದರು. ಯು.ದಾಸ ಭಂಡಾರಿಯವರು ಸಭೆಯ ಅಧ್ಯಕ್ಷತೆ ವಹಿಸಿದರು. ತಾಲೂಕಾ ಸಮಿತಿ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವೆಂಕಟೇಶ ಕೋಣಿಯವರು ಧನ್ಯವಾದವನ್ನು ಅರ್ಪಿಸಿದರು. ◆

ಸಿಪಿಐ(ಎಂ) 20ನೇ ಉಳ್ಳಾಲ ವಲಯ ಸಮ್ಮೇಳನ

ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೇಸ್ ನೇತೃತ್ವದ ಯುಪಿಎ ಸರ್ಕಾರ ಮತ್ತು ರಾಜ್ಯವನ್ನಾಳುತ್ತಿರುವ ಬಿಜೆಪಿ ಸರ್ಕಾರ ಭ್ರಷ್ಟಾಚಾರ ಹಗರಣಗಳಲ್ಲಿ ಸಿಲುಕಿ ಜನತೆಯ ವಿಶ್ವಾಸವನ್ನೇ ಕಳೆದುಕೊಳ್ಳುತ್ತಿವೆ. ಇದರಿಂದ ಪ್ರಜಾಪ್ರಭುತ್ವ ಮತ್ತು ಕಾನೂನಿನ ಆಡಳಿತ ಅಪಾಯದಲ್ಲಿದೆ ಎಂದು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ನುಡಿದರು. ಅವರು ಸಿಪಿಐ(ಎಂ) ಪಕ್ಷದ 20ನೇ ಉಳ್ಳಾಲ ವಲಯ ಸಮ್ಮೇಳನವನ್ನು ನವಂಬರ್ 21 ರಂದು ಉದ್ಘಾಟಿಸಿ ಮಾತನಾಡುತ್ತಿದ್ದರು




ಸಮ್ಮೇಳನದ ಧ್ವಜಾರೋಹಣವನ್ನು ಪಕ್ಷದ ಹಿರಿಯ ಸದಸ್ಯ ಗಂಗಯ್ಯ ಗಟ್ಟಿ ನೆರವೇರಿಸಿದರು. ರಾಮಚಂದ್ರ ಬಬ್ಬುಕಟ್ಟೆ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.



ಪ್ರತಿನಿಧಿ ಅಧಿವೇಶನವು ಕಳೆದ 4 ವರ್ಷಗಳ ಸ್ಥಳೀಯ ವಿದ್ಯಮಾನ ಹಾಗೂ ಪಕ್ಷದ ಚಟುವಟಿಕೆಗಳ ವಿಮರ್ಶೆ ನಡೆಸಿತು. ಪ್ರತಿನಿಧಿ ಅಧಿವೇಶನವು ಮುಂದಿನ ಅವಧಿಗೆ 19 ಮಂದಿ ಸದಸ್ಯರುಳ್ಳ ವಲಯ ಸಮಿತಿಯನ್ನು ಆಯ್ಕೆ ಮಾಡಿತು. ಕೃಷ್ಣಪ್ಪ ಸಾಲ್ಯಾನ್ ಅವರು ವಲಯ ಸಮಿತಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಸಮ್ಮೇಳನ ನಡೆದ ಕೊಲ್ಯದಿಂದ ತೊಕ್ಕೋಟು ಪೇಟೆಯವರೆಗೆ ಸಾಯಂಕಾಲ ವರ್ಣರಂಜಿತ ಮೆರವಣಿಗೆ ನಡೆಯಿತು. ಕೆಂಪು ಸಮವಸ್ತ್ರಧಾರಿಗಳಾದ ಸ್ತ್ರೀ ಪುರುಷ ಸಂಗಾತಿಗಳ ಆಕರ್ಷಕ ಪಥಸಂಚಲನ ಮೆರವಣಿಗೆಯು ವೈಶಿಷ್ಟ್ಯವಾಗಿತ್ತು. ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ಮತ್ತು ಬಿ.ಮಾಧವ ಮಾತನಾಡಿದರು. ನೂತನ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ಹಿರಿಯ ಮುಖಂಡರಾದ ಕೆ.ಆರ್.ಶ್ರೀಯಾನ್ ಉಪಸ್ಥಿತರಿದ್ದರು.

ಇಂದು : ಗೂಂಡಾಗಳು, ಕೊಲೆಗಡುಕರು, ಕಳ್ಳರು, ಲೂಟಿಕೋರರರು
ನಿನ್ನೆ : ಅವರೇ ಗಾಂಧಿ, ಹರಿಶ್ಚಂದ್ರನ ತುಣುಕುಗಳು, ಅಭಿವೃದ್ದಿಯ ಹರಿಕಾರರು



ಆರ್.ರಾಮಕೃಷ್ಣ

ಬಿಜೆಪಿ ದರ್ಬಾರ್

ಬಳ್ಳಾರಿಯ ಉಪ ಚುನಾವಣೆಯಿಂದ ರಾಜ್ಯಕ್ಕೆ, ದೇಶಕ್ಕೆ ಏನು ಉಪಯೋಗವಾಗುತ್ತದೋ ಜನ ಅದನ್ನು ಇನ್ನು ಮುಂದೆ ನೋಡಬೇಕಿದೆ. ಆದರೆ ಈ ಚುನಾವಣೆಯಿಂದ ಒಂದು ಪ್ರಯೋಜನವಂತೂ ಜನತೆಗೆ ಆಗಿದೆ. ಅದೇನೆಂದರೆ ಚುನಾವಣಾ ಕಣ ರಂಗೇರುತ್ತಾ ಹೋದಂತೆ ಬಿಜೆಪಿ ಮುಖಂಡರು, ರಾಜ್ಯ ಸರ್ಕಾರದ ಸಚಿವರು, ಹಾಗೂ ಶಾಸಕರು ಒಂದು ಕಡೆ, ಮತ್ತೊಂದು ಕಡೆ ಇಲ್ಲಿಯವರೆಗೆ ಬಿಜೆಪಿಯ ಕಣ್ಮಣಿಯಾಗಿದ್ದು ಬಿಜೆಪಿ ತೊರೆದು ಈಗ ಸ್ವತಂತ್ರ ಅಭ್ಯರ್ಥಿಯಾಗಿರುವ ಶ್ರೀರಾಮುಲು ಅವರುಗಳು– ಜನತೆಗೆ ಗೊತ್ತಿದ್ದ, ಆದರೆ ತಾವು ಬಚ್ಚಿಟ್ಟಿದ್ದ ಹಲವು ಸತ್ಯಗಳನ್ನು ಒಂದೊಂದಾಗಿ ಜನರ ಮುಂದೆ ತೆರೆದಿಡುತ್ತಿರುವುದು.

ಬಿಜೆಪಿಯ ಸಂಸದ ಚಂದ್ರೇಗೌಡರು ಶ್ರೀರಾಮುಲು ಮತ್ತು ರೆಡ್ಡಿ ಸಹೋದರರನ್ನು 'ಕಳ್ಳರು' ಎಂದು ಕರೆದಿದ್ದಾರೆ. ಈ ಕಳ್ಳರಿಂದ ಬಿಜೆಪಿಗೆ ಕೆಟ್ಟ ಹೆಸರು ಬಂದಿದೆ ಎಂದು ಮೊನ್ನೆ ಅಣಿಮುತ್ತುಗಳನ್ನು ಉದುರಿಸಿದ್ದಾರೆ. ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿ...ಕ್ಷಮಿಸಿ ಸದಾನಂದ ಗೌಡ ......ಅವರು ಬಳ್ಳಾರಿಯ ಅಭಿವೃದ್ದಿಗೆಂದು ಸರ್ಕಾರದಿಂದ ಕೊಟ್ಟ ಒಂದು ಸಾವಿರ ಕೋಟಿ ರೂಪಾಯಿಗಳು ಏನಾಗಿದೆ ಎಂಬುದೇ ಗೊತ್ತಿಲ್ಲ. ಇಲ್ಲಿ ನೋಡಿದರೆ ಏನೂ ಅಭಿವೃದ್ಧಿಯಾಗಿಲ್ಲ..." ಎಂದು ಅಲವತ್ತುಕೊಂಡಿದ್ದಾರೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಬಳ್ಳಾರಿಯಲ್ಲಿ ಭೀತಿಯ ವಾತಾವರಣ ಇದೆ. ಶ್ರೀರಾಮುಲು–ರೆಡ್ಡಿ ಬಳಗ ಬಳ್ಳಾರಿಯಲ್ಲಿ ಗೂಂಡಾಗಿರಿ ನಡೆಸುತ್ತಿದ್ದಾರೆ ಎಂದು ಊಳಿಟ್ಟಿದ್ದಾರೆ. ಇನ್ನೂ ಸದಾನಂದ ಗೌಡರ ಸರ್ಕಾರದ ಸಚಿವ ವರ್ತೂರು ಪ್ರಕಾಶ್ ನೀಡಿರುವ ಹೇಳಿಕೆಯಂತೂ ಇನ್ನೂ ಗಂಭೀರವಾದುದಾಗಿದೆ. ಶ್ರೀರಾಮುಲು– ರೆಡ್ಡಿ ಬಳಗ ಬಳ್ಳಾರಿಯಲ್ಲಿ ಸುಮಾರು ಮೂವತ್ತು ಕೊಲೆಗಳನ್ನು ನಡೆಸಿದೆ ಎಂದು ಆಪಾದಿಸಿದ್ದಾರೆ. ಸತ್ತವರಲ್ಲಿ ಹಿಂದುಳಿದವರೆಷ್ಟು, ದಲಿತರೆಷ್ಟು ಎಂಬ ವರ್ಗೀಕೃತ ವಿವರಗಳನ್ನೂ ಸಚಿವರು ನೀಡಿದ್ದಾರೆ. ಇನ್ನು ರಾಜ್ಯದ ಮುಖ್ಯಮಂತ್ರಿಯಾದಿಯಾಗಿ, ಬಿಜೆಪಿ ಮುಖಂಡರು ಹಲವರು ರೆಡ್ಡಿ–ಶ್ರೀರಾಮುಲು ಬಳಗ ಅಧಿಕಾರ ದುರುಪಯೋಗ ಮಾಡಿಕೊಂಡು ಗಣಿ ಅಕ್ರಮಗಳನ್ನು ನಡೆಸಿದೆ ಎಂದು ಹೇಳಿದ್ದಾರೆ.

ಬಿಜೆಪಿ ಮುಖಂಡರು, ಸಚಿವರುಗಳು ಹೇಳುತ್ತಿರುವುದರಲ್ಲಿ ಬಹಳಷ್ಟು ಸತ್ಯಾಂಶಗಳಿವೆ ಎನ್ನೋದು ನಮ್ಮ ಜನಕ್ಕೆ ಯಾವತ್ತು ಗೊತ್ತಿರುವ ವಿಚಾರವೇ.

ಇಲ್ಲಿ ಬಹಳ ವಿಶೇಷವಾಗಿ ಗಮನಿಸಬೇಕಾದ ಕೆಲ ಮುಖ್ಯವಿಷಯಗಳಿವೆ. ಗಣಿ ಅಕ್ರಮಗಳ ಸಂಬಂಧ ಜನಾರ್ಧನ ರೆಡ್ಡಿಯವರ ಬಂಧನವಾದಾಗ ಬಂಧನ ಖಂಡಿಸಿ ಸಿಬಿಐ ವಿರುದ್ಧ ಹಾಗೂ ಕಾಂಗ್ರೆಸ್ ವಿರುದ್ಧ ಬಿಜೆಪಿ ಮುಂಖಡರು ಹರಿ ಹಾಯ್ದು ವಾಗ್ದಾಳಿ ನಡೆಸಿದ್ದರು. ಶ್ರೀರಾಮುಲು ಅವರು ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಆಗಿದೆ ಅಂತ ಶಾಸಕ ಸ್ಥಾನಕ್ಕೆ ರಾಜಿನಾಮೆ ಕೊಟ್ಟಾಗಲೂ ಬಹಳಷ್ಟು ಸಮಯ ಅದನ್ನು ಅಂಗೀಕರಿಸಲು ಬಿಡದೆ ಅವರನ್ನು ಶಾಸಕರಾಗಿ ಉಳಿಸಿಕೊಳ್ಳಲು ಪ್ರಯತ್ನಿಸಲಾಯಿತು.

ರಾಜಿನಾಮೆ ಕೊಟ್ಟೇ ಕೊಡುವುದು, ಮತ್ತೆ ಮರು ಚುನಾವಣೆ ಅಂತ ಆದಾಗಲೂ ಶ್ರೀರಾಮುಲು ಅವರನ್ನು ಬಿಜೆಪಿ ಪಕ್ಷದಿಂದಲೇ ನಿಲ್ಲುವಂತೆ ಮನವೊಲಿಸಲು ಕೊನೆ ಗಳಿಗೆಯವರೆಗೂ ತೆರೆಯ ಮೇಲೆ, ತೆರೆ ಮರೆಯಲ್ಲಿ ಆ ನಂತರವು ಪ್ರಯತ್ನಿಸಲಾಯಿತು.



ಅದು ಸಾಧ್ಯವಾಗದೇ ಹೋದಾಗ, ಶ್ರೀರಾಮುಲು ಅವರಿಗೆ ಬಿಜೆಪಿ ಬಾಗಿಲು ಸದಾ ತೆರೆದಿರುತ್ತದೆ ಎಂದು ಬಹಿರಂಗ ಆಹ್ವಾನ ಘೋಷಿಸಲಾಯಿತು. ನವೆಂಬರ್ 17 ರಂದು ನಡೆದ ಬಿಜೆಪಿ ಸಭೆಯ ನಂತರ ಶ್ರೀರಾಮುಲು ಬುಟ್ಟಿಗೆ ಬೀಳುವುದಿಲ್ಲ ಎಂಬುದು ಬಹುತೇಕ ಖಚಿತವಾದ ಮೇಲೆ ಶ್ರೀರಾಮುಲು, ರೆಡ್ಡಿ ಸಹೋದರರು ಕಳ್ಳರು, ಲೂಟಿಕೋರರು, ಅವರು ಅಧಿಕಾರ ದುರಪಯೋಗ ಪಡಿಸಿಕೊಂಡು, ಬಳ್ಳಾರಿ ಅಭಿವೃದ್ಧಿಗೆಂದು ಬಿಡುಗಡೆಯಾದ ಹಣ ಮತ್ತು ಗಣಿ ಅದಿರು ಲೂಟಿ ಮಾಡಿದ್ದಾರೆ...ಕೊಲೆ ಮಾಡಿದ್ದಾರೆ ಎಂದು ಗೊತ್ತಾಯಿತೇ. ?!!

ಒಂದು ಪಕ್ಷ ಶ್ರೀರಾಮುಲು ಬಿಜೆಪಿಯಿಂದಲೇ ಸ್ಪರ್ಧಿಸಲು ಒಪ್ಪಿಕೊಂಡಿದ್ದರೆ ಆಗ ಶ್ರೀರಾಮುಲು ಏನಾಗುತ್ತಿದ್ದರು.? ಯಾಕೆ ? ಈ ಬಿಜೆಪಿ ಮುಖಂಡರು, ಮಂತ್ರಿ, ಮುಖ್ಯಮಂತ್ರಿಗಳು ಇಷ್ಟು ದಿನ ಬಳ್ಳಾರಿಗೆ ಬಂದಾಗ, ಹೋದಾಗ ಬಳ್ಳಾರಿಯಲ್ಲಿ ಅದಿರು ತೋಡಿ, ತುಂಬಿ, ಲೋಡ್ ಮಾಡಿ ಸಮುದ್ರ ತೀರಕ್ಕೆ ಅಲ್ಲಿಂದ ವಿದೇಶಕ್ಕೆ ಕಳಿಸುವ 'ಅಭಿವೃದ್ಧಿ' ಕೆಲಸ ಬಿಟ್ಟು ಬೇರೆ ಅಭಿವೃದ್ಧಿ ಕೆಲಸವೇನೂ ನಡೆಯುತ್ತಿಲ್ಲ ಎಂಬುದು ತಿಳಿಯಲಿಲ್ಲವೇ ? ಆಗ ಇವರ ಕಣ್ಣುಗಳೆಲ್ಲ ಹಿಂಗಿ ಹೋಗಿದ್ದವೆ ? ಇವರ ಕಣ್ಣು, ಕಿವಿ, ಮೂಗು, ಗಂಟಲು, ಮಿದುಳು ಇತ್ಯಾದಿ ಪಂಚೇಂದ್ರಿಯಗಳು ಮತ್ತು ಅಂಗಗಳು ಬಳ್ಳಾರಿಗೆ ಬಂದಾಗ ಕೆಲಸ ಮಾಡದೇ ಬಂದ್ ಆಗಿ ಹೋಗುತ್ತಿದ್ದವೇ ?

ಮೊನ್ನೆ ಈ ವರ್ಷದ ವರಮಹಾಲಕ್ಷ್ಮಿ ಹಬ್ಬದಲ್ಲಿ ಸುಷ್ಮಾ ತಾಯಿಯ ಬದಲಿಗೆ ಬಿಜೆಪಿಯ ರಾಷ್ಟ್ರಾಧ್ಯಕ್ಷರೆ ಬಂದು 44 ಲಕ್ಷ ಬೆಲೆಯ ಚಿನ್ನದ ಕತ್ತಿ, ಕಾರು ಎಲ್ಲ ಈಸಿಕೊಂಡು ರೆಡ್ಡಿಗಳು– ಶ್ರೀರಾಮುಲುವನ್ನು ವಾಚಾಮಗೋಚರ ಹೊಗಳಿ ಹಾಡಿ ಹೋಗಲಿಲ್ಲವೇ ? ಬಿಜೆಪಿ ರಾಷ್ಟ್ರಾಧ್ಯಕ್ಷರು ಈಗಲಾದರೂ ಕಳ್ಳರು,

ಪುಟ 12 ಕ್ಕೆ

ತನಿಖೆ ಆರಂಭಿಸುವ ಮುಂಚೆಯೇ ತನಿಖಾ ಆಯೋಗ ಬರಖಾಸ್ತು

ಇದು ನಿಜಕ್ಕೂ ಬಿಜೆಪಿ ಸರ್ಕಾರದ ಆಡಳಿತದ ಸೊಗಸು. ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಮಂತ್ರಿಗಳ, ಮತ್ತು ಸ್ವತಃ ಮುಖ್ಯಮಂತ್ರಿ ಯಡಿಯೂರಪ್ಪನವರ ಜಮೀನು ಡೀನೋಟಿಫೈ ಹಗರಣಗಳು ಸದ್ದು ಮಾಡ ತೊಡಗಿದಾಗ ಸಾರ್ವಜನಿಕ ಒತ್ತಡ ಸರ್ಕಾರದ ವಿರುದ್ಧ ಏರತೊಡಗಿದಾಗ 1995 ರ ನಂತರದಲ್ಲಿ ಜಮೀನನ್ನು ಅಧಿಸೂಚನೆ ಯಿಂದ ಕೈ ಬಿಟ್ಟ ಎಲ್ಲ ಡಿನೋಟಿಫಿಕೇಶನ್ ಪ್ರಕರಣಗಳನ್ನು ತನಿಖೆಗೆ ಒಳ ಪಡಿಸುವುದಾಗಿ ರಾಜ್ಯ ಬಿಜೆಪಿ ಸರ್ಕಾರ ಘೋಷಿಸಿ ಅದಕ್ಕಾಗಿ ನ್ಯಾ. ಪದ್ಮರಾಜ್ ನೇತೃತ್ವದಲ್ಲಿ ಆಯೋಗವೊಂದನ್ನು ನೇಮಿಸಿತು. ಒಂದೇ ಕಲ್ಲಿನಿಂದ ಹಲವು ಹಕ್ಕಿಗಳನ್ನು ಬೀಳಿಸಲು ಯತ್ನಿಸುವ ಬಿಜೆಪಿ ತಂತ್ರ ಜನಕ್ಕೆ ಗೊತ್ತಿಲ್ಲದ್ದೇನೂ ಅಲ್ಲ.

ಕ್ರಮ ವಹಿಸಿದಂತೆಯೂ ಕಾಣಬೇಕು. ಕ್ರಮ ವಹಿಸದಂತೆಯೂ ಆಗಬೇಕು. ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡಂತೆಯೂ ಆಗಬೇಕು. 1995 ರಿಂದ ನಡೆದ ಎಲ್ಲ ಡಿನೋಟಿಫಿಕೇಶನ್‌ಗಳ ಬಗೆಗೆ ತನಿಖೆ ಎಂದರೆ ಹಿಂದೆ ಅಧಿಕಾರ ನಡೆಸಿರುವ ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳಿಗೆ ಪರೋಕ್ಷ ಎಚ್ಚರಿಕೆ... ಸುಮ್ಮನಿದ್ದರೆ ಸರಿ. ಇಲ್ಲಾ...ನೀವು ಮಾಡಿರುವ ಹಗರಣ.. ಡಿನೋಟಿಫಿಕೇಷನ್‌ಗಳ ವಿವರಗಳನ್ನು ಹೊರತೆಗೆಯುತ್ತೇವೆ..." ಹೇಗಿದೆ ತನಿಖೆ. ಅವ್ಯಕ್ತ ಅವಾಜು.

ಗಣಿ ಅಕ್ರಮದ ವಿಚಾರದಲ್ಲಿ ಅದನ್ನೆ ತಾನೆ ಯಡಿಯೂರಪ್ಪ ಅಲವತ್ತು ಕೊಳ್ಳುತ್ತಿರುವುದು. ಹಿಂದೆ ಗಣಿಗಾರಿಕೆಗೆ ಅನುಮತಿ ಕೊಟ್ಟವರನ್ನೆಲ್ಲ ಬಿಟ್ಟು ನನ್ನನ್ನು ಮಾತ್ರ ಸಿಕ್ಕಿಸಲಾಗಿದೆ ಎಂಬುದು ಅವರ ಗೋಳಾಟ. (ಹಿಂದಿನವರ ಅಕ್ರಮಗಳೂ ಸೇರಿದಂತೆ ಹಾಲಿ ಅಕ್ರಮ ಗಣಿಗಾರಿಕೆ ವಿವರವುಳ್ಳ ಮಧ್ಯಂತರ ವರದಿಯನ್ನು– ಅಕ್ರಮಗಳ ತಡೆಗೆ ಹಲವು ಶಿಫಾರಸ್ಸುಗಳನ್ನು ನ್ಯಾ.ಸಂತೋಷ ಹೆಗಡೆ ನೇತೃತ್ವದ ಲೋಕಾಯುಕ್ತ 2008 ರಲ್ಲೇ ಸಲ್ಲಿಸಿದರೂ ಬಿಜೆಪಿ ಸರ್ಕಾರ ವರದಿಯ ಮೇಲೆ ಚಕ್ಕಂಬಕ್ಕಳ ಹಾಕಿ ಕೂತುಬಿಟ್ಟಿತೇ ವಿನಃ ಕಿಂಚಿತ್ತಾದರೂ ಕ್ರಮ ವಹಿಸಲಿಲ್ಲ ಎಂಬುದು ಈಗಾಗಲೇ ಜನತೆ ತಿಳಿದಿರುವ ಸಂಗತಿ. ಇರಲಿ.)

ಆ ಮೇಲೆ ಪದ್ಮರಾಜ್ ಆಯೋಗದ ಕೆಲಸ ಆರಂಭವಾಗುವ ಮುಂಚೆಯೇ ನ್ಯಾಯಾಲಯದ ತಡೆಯಾಗ್ನೆ ಬಂತು. ಹೀಗಾಗಿ ತನಿಖೆ ನಡೆಯಲಿಲ್ಲ.

ಆಯೋಗಕ್ಕೆ ನೀಡಲಾಗಿದ್ದ ಒಂದು ವರ್ಷದ ಅವಧಿ ಈಗ ಮುಗಿದು ಹೋಗಿದೆ. ಅವಧಿ ವಿಸ್ತರಣೆ ಮಾಡಿ ತನಿಖೆಗೆ ಅವಕಾಶ ಒದಗಿಸಿ ಕೊಡುವ ವಿಚಾರದಲ್ಲಿ ಸರ್ಕಾರಕ್ಕೆ ಕೂದಲೆಳೆಷ್ಟು ಆಸಕ್ತಿ ಇಲ್ಲ ಎಂಬುದು ಈಗ ಜಗಜ್ಜಾಗೀರಾಗಿದೆ. ಏಕೆಂದರೆ ಈಗ ಪರಿಸ್ಥಿತಿ ಭಿನ್ನವಾಗಿದೆ. ಡೀ ನೋಟಿಫಿಕೇಷನ್ ಹಗರಣದ ಉರುಳು ಯಡಿಯೂರಪ್ಪನವರ ಕೊರಳಿಗೆ ಸುತ್ತಿಕೊಂಡು ಅವರು ಈಗಾಗಲೇ ಪರಪ್ಪನ ಅಗ್ರಹಾರದ ಕಾರಾಗೃಹ ದರ್ಶನ ಮಾಡಿ ಜಾಮೀನಿನ ಮೇಲೆ ಹೊರಬಂದಿದ್ದಾರೆ. ಮತ್ತು ಇನ್ನು ಎಷ್ಟೋ ಹಗರಣಗಳು ಅವರ ಕೊರಳಲನ್ನು, ಇತರ ಬಿಜೆಪಿ ಮುಖಂಡರ, ಹಾಲಿ–ಮಾಜಿ ಸಚಿವರ ಕೊರಳನ್ನು ಈಗಾಗಲೇ ಸುತ್ತಿ ಹಾಕಿಕೊಂಡು ಬಿಟ್ಟಿವೆ. ಒಟ್ಟಾರೆ ಜಮೀನು ಹಗರಣಗಳ ಕುರಿತ ತನಿಖಾ ಆಯೋಗವೊಂದು ಹೀಗೆ ರಚನೆಗೊಂಡು ತನಿಖೆಯನ್ನೇ ಆರಂಭಿಸದೇ ಬರಖಾಸ್ತು ಭಾಗ್ಯವನ್ನು ಕಾಣ ಬೇಕಾಗಿ ಬಂದಿದೆ. ಈ ಬಿಜೆಪಿ ದರ್ಬಾರ್‌ನಲ್ಲಿ.

ಯಲಬುರ್ಗಾ: ಕಾಣದ ಶಾಸಕ ಕಂಗಾಲಾದ ಜನ

ಅರೇ! ಇದೇನಿದು ? ಇದ್ದ ಶಾಸಕರು ದೇಶಾಂತರ ಹೋಗಿಬಿಟ್ಟರಾ ? ಅಥವಾ ಆಪರೇಷನ್ ಕಮಲಕ್ಕೆ ಬಲಿಯಾದರಾ ? ಎಂದು ಯೋಚಿಸುತ್ತಿದ್ದೀರಾ ? ಖಂಡಿತಾ ಇಲ್ಲ. ಶಾಸಕರು ಇದ್ದಾರೆ. ಆದರೆ ಜನರ ಪಾಲಿಗೆ ಇಲ್ಲ. ಇದು ಶಾಸಕರಿದ್ದೂ ಇಲ್ಲದಂತಿರುವ ಯಲಬುರ್ಗಾ ವಿಧಾನ ಸಭಾ ಕ್ಷೇತ್ರದ ಗೋಳಿನ ಕಥೆ. ಬಿಜೆಪಿ ಶಾಸಕ ಈಶಣ್ಣ ಗುಳಗಣ್ಣನವರ್ ಪಾರ್ಶ್ವವಾಯು ರೋಗಕ್ಕೆ ತುತ್ತಾಗಿ ಶಾಸಕನಾಗಿ ಕೆಲಸ ಮಾಡಲಾಗುತ್ತಿಲ್ಲ. ಇತ್ತ ರಾಜಿನಾಮೆಯನ್ನಾದರೂ ಸಲ್ಲಿಸಿಲ್ಲ. ಹೀಗಾಗಿ ಜನತೆಯನ್ನು ಅವರ ತಪ್ಪೇನು ಇಲ್ಲದೇ ಕಷ್ಟದ ಕೂಪಕ್ಕೆ ತಳ್ಳಿದಂತಾಗಿದೆ. 2008 ರ ವಿಧಾನಸಭಾ ಚುನಾವಣೆಯಲ್ಲಿ ಆರೋಗ್ಯ ಪರಿಸ್ಥಿತಿ ಚೆನ್ನಾಗಿಲ್ಲದಿದ್ದರೂ ವಿಪರೀತವಾಗಿ ಓಡಾಡಿ ಶಕ್ತಿಮೀರಿ ಪ್ರಚಾರ ಮಾಡಿ, ಸೋಗಲಾಡಿತನದಿಂದ ನಾಟಕ ಮಾಡಿ ಚುನಾವಣೆಯಲ್ಲಿ ಗೆದ್ದು, ಅಮೇರಿಕಾದಲ್ಲಿ ನಡೆದ ಅಕ್ಕ ಸಮ್ಮೇಳನ ನೋಡಲು ಹೋಗಿ ಪಾರ್ಶ್ವವಾಯು ರೋಗಕ್ಕೆ ಒಳಗಾಗಿ ಜನರಿಗೆ ನೀಡಿದ ಆಶ್ವಾಸನೆಗಳನ್ನು ಗಂಟುಕಟ್ಟಿ ಮೂಲೆಗೆ ಬಿಸಾಕಿ ಮಂಚದ ಮೇಲೆ ಮಲಗಿದ್ದಾರೆ.

ಕಣ್ಣೀರಿನ ನಾಟಕ: 3 ಭಾರಿ ಚುನಾವಣೆಯಲ್ಲಿ ನಿಂತು ಸೋತಿದ್ದ ಈಶಣ್ಣ 2008 ರ ವಿಧಾನ ಸಭೆಯ ಚುನಾವಣೆಯಲ್ಲಿ ರಾಯರೆಡ್ಡಿ ವಿರೋಧಿ ಅಲೆಯನ್ನು ಭರ್ಜರಿಯಾಗಿಯೇ ಬಳಸಿಕೊಂಡ. ಕಾರ್ಯಕರ್ತರ ನಿರ್ಲಕ್ಷ್ಯ, ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಅಹಂಕಾರದ ಮದದಿಂದ ಕೊಬ್ಬಿ ಹೋಗಿದ್ದ ಮಾಜಿ ಸಚಿವ ಬಸವರಾಜ್ ರಾಯರೆಡ್ಡಿಯನ್ನು ಜನ ಚೀ, ಥೂ ಎನ್ನುತ್ತಿದ್ದರು. ಇದನ್ನೇ ಅಸ್ತ್ರವನ್ನಾಗಿಸಿಕೊಂಡ ಬಿಜೆಪಿ ಪ್ರಚಾರಕ್ಕೆ ಮುಂದಾಯಿತು. ಅದರ ಜೊತೆಯಲ್ಲಿಯೆ ಈಶಣ್ಣ ' ನಾನು ಬಹಳ ದಿನ ಬದುಕಿರುವುದಿಲ್ಲ, ಶಾಸಕಾನಾಗುವುದು ನನ್ನ ಮಹದಾಸೆ. ಸಾವಿನ ಅಂಚಿನಲ್ಲಿರುವ ನನ್ನ ಆಸೆಯನ್ನು ನನಸಾಗಿಸಿ. ನನ್ನ ಹೆಂಡತಿಯ ತಾಳಿ (ಮಾಂಗಲ್ಯ) ಉಳಿಸಿ ಎಂದು ಮತದಾರರಲ್ಲಿ ಅತ್ತು ಅತ್ತು ಗೋಗರೆದಿದ್ದ. ಸಾಕಷ್ಟು ದುಡ್ಡು, ಹೆಂಡವನ್ನು ಹಳ್ಳಿ ಹಳ್ಳಿಗೆ ಹಂಚಿದ. ರಾಯರೆಡಿಯ ದುರಹಂಕಾರದಿಂದ ಬೇಸತ್ತಿದ್ದ ಜನತೆ ಈಶಣ್ಣನ ಕಣ್ಣೀರಿಗೆ ಮನಸೋತು 26,000 ಮತಗಳ ಅಂತರದಿಂದ ಗೆಲ್ಲಿಸಿದರು. ಸಂಘಪರಿವಾರದ ಬಗ್ಗೆ ಅರಿವಿರದ ಈಶಣ್ಣ ಒಳ್ಳೆ ಕೆಲಸ ಮಾಡುತ್ತಾನೆ ಎಂದು ಜನ ಬಯಸಿದ್ದರು. ಆದರೆ ನಡೆದದ್ದೆ ಬೇರೆ. ಗೆದ್ದ ಮೊದಲ ದಿನವೇ ಅಧಿಕಾರಿಗಳನ್ನು ಹೆದರಿಸಿ ಲೂಟಿಯಲ್ಲಿ ನಿರತನಾದ. ರೋಗ ಗ್ರಸ್ಥನಾಗಿ ಮಂಚಸೇರಿ ಮಗನನ್ನು ಲೂಟಿಗೆ ಬಿಟ್ಟ.

ಮಗನೇ 'ಶಾಸಕ' ನಾದ: ಈಶಣ್ಣ ಅನಾರೋಗ್ಯ ಪೀಡಿತನಾದ ತಕ್ಷಣ ಶಾಸಕರ ನೇತ್ರತ್ವದಲ್ಲಿ ನಡೆಯುವ ಸಭೆ, ಸಮಾರಂಭಗಳಿಗೆ ಶಾಸಕರ ಮಗ ನವೀನ್ ಹಾಜರಾಗತೊಡಗಿದ: ಥೇಟ್ ಪಾಳೆಗಾರಿ ಆಡಳಿತ ಎಂಬಂತೆ ಎಲ್ಲರಿಗೂ ಆರ್ಡರ್ ಮಾಡತೊಡಿಗಿದ. ಸಣ್ಣ ಜನರ ಗುಂಪೊಂದನ್ನು ಕಟ್ಟಿಕೊಂಡು ಪುಡಿ ರೌಡಿಯಂತೆ ಜನರನ್ನು ಗೋಳಾಡಿಸಿದ. ಪ್ರಶ್ನೆ ಕೇಳಿದ ಜನರನ್ನು, ಪತ್ರಕರ್ತರನ್ನು ಪೋಲಿಸರಿಂದ ದಾಳಿಮಾಡಿಸಿ ಅವರು ಹೆದರುವಂತೆ ಮಾಡಿದ. ಸಂವಿಧಾನದ ಮೂಲ ಆಶಯಗಳನ್ನು ಗಾಳಿಗೆ ತೂರಿ ಅಧಿಕಾರಿಗಳ ಸಭೆಯನ್ನು ಇವನೇ ನಡೆಸತೊಡಗಿದ. ಪ್ರಗತಿಪರ ಜನ ತಿರುಗಿ ಬಿದ್ದು ವಿರೋಧಿಸಿದರೂ ವಾಲ್ಮಿಕಿ ಜಯಂತಿಯಂದು ಪಿ.ಡಿ.ಓ.ಗಳ ಸಭೆ ಮಾಡಿ ಸಾರ್ವಜನಿಕವಾಗಿ ಬೈಸಿಕೊಂಡರೂ ಇನ್ನು ಇವನು ತನ್ನ ಇಂತಹ ಪುಂಡಾಟ ನಿಲ್ಲಿಸಿಲ್ಲ.

ಸಮಸ್ಯೆಗಳ ರಾಶಿ: ಯಲಬುರ್ಗಾ ಕೊಪ್ಪಳ ಜಿಲ್ಲೆಯಲ್ಲಿಯೇ ಹಿಂದುಳಿದ ತಾಲ್ಲೂಕು. ಹಳ್ಳಿಗಳಿಗೆ ಸರಿಯಾದ ರಸ್ತೆಗಳಿಲ್ಲ. ಜನರಿಗೆ ದುಡಿಯಲು ಕೆಲಸವಿಲ್ಲ, ಸ್ವಂತಭೂಮಿ ಇಲ್ಲ. ಮನೆಗಳಂತೂ ಜನರ ಕೈಗೆಟಕುತ್ತಿಲ್ಲ. ಶಿಕ್ಷಣ ಕ್ಷೇತ್ರದ ಕಥೆ ಹೇಳತೀರದಾಗಿದೆ. ಕುಡಿಯಲು ಶುದ್ಧವಾದ ನೀರು ಸಿಗುತ್ತಿಲ್ಲ. ಶಾಸಕರಿಲ್ಲದ ಕಾರಣ ಬರುವ ಯೋಜನೆಗಳು ಹಳ್ಳ ಹಿಡಿದಿವೆ. ಯೋಜನೆಗೆ ಬಂದ ಅನುಧಾನದಲ್ಲಿ ಶಾಸಕರ ಮಗ, ಅಧಿಕಾರಿಗಳು, ಬಿಜೆಪಿ ಕಾರ್ಯಕರ್ತರು ತಮ್ಮ ಪಾಲಿಗಾಗಿ ಕಚ್ಚಾಡುತ್ತಿದ್ದಾರೆ. ಸಿಂಗಟಾಲೂರು ಏತ ನೀರಾವರಿ ರೈತರ ಕನಸಾಗಿಯೆ ಉಳಿಯುತ್ತಿದೆ. ಇವುಗಳ ಜೊತೆಯಲ್ಲಿ ಬರಗಾಲದ ಪೆಟ್ಟು ಜನರನ್ನು ನಿದ್ರೆಗೆಡಿಸಿದೆ. ಎಸ್ಎಫ್ಐ, ಸಿಐಟಿಯು, ಕನ್ನಡ ಪರ ಸಂಘಟನೆ, ದಲಿತ ಸಂಘಟನೆಗಳು ಜನರ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಿವೆ. ಕಾಂಗ್ರೆಸ್, ಜೆಡಿ(ಎಸ್), ಪಕ್ಷಗಳು ಕಣ್ಣು ಮುಚ್ಚಿಕೊಂಡು ಸುಮ್ಮನೆ ಕುಳಿತಿವೆ. ಜನ ಈಶಣ್ಣನನ್ನು ಗೆಲ್ಲಿಸಿ ತಪ್ಪು ಮಾಡಿದಿವಿ ಎಂದು ಪೇಚಾಡುತ್ತಿದ್ದಾರೆ. ಶಾಸಕರಿಲ್ಲದಿದ್ದರೂ ಸರಕಾರವಾದರೂ ನಮ್ಮ ಸಮಸ್ಯೆಯನ್ನು ಕೇಳಲು ಯಾಕೆ ಮುಂದೆ ಬರುತ್ತಿಲ್ಲ ಎಂದು ಯೋಚಿಸುತ್ತಾ ಕುಳಿತಿದ್ದಾರೆ. ಯಲಬುರ್ಗಾದಂತ ಬರಪೀಡಿತ ತಾಲ್ಲೂಕಿನಲ್ಲಿ ಜನಪರ ಪರ್ಯಾಯ ರಾಜಕೀಯ ಶಕ್ತಿ ಬೆಳೆದು ಬರಬೇಕಿದೆ. ಅದಕ್ಕಾಗಿಯೆ ಪ್ರಜಾಸತ್ತಾತ್ಮಕ ಚಳುವಳಿ ಬಲಗೊಳ್ಳ ಬೇಕಿದೆ.

ಗುರುರಾಜ್ ದೇಸಾಯಿ, ಕೊಪ್ಪಳ

ಬೈಂದೂರು ವಲಯ ಸಮ್ಮೇಳನ.....

ಪುಟ 3 ರಿಂದ

ಸ್ವಾಮಿ ದೇವಸ್ಥಾನದ ಬಳಿ ಹೊಳೆಗೆ ನಾಡ ಗ್ರಾಮಕ್ಕೆ ಸಂಪರ್ಕ ಸೇತುವೆ ನಿರ್ಮಾಣಕ್ಕೆ ಒತ್ತಾಯ ಹಟ್ಟಿಯಂಗಡಿ ತಲ್ಲೂರು ಗುಜ್ಜಾಡಿ, ಹೆಮ್ಮಾಡಿ, ತ್ರಾಸಿ ಗ್ರಾಮ ಪಂಚಾಯತ್‌ಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜ್ಯಾರಿಗೆ ಒತ್ತಾಯ ಹಾಗೂ ಈ ಗ್ರಾಮಗಳಲ್ಲಿ ಕೃಷಿಕೂಲಿಗಾರರ ಸಂಘಟನೆ ವಿಸ್ತರಣೆ ಬಗ್ಗೆ, ಸರಕಾರಿ ಮನೆ ನಿವೇಶನ,. ಆಕ್ರಮ ಸಕ್ರಮೀಕರಣದನ್ವಯ ಭೂಮಿ ಹಕ್ಕು ಪತ್ರಕ್ಕೆ ಒತ್ತಾಯ ಇತ್ಯಾದಿ ಪ್ರಮುಖ ವಿಷಯಗಳ ಬಗ್ಗೆ ಸಮ್ಮೇಳನದಲ್ಲಿ ತರವುಗಳನ್ನು ಅಂಗೀಕರಿಸಲಾಯಿತ್ತು.

ಸಿಪಿಐ(ಎಂ) ಬೈಂದೂರು ವಲಯ ಸಮಿತಿಗೆ ವೆಂಕಟೇಶ ಕೋಣಿ (ಕಾರ್ಯದರ್ಶಿ), ರಾಜೀವ ಪಡುಕೋಣೆ, ರಾಜೀವ ಶೆಟ್ಟಿ, ಮಹಮದ್. ಜಿ. ಸಂಜೀವ ಪೂಜಾರಿ , ಗೋಪಾಲ ಮಾವಿನಕೆರೆ ಡಿ.ಸುಬ್ಬ, ಜಿ.ಡಿ. ಪಂಜು ಮತ್ತು ಗಣೇಶ್ ತೊಂಡೆಮಕ್ಕಿ ಇವರು ಸರ್ವಾನುಮತದಿಂದ ಆಯ್ಕೆಯಾದರು. ಮಹಮ್ಮದ್.ಜಿ. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಂಜೀವ ಪೂಜಾರಿ ಕಾರ್ಯಕ್ರಮ ನಿರೂಪಿಸಿದರು.

ಬಿಜೆಪಿ ದರ್ಬಾರ್

ಪುಟ 11 ರಿಂದ

ದರೋಡೆಕೋರರು, ಕೊಲೆಗಾರರು ಕೊಟ್ಟ ಚಿನ್ನದ ಕತ್ತಿ, ಕಾರು ಇತ್ಯಾದಿಗಳನ್ನು ವಾಪಸ್ಸು ಕೊಡುವರೇ ?

ಈಗ ಇತ್ತ ಕಡೆ ಶ್ರೀರಾಮುಲು ಅವರು ಬಿಜೆಪಿ ಕುರಿತು ಏನು ಹೇಳುತ್ತಾರೆ ನೋಡೋಣ.

" ಬಿಜೆಪಿ ಅಧಿಕಾರಕ್ಕೆ ಬರುವಾಗ ನಮ್ಮನ್ನು ಸಿಕ್ಕಾಪಟ್ಟೆ ಬಳಸಿಕೊಳ್ಳಲಾಯಿತು. ಅಧಿಕಾರಕ್ಕೆ ಬಂದ ನಂತರ(ಅಂದರೆ ಜೈಲಿಗೆ ಹೋದ ನಂತರ) ಜನಾರ್ಧನ ರೆಡ್ಡಿ ಬೇಡವಾದರು." ಎಂದಿರುವ ಶ್ರೀರಾಮುಲು ಬಿಜೆಪಿಯ ಅಖಿಲ ಭಾರತ ನಾಯಕಿ, ರೆಡ್ಡಿ ಬಳಗದ 'ತಾಯಿ' ಸುಷ್ಮಾ ಸ್ವರಾಜ್ ಅವರ ಬಗೆಗೆ ಹೇಳಿರುವ ಮಾತನ್ನು ಕೇಳಿ.

"ಅವರಿಗೆ ಎಲ್ಲೋ ಒಂದು ಕಡೆ ಪ್ರಧಾನಿ ಆಗಬೇಕೆಂಬ ಆಸೆ ಬಂತು. ಲೋಕಾಯುಕ್ತ ವರದಿಯಲ್ಲಿ ನನ್ನ ಹೆಸರಿದೆ ಎಂಬುದು ಅವರಿಗೆ ಮುಂಚಿತವಾಗಿಯೇ ತಿಳಿದಿತ್ತು. ಇದರಿಂದ ತಮಗೆ ಪ್ರಧಾನಿ ಸ್ಥಾನ ದೊರಯದಿರಬಹುದು ಎಂದು ನಮ್ಮನ್ನು ದೂರ ಮಾಡಿದರೂ ಅನಿಸುತ್ತದೆ." ಎಂದಿದ್ದಾರೆ ಶ್ರೀರಾಮುಲು.

ಶ್ರೀರಾಮುಲು ಕೂಡ ಸತ್ಯವನ್ನೇ ಹೇಳುತ್ತಿದ್ದಾರೆ. ಸಹಸ್ರಾರು ಕೋಟಿ ರೂಪಾಯಿಗಳ ಮೌಲ್ಯದ ಗಣಿ ಲೂಟಿಯಿಂದ ಬಂದ ಅಕ್ರಮ ಶ್ರೀಮಂತಿಕೆ ಬಳಸಿ ಚುನಾವಣೆಯಲ್ಲಿ ಗೆಲ್ಲಲು ನೀರಿನಂತೆ ದುಡ್ಡು ಚೆಲ್ಲಲಾಯಿತು. ಆಪರೇಷನ್ ಕಮಲ, ಇತ್ಯಾದಿ ಇತ್ಯಾದಿ ನಡೆಸಿ ರಾಜ್ಯದಲ್ಲಿ ಬಿಜೆಪಿ ಸರ್ಕಾರವನ್ನು ತರಲಾಯಿತು. "ನಮ್ಮನ್ನು ಸಿಕ್ಕಾಪಟ್ಟೆ ಬಳಸಿಕೊಳ್ಳಲಾಯಿತು" ಎಂದರೆ ನಿಜವಾಗಿ ಏನರ್ಥ ವಿವರಿಸುವ ಸ್ಥಿತಿಯಲ್ಲಿ ಪಾಪ ಶ್ರೀರಾಮುಲು ಇಲ್ಲ. ಇರಲಿ, ರಾಷ್ಟ್ರ ಮಟ್ಟದಲ್ಲೂ ಇದೇ ಮಾದರಿಯನ್ನು ಅನುಸರಿಸಲು ಸುಷ್ಮಾ ಸೇರಿದಂತೆ ಬಿಜೆಪಿ ನಾಯಕತ್ವ ಯೋಜಿಸಿತ್ತು. ಅಕ್ರಮ ಗಣಿ ಲೂಟಿಯ ವಿರುದ್ಧ ಪ್ರಜ್ಞಾವಂತರ ಸಾರ್ವಜನಿಕರ ವಿರೋಧ ತೀವ್ರವಾದಂತೆ, ರೆಡ್ಡಿ ಬಳಗದ ಸದಸ್ಯರ ಕೊರಳಿಗೆ ಕಾನೂನಿನ ಕುಣಿಕೆ ಬಿಗಿಯುವುದು ಖಾತ್ರಿಯಾದಂತೆ ಅವರು ಬಿಜೆಪಿಗೆ ಬೇಡವಾಗಿದ್ದಾರೆ.

ಒಮ್ಮೆ ಬೇಡವಾದ ಮೇಲೆ ರೆಡ್ಡಿ ಬಳಗ ಈಗ ಕಳ್ಳರ ಕೊಲೆಗಡುಕರ, ಲೂಟಿಕೋರರ ತಂಡವಾಗಿ ಕಾಣುತ್ತಿದೆ. ಆಹಾ !! ಏನು ಜ್ಞಾನೋದಯವಪ್ಪ. ಏನು ಜ್ಞಾನೋದಯ !!!.

ದೇವರ ಹೆಸರಿನಲ್ಲಿ ಎಂಜಲೆಲೆಯ ಮೇಲಿನ ಉರುಳಾಟದ ಮೌಢ್ಯ ಕೊನೆಗೊಳ್ಳಲಿ

ಭಕ್ತಾದಿಗಳ ನಂಬಿಕೆಯನ್ನೇ ಆಧಾರವಾಗಿಟ್ಟುಕೊಂಡು ಎಂಜಲೆಲೆಯ ಮೇಲೆ ಉರುಳಾಡುವ ಅನಾಗರಿಕ ಮಡೆ ಮಡೆಸ್ನಾನವನ್ನು ಸರಕಾರ ಹಾಗೂ ಕುಕ್ಕೆ ಸುಬ್ರಮಣ್ಯ ದೇವಸ್ಥಾನದ ಆಡಳಿತ ಮಂಡಳಿ ಕೊನೆಗೊಳಿಸಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಒತ್ತಾಯಿಸುತ್ತದೆ.

ಜನರ ಭಾವನೆ, ನಂಬಿಕೆಗಳನ್ನು ಗೌರವಿಸಬೇಕೆಂಬುದು ನಿಜವಾದರೂ ಮಡೆ ಸ್ನಾನ ಅತ್ಯಂತ ಅನಾಗರಿಕ ಮೂಢನಂಬಿಕೆಯಾಗಿದೆ. ಇದರಲ್ಲಿ ಉಚ್ಚ ಜಾತಿ, ನೀಚ ಜಾತಿ ಎಂದು ಭೇದವನ್ನುಂಟುಮಾಡುವ ಅಂಶವೂ ಇದೆ. ಇದರ ವಿರುದ್ಧ ಜನರನ್ನು ಎಚ್ಚರಿಸಬೇಕು. ದ.ಕ ಜಿಲ್ಲೆಯ ಜಿಲ್ಲಾಧಿಕಾರಿಗಳು ಮಡೆಸ್ನಾನವನ್ನು ಈಗಾಗಲೇ ನಿಷೇಧಿಸಿದ್ದರು. ಆದರೆ ಕೆಲವರು ಒತ್ತಾಯಿಸುತ್ತಿದ್ದಾರೆ ಎಂಬ ಕುಂಟು ನೆಪ ನೀಡಿ ಪುನಃ ಆಚರಣೆಗೆ ತಂದಿರುವುದು ಖಂಡನೀಯ.


ಮಡೆಸ್ನಾನ ಆಚರಣೆಯ ಹಿಂದಿರುವ ಮೂಢನಂಬಿಕೆ, ಜಾತಿ ತಾರತಮ್ಯವನ್ನು ಜನತೆ ಅರ್ಥಮಾಡಿಕೊಂಡು ಅನಾಗರಿಕವಾದ ಆಚರಣೆಯನ್ನು ತಿರಸ್ಕರಿಸಬೇಕೆಂದು ಸಿಪಿಐ(ಎಂ) ಜನತೆಯಲ್ಲಿ ಮನವಿ ಮಾಡುತ್ತದೆ.

ಹಲ್ಲೆಗೆ ಖಂಡನೆ :- 'ಮಡೆಸ್ನಾನ'ದ ಚಿತ್ರೀಕರಣಕ್ಕೆ ಬಂದ ಮಾಧ್ಯಮದವರ ಮೇಲೆ ಹಾಗೂ ಸತ್ಯಶೋಧನಾ ಸಮಿತಿಯ ಕಾರ್ಯಕರ್ತರ ಮೇಲೆ ನಡೆಸಿದ ಹಲ್ಲೆಯನ್ನು ಸಿಪಿಐ(ಎಂ) ಖಂಡಿಸುತ್ತದೆ. ಹಲ್ಲೆ ನಡೆಸಿದವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತದೆ.

ಸರ್ಕಾರವು ಕೂಡಲೇ ಮಡೆಸ್ನಾನವನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಪಕ್ಷವು ಒತ್ತಾಯಿಸುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ


ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ: ಉರಿವ ಬೆಂಕಿಗೆ ತುಪ್ಪ



ವೇದರಾಜ ಎನ್.ಕೆ.

ಸಂಸತ್ತಿನ ಚಳಗಾಲದ ಅಧಿವೇಶನ ಆರಂಭವಾಗಿ ಒಂದು ವಾರ ಮುಗಿಯುತ್ತಿದ್ದರೂ ಅದರ ಕಲಾಪಗಳು ಆರಂಭವಾಗುವ ಲಕ್ಷಣಗಳು ಕಂಡು ಬಂದಿಲ್ಲ, ಬದಲಿಗೆ ಯುಪಿಎ-2 ಸರಕಾರ ಎಲ್ಲ ರಂಗಗಳಲ್ಲಿ ತನ್ನ ವಿಫಲತೆಯನ್ನು ಮುಚ್ಚಿಕೊಳ್ಳಲು ಇದನ್ನೇ ಬಳಸಿಕೊಳ್ಳುವ ಹುನ್ನಾರ ನಡೆಸಿದಂತೆ ಕಾಣುತ್ತಿದೆ. ಬೆಲೆಯೇರಿಕೆ ಮತ್ತು ಕಪ್ಪು ಹಣದ ಮೇಲೆ ಚರ್ಚೆಗೆ ಒತ್ತಾಯಿಸುತ್ತಿರುವಾಗಲೇ, ಕೇಂದ್ರ ಸಂಪುಟ ಚಿಲ್ಲರೆ ವ್ಯಾಪಾರದಲ್ಲಿ ಬಹುಬ್ರಾಂಡ್ ವ್ಯಾಪಾರದಲ್ಲಿ 51ಶೇ. ಮತ್ತು ಏಕಬ್ರಾಂಡ್ ವ್ಯಾಪಾರದಲ್ಲಿ 100ಶೇ. ವಿದೇಶಿ ನೇರ ಹೂಡಿಕೆಗೆ ಅನುಮತಿ ನೀಡಲು ನಿರ್ಧರಿಸಿ ಉರಿವ ಬೆಂಕಿಗೆ ತುಪ್ಪ ಸುರಿದಿದೆ. ಇದು ಜನಗಳ ಸಮಸ್ಯೆಗಳ ಬಗ್ಗೆ ತಿರಸ್ಕಾರವೋ, ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ನಿರ್ಲಕ್ಷ್ಯವೋ, ಬೇಜವಾಬ್ದಾರಿತನವೋ ಅಥವ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಿಗರನ್ನು ಹೇಗಾದರೂ ಸಂತುಷ್ಟಗೊಳಿಸುವ ಯತ್ನವೋ-ಇವೆಲ್ಲವೂ ಆಗಿರುವಂತೆ ಕಾಣುತ್ತದೆ.(ಈ ಬಗ್ಗೆ ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯವನ್ನು ನೋಡಿ. ಪುಟ 8-9).

ಯಾರಿಗೆ ಏನೇ ಅನಿಸಲಿ, ಭಾರತದ ವ್ಯಾಪಾರಿಗಳು ಅಖಿಲ ಭಾರತ ಹರತಾಳದ ಮೂಲಕ ಪ್ರತಭಟನೆ ವ್ಯಕ್ತಪಡಿಸಿರಲಿ, ಅಮೆರಿಕಾದ ವ್ಯಾಪಾರಿಗಳಿಗಂತೂ ಬಹಳ ಸಂತೋಷವಾಗಿದೆ. ಇದೊಂದು 'ಧೀರ' ಕ್ರಮ ಎಂದು ಅಮೆರಿಕಾ-ಭಾರತ ಬಿಸಿನೆಸ್ ಕೌನ್ಸಿಲ್ ಕುಣಿದಾಡಿದೆ. ಇದು ಎಲ್ಲರಿಗೂ, ಅಂದರೆ ಭಾರತದ ಗ್ರಾಹಕರಿಗೆ, ರೈತರಿಗೆ ಮತ್ತು ಭಾರತ ಸರಕಾರಕ್ಕೆ ಪ್ರಯೋಜನಕಾರಿಯಾದ ಒಂದು ಒಳ್ಳೆ ಆರಂಭ ಎಂದು ಅಮೆರಿಕಾದ ಸಂಸತ್ತಿನಿಂದಲೇ ಲಾಭಕೋರತನದ ಟೀಕೆಗೊಳಗಾಗಿರುವ ವಾಲ್‌ಮಾರ್ಟ್ ಮುಖ್ಯಸ್ಥ ಹೇಳಿದ್ದಾನೆ. ಈ ಸಂಪುಟ ನಿರ್ಧಾರವನ್ನು ಸಮರ್ಥಿಸಿಕೊಳ್ಳುವ ಪ್ರಧಾನಿಗಳ, ವಾಣಿಜ್ಯ ಮಂತ್ರಿಗಳ, ಹಣಕಾಸು ಮಂತ್ರಿಗಳ ತರ್ಕಗಳೆಲ್ಲ ಈ ವಾಲ್‌ಮಾರ್ಟ್‌ನಿಂದಲೇ ಖರೀದಿಸಿದಂತೆ ಧ್ವನಿಸುತ್ತಿವೆ.



ಕೃಪೆ: ದಿ ಹಿಂದು

ಆದರೆ ಸ್ವತಃ ಕಾಂಗ್ರೆಸ್ ಸೇರಿದಂತೆ ಯುಪಿಎ ಅಂಗಪಕ್ಷಗಳ ಮುಖಂಡರಿಗೆ ಈ ನಿರ್ಧಾರ ಬಹಳ ಮುಜುಗರ ತಂದಂತೆ ಕಾಣುತ್ತದೆ. ಕೇರಳದ ಕಾಂಗ್ರೆಸ್ ಅಧ್ಯಕ್ಷರು, ಉತ್ತರ ಪ್ರದೇಶದ ಇಬ್ಬರು ಸಂಸತ್ ಸದಸ್ಯರು ತಮ್ಮ ಅಸಮಾಧಾನವನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿದ್ದಾರೆ. ಇಂತಹ ನಿರ್ಧಾರಕ್ಕೆ ಇದು ಸೂಕ್ತ ಸಮಯವಂತೂ ಅಲ್ಲ ಎಂದು ಹಲವು ಕಾಂಗ್ರೆಸ್ ಮುಖಂಡರು ಮುಜುಗರ ಪಡುತ್ತಿದ್ದಾರೆ. ಯುಪಿಎ-2 ಹಣಕಾಸು ಮಂತ್ರಿಗಳು ಮತ್ತು ವಾಣಿಜ್ಯ ಮಂತ್ರಿಗಳು ತಮ್ಮ ಪಕ್ಷದ ಸಂಸತ್ ಸದಸ್ಯರಿಗೇ ಈ ಬಗ್ಗೆ ವಿವರಣೆಗೆ ಸಭೆ ನಡೆಸಬೇಕಾದ ಅಗತ್ಯ ಬಂದಿದೆ. ಅತ್ತ ಯುಪಿಎ ಒಳಗಿನ ಎರಡನೇ ದೊಡ್ಡ ಪಕ್ಷ ತೃಣಮೂಲ ಕಾಂಗ್ರೆಸ್‌ನ ಮುಖ್ಯಸ್ಥೆ ಈ ನಿರ್ಧಾರದ ವಿರುದ್ಧ ಹರಿಹಾಯ್ದಿದ್ದಾರೆ. ಡಿಎಂಕೆ ಕೂಡ ಮುಜುಗರಕ್ಕೆ ಒಳಗಾಗಿದೆ. ಎಂದಿನಂತೆ ಇದು ಬರೀ ಸದ್ದು ಆಗಿದ್ದರೂ, ವ್ಯಾಪಕ ವಿರೋಧ ಇರುವ ಇಂತಹ ಒಂದು ವಿಷಯದಲ್ಲಿ ಸಂಸತ್ತು ಅಧಿವೇಶನದಲ್ಲಿರುವಾಗಲೇ ನಿರ್ಧಾರ ಕೈಗೊಂಡಿರುವುದೇಕೆ ಎಂಬ ಬಗ್ಗೆ ಗಂಭೀರ ಸಂದೇಹ ಎಲ್ಲರಿಗೂ ಬಂದಿದೆ.

★

ಚಿಂತನೆಗಳಿಗೆ ಸವಾಲು?

ಪ್ರಧಾನ ಮಂತ್ರಿಗಳು ಯುವ ಕಾಂಗ್ರೆಸ್ ಸಮಾವೇಶದಲ್ಲಿ 'ಇದು ಅವಸರದ ನಿರ್ಧಾರವಲ್ಲ, ಇದರಿಂದ ದೇಶಕ್ಕೆ ಪ್ರಯೋಜನವಾಗಲಿದೆ ಎಂಬ ದೃಢ ಭಾವನೆ ನಮ್ಮದು' ಎಂದಾಗ ರಾಹುಲ್ ಗಾಂಧಿ ಸೇರಿದಂತೆ ಅಲ್ಲಿ ನೆರೆದಿದ್ದ 7000 ಯುವ ಕಾಂಗ್ರೆಸಿಗರು ಚಪ್ಪಾಳೆ ತಟ್ಟಿದರಂತೆ. ರಾಹುಲ್ ಗಾಂಧಿ ಪ್ರತಿನಿಧಿಸುವ ಲೋಕಸಭಾ ಕ್ಷೇತ್ರದ ಪಕ್ಕದಲ್ಲೇ ಇರುವ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಕಾಂಗ್ರೆಸ್ ಸಂಸತ್ ಸದಸ್ಯರೇ ತಮ್ಮ ಮುಜುಗರ ತೋಡಿಕೊಂಡು ಪತ್ರ ಬರೆದ ಬಗ್ಗೆ ಅವರಿಗೆಲ್ಲ ಗೊತ್ತಿದೆಯೋ ತಿಳಿದಿಲ್ಲ. ರಾಹುಲ್ ಗಾಂಧಿಯವರಂತೂ ತಮ್ಮ ಭಾಷಣದಲ್ಲಿ 'ನಿಮ್ಮ ವಿಚಾರಗಳನ್ನು ಪರೀಕ್ಷಿಸಿ, ನಿಮ್ಮ ಚಿಂತನೆಗಳಿಗೆ ಸವಾಲು ಹಾಕಿ, ನಿಮ್ಮೊಳಗೆ ಮತ್ತು ನಿಮ್ಮ ಸುತ್ತಲೂ ಬಂಡಾಯಗಳನ್ನು ಸೃಷ್ಟಿಸಿ' ಎಂದು ಯುವ ಕಾಂಗ್ರೆಸಿಗರಿಗೆ ಕರೆ ನೀಡಿದರಂತೆ. ಅವರ ಅನುಭವೀ ಹಿರಿಯ ಮುಖಂಡ ಮೊದಲ ಎರಡೂವರೆಯನ್ನು ಮಾಡದೆ, ಕೊನೆಯ ಅರ್ಧವನ್ನು ಮಾತ್ರವೇ ಮಾಡಿ ಎಂದು ಹೇಳುತ್ತಿರುವಂತೆ ಕಾಣುತ್ತಿದೆ.

★

ಪ್ರಧಾನಿಗಳ ಬಾಯಿಂದ ಮಾತೇ ಹೊರಡಲಿಲ್ಲ

ಯುಪಿಎ-2 ಸರಕಾರ ತರುತ್ತಿರುವ 'ಪೆನ್ಶನ್ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ'(ಪಿಎಫ್‌ಆರ್‌ಡಿಎ) ಮಸೂದೆ, 2011 ರ ವಿರುದ್ಧ ಕೇಂದ್ರ, ರಾಜ್ಯ ಮತ್ತು ಬಿಎಸ್‌ಎನ್‌ಎಲ್ ನೌಕರರ ಸಂಘಟನೆಗಳು ನವಂಬರ್ 25ರಂದು ಬೃಹತ್ 'ಪಾರ್ಲಿಮೆಂಟ್ ಚಲೋ' ನಡೆಸಿದವು. ಆ ಸಂದರ್ಭದಲ್ಲಿ ಈ ಸಂಘಟನೆಗಳ ಮುಖಂಡರ ನಿಯೋಗವೊಂದು ಸಿಪಿಐ(ಎಂ) ಸಂಸತ್ ಸದಸ್ಯ ಬಸುದೇವ ಆಚಾರ್ಯ ಮತ್ತು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ನೇತೃತ್ವದಲ್ಲಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿತು. ನೌಕರರಲ್ಲಿ ಈ ಮಸೂದೆಯಿಂದ ತಮ್ಮ ಪೆನ್ಶನ್ ಬಗ್ಗೆ ಆತಂಕ ಉಂಟಾಗಿದೆ ಎಂದು ಅವರಿಗೆ ಹೇಳಿದಾಗ, ಈ ಮಸೂದೆ ಕಾನೂನಾದ ಮೇಲೆ ಅವರಿಗೆಲ್ಲ ಹೆಚ್ಚು ಪ್ರತಿಫಲ ದೊರೆಯಲಿದೆ ಎಂದು ತನ್ನ ಎಂದಿನ ಸಮರ್ಥನೆಯನ್ನು ಕೊಟ್ಟರು. ಅವಕ್ಕೆ

ಪುಟ 15 ಕ್ಕೆ

ಹಣದುಬ್ಬರದ ಜ್ಯೋತಿಷಿಗಳು

ಆರ್ಥಿಕದ ಬಗ್ಗೆ ಭವಿಷ್ಯ ನುಡಿಯುವವರು ಟ್ಯಾಕ್ಸಿ ಡ್ರೈವರ್, ರಿಕ್ಷಾ ಚಾಲಕರಂತೆ ಕಾರ್ಮಿಕರಲ್ಲ, ಆದ್ದರಿಂದ ಅವರು ಕಾರ್ಮಿಕರಂತೆ ತಮ್ಮ ಕೆಲಸಕ್ಕೆ ಹೊಣೆಗಾರರಾಗುವುದಿಲ್ಲ. ಅವರು ಹೇಳುವುದೆಲ್ಲ ಸುಳ್ಳಾಗಬಹುದು, ಆದರೂ ಅದರ ಪರಿಣಾಮ ಅವರ ಭವಿಷ್ಯ ನುಡಿಯುವ ಉದ್ಯೋಗಕ್ಕೆ ಏನೂ ಹಾನಿ ತರುವುದಿಲ್ಲ, ದುಷ್ಪರಿಣಾಮ ಎಂಬುದೇ ಅವರಿಗಿಲ್ಲ ಎಂದಿದ್ದಾರೆ ಡೀನ್ ಬೇಕರ್. ಇದಕ್ಕೆ ಭಾರತದ ನವ-ಉದಾರವಾದಿ ಆರ್ಥಿಕ ತಜ್ಞರೆನಿಸಿದ ಯೋಜನಾ ಆಯೋಗದ ಉಪಾಧ್ಯಕ್ಷ ಮೊಂಟೆಕ್ ಸಿಂಗ್ ಅಹ್ಲುವಾಲಿಯ ಮತ್ತು ಯುಪಿಎ-2 ಸರಕಾರದ ಪ್ರಧಾನ ಆರ್ಥಿಕ ಸಲಹೆಗಾರ ಕೌಶಿಕ್ ಬಸು ರವರಿಗಿಂತ ಉತ್ತಮ ಉದಾಹರಣೆ ಬೇಕಿಲ್ಲ ಎನ್ನುತ್ತಾರೆ ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್ 'ಹಿಂದೂ' ದಿನಪತ್ರಿಕೆಯಲ್ಲಿ ನವಂಬರ್ 24ರಂದು ಪ್ರಕಟವಾದ ಲೇಖನದಲ್ಲಿ.

ಇವರಿಬ್ಬರೂ ಭಾರತದ ಆರ್ಥಿಕತೆಯ ಬಗ್ಗೆ, ಅದರಲ್ಲೂ ಹಣದುಬ್ಬರದ ಬಗ್ಗೆ ಭವಿಷ್ಯ ನುಡಿಯುತ್ತಾ ಇರುತ್ತಾರೆ. ಹಣದುಬ್ಬರ ಎರಡಂಕಿಗೆ ಬಂದಿರುವಾಗ, ಆಹಾರ ಬೆಲೆಯುಬ್ಬರ ಅದನ್ನೂ ಮೀರಿರುವಾಗ, ನಾವು ಸಾಮಾನ್ಯವಾಗಿ ಸರಿಯಾಗಿಯೇ ಹೇಳುವಂತೆ ಈ ಬಾರಿ ಹೇಳಿಲ್ಲ, ಬಹುಶಃ ಭವಿಷ್ಯದಲ್ಲಿ ಮತ್ತೆ ಸರಿಯಾಗಿಯೇ ಹೇಳಬಹುದು ಎಂದು ಹೇಳುತ್ತಿರುವಂತೆ ಕಾಣುತ್ತದೆ.

ಡಾ.ಅಹ್ಲುವಾಲಿಯಾರಂತೂ ಇಲ್ಲಿ ವಿಶ್ವಾಸಾರ್ಹತೆಯ ಪ್ರಶ್ನೆಯೂ ಏಳುತ್ತದೆ ಎಂದು ಒಪ್ಪಿಕೊಂಡಿದ್ದಾರೆ. "ಹಣದುಬ್ಬರದಲ್ಲಿ ಇಳಿಕೆ ಈ ಮೊದಲೇ ಸಂಭವಿಸುತ್ತದೆ ಎಂದಿದ್ದೆವು, ಅಷ್ಟರ ಮಟ್ಟಿಗೆ ನಮ್ಮ ವಿಶ್ವಾಸಾರ್ಹತೆ ಪ್ರಶ್ನಾರ್ಹವಾಗಿದೆ" ಎಂದು ಹೇಳಿದ ಉಸಿರಿನಲ್ಲೇ ಅವರು ಮುಂದಿನ ವರ್ಷದ ಆರಂಭದಲ್ಲಿ ಹಣದುಬ್ಬರದ ಒತ್ತಡ ಕಡಿಮೆಯಾಗುತ್ತದೆ ಎಂಬ ಇನ್ನೊಂದು ಭವಿಷ್ಯವಾಣಿ ಉದುರಿಸಿದ್ದಾರೆ.

ಡಾ.ಕೌಶಿಕ್ ಬಸು ಪ್ರಕಾರ ಹಣದುಬ್ಬರ ಡಿಸೆಂಬರಿನಲ್ಲೇ ಇಳಿಯಲಿದೆ, ಡಾ. ಅಹ್ಲುವಾಲಿಯ "ಫೆಬ್ರುವರಿ ವೇಳೆಗೆ ಇಳಿಯದಿದ್ದರೆ ನಾವೇನು ಮಾಡುತ್ತಿದ್ದೇವೆ ಎಂಬುದು ನಿಜವಾಗಿ ನಮಗೇ ತಿಳಿದಿಲ್ಲವೆಂದಾಗುತ್ತದೆ" ಎಂದಿದ್ದಾರೆ. ನಿಜ, ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ನೋಡಿದರೆ ಕಳೆದ ಇಪ್ಪತ್ತು ವರ್ಷಗಳಿಂದ ತಾವೇನು ಮಾಡುತ್ತಿದ್ದೇವೆ ಎಂಬುದೂ ಅವರಿಗೆ ತಿಳಿದಿಲ್ಲವೇನೋ ಅನಿಸುತ್ತಿದೆ. ಆದರೆ ನಿಜ ಸಂಗತಿ ಅದಲ್ಲ, ತಾವೇನು ಮಾಡುತ್ತಿದ್ದೇವೆ ಎಂದು ಅವರು ಚೆನ್ನಾಗಿ ತಿಳಿದಿದೆ ಎನ್ನುತ್ತಾರೆ ಸಾಯಿನಾಥ್. ಅದೆಂದರೆ, ಶ್ರೀಮಂತರಿಗೆ ಲಾಭವಾದರೆ ಅದರ ಪ್ರಯೋಜನ ಬಡವರಿಗೂ ದಕ್ಕುತ್ತದೆ, ದುರಾಸೆ ಒಳ್ಳೆಯದು, ಅಸಮಾನತೆ ನೆರವಾಗುತ್ತದೆ ಇತ್ಯಾದಿ ತತ್ವಗಳು. ಅದರಿಂದ ದೇಶಕ್ಕೆ ಬಹಳ ಹಾನಿಯಾಗಿರಬಹುದು, ಆದರೆ ಅಂತ ಹಾನಿ ತಂದಿರುವ ಇಂತವರಿಗೆ ಏನೂ ಆಗುವುದಿಲ್ಲ ಎಂದು ವ್ಯಂಗ್ಯವಾಡಿದ್ದಾರೆ ಸಾಯಿನಾಥ್. ಆದರೆ ಎಂದಿನ ವರೆಗೆ?

ಜನಶಕ್ತಿ
ಕನ್ನಡ ವಾರಪತ್ರಿಕೆ

ಮತ್ತದೇ ಸುಳ್ಳು : ಮಮತಾ ಬ್ಯಾನರ್ಜಿ ಹೇಳಿಕೆಯಿಂದಲೇ ಬಹಿರಂಗ

ಕಳೆದ ವರ್ಷ ನಡೆದ ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ರೈಲು ಸ್ಫೋಟದಲ್ಲಿ ಸಿಪಿಐ(ಎಂ) ಕೈವಾಡ ಇದೆ ಎಂದು ಮಮತಾ ಬ್ಯಾನರ್ಜಿ ಆರೋಪಿಸಿದ್ದರು. ಈಗ ಇದು ಮಾವೋವಾದಿಗಳದ್ದೇ ಕೃತ್ಯ ಎಂಬುದನ್ನು ಸ್ವತಃ ಸಿಎಂ ಮಮತಾ ಒಪ್ಪಿಕೊಂಡಿದ್ದಾರೆ.

“160 ಮಂದಿಯನ್ನು ಬಲಿ ತೆಗೆದುಕೊಂಡ ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ಸ್ಫೋಟದ ಹಿಂದೆ ಮಾವೋವಾದಿಗಳಿದ್ದರು ಎಂಬುದು ಎಲ್ಲರಿಗೂ ತಿಳಿದ ವಿಷಯ. ಈಗ ಇದು ತನಿಖೆಯಲ್ಲೂ ದೃಢಪಟ್ಟಿದೆ” ಎಂದು ಮಮತಾ ಇತ್ತೀಚೆಗೆ ನಡೆದ ಕೊಲ್ಕತ್ತಾ ರ್‍ಯಾಲಿಯನ್ನು ಉದ್ದೇಶಿಸಿ ಹೇಳಿದ್ದಾರೆ.

ಈ ಬಗ್ಗೆ ತನಿಖೆ ನಡೆಸಿದ ಸಿಬಿಐ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ವರದಿಯೊಂದನ್ನು ಸಲ್ಲಿಸಿದೆ. ಮೇಲ್ನೋಟಕ್ಕೆ ಮಾವೋವಾದಿಗಳ ಕೈವಾಡ ಇರುವುದು ದೃಢಪಟ್ಟಿದೆ ಎಂದು ಈ ಆರೋಪಪಟ್ಟಿಯಲ್ಲಿ ಹೇಳಲಾಗಿದೆ.

2010ರ ಮೇಯಲ್ಲಿ ಈ ಘಟನೆ ನಡೆದಾಗ ಇದೇ ಮಮತಾ ರೈಲ್ವೇ ಸಚಿವರಾಗಿದ್ದರು. ಇದು ಸಿಪಿಐ(ಎಂ) ಕಾರ್ಯಕರ್ತರ ಕೃತ್ಯ ಎಂದು ಆಗ ಹೇಳಿದ್ದನ್ನು ಸ್ಮರಿಸಬಹುದು. ಸಿಬಿಐ ತನಿಖೆ ನಡೆಸುವಂತೆಯೂ ಆಗ್ರಹಿಸಿದ್ದರು.

ಕಳೆದ ಕೊಲ್ಕತ್ತಾ ಮುನ್ಸಿಪಲ್ ಚುನಾವಣೆಯಲ್ಲಿ ಇದನ್ನೇ ಮುಖ್ಯ ವಿಷಯವನ್ನಾಗಿ ಮಾಡಲಾಗಿತ್ತು. ಈಕೆ ಇಂತಹ ಆರೋಪಗಳನ್ನು ಸುಖಾಸುಮ್ಮನೆ ಮಾಡುತ್ತಿರುವುದು ಇದೇ ಮೊದಲಲ್ಲ. ಆಕೆಯ ರಾಜಕೀಯ ಜೀವನದುದ್ದಕ್ಕೂ ಕಮ್ಯುನಿಸ್ಟರ ವಿರುದ್ಧ, ಅದರಲ್ಲೂ ಮಾರ್ಕ್ಸ್‌ವಾದಿ ಪಕ್ಷದ ವಿರುದ್ಧ ಮಾಡುತ್ತಲೇ ಬಂದಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಮನ್ ಬಸು ಮತ್ತು ಪ್ರತಿಪಕ್ಷ ನಾಯಕ ಸೂರ್ಯಕಾಂತ್ ಮಿಶ್ರಾ, ಮಮತಾ ತಮ್ಮ ಹಿಂದಿನ ಹೇಳಿಕೆ ಬಗ್ಗೆ ಕ್ಷಮಾಪಣೆ ಕೋರಬೇಕು ಎಂದು ಆಗ್ರಹಿಸಿದ್ದಾರೆ.

ನೆರೆ ಹೊರೆ

ಗುಜರಾತ್ ನರಮೇಧ: ಇಸ್ರಾತ್ ಜಹಾನ್ ಪ್ರಕರಣ ನರೇಂದ್ರ ಮೋದಿ ರಾಜೀನಾಮೆಗೆ ಆಗ್ರಹ

2004ರ ಜೂನ್‌ನಲ್ಲಿ ಗುಜರಾತ್ ಪೊಲೀಸರು ನಡೆಸಿದ ಇಸ್ರಾತ್ ಜಹಾನ್ ಮತ್ತು ಇತರ ಮೂವರ ಹತ್ಯೆ ಪ್ರಕರಣ ಮತ್ತೆ ಪುನಾರಂಭಗೊಂಡಿದೆ. ಎನ್‌ಕೌಂಟರ್ ಎಂದು ಕರೆಯಲಾದ ಈ ಹತ್ಯೆಯ ಪ್ರಕರಣದ ತನಿಖೆ ನಡೆಸಲು ಹೈಕೋರ್ಟ್ ವಿಶೇಷ ತನಿಖಾ ತಂಡವನ್ನು ನೇಮಿಸಿದೆ.

ಈ ಪ್ರಕರಣದಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಪಾತ್ರ ಇರುವುದು ಬಹುತೇಕ ನಿಚ್ಚಳವಾಗಿದೆ. 19 ವರ್ಷದ ವಿದ್ಯಾರ್ಥಿಯನ್ನು ಬರ್ಬರವಾಗಿ ಹತ್ಯೆ ಮಾಡಿದ ಸಮವಸ್ತ್ರಧಾರಿ ಕ್ರಿಮಿನಲ್‌ಗಳು ಬಿಜೆಪಿ ಸರ್ಕಾರದ ಕೈಗೊಂಬೆಯಾಗಿ ವರ್ತಿಸಿರುವುದು ಜಗಜ್ಜಾಹೀರಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಕ್ಷಣ ಹೊಸತಾಗಿ ಎಫ್‌ಐಆರ್ ಸಲ್ಲಿಸಲು ಹೈಕೋರ್ಟ್ ಆದೇಶ ನೀಡಿದೆ. ಹಾಗೂ ಆರೋಪಿಗಳ ಬಂಧಿಸುವಂತೆ ನಿರ್ದೇಶನ ನೀಡಿದೆ.

ಇದೇ ವೇಳೆ ಮತ್ತೊಂದು ಮಹತ್ವದ ಪ್ರಶ್ನೆಗೆ ಉತ್ತರ ಸಿಗಬೇಕಿದೆ. ಈ ಪ್ರಕರಣವನ್ನು ಮುಚ್ಚಿ ಹಾಕುವುದರಲ್ಲಿ ಮುಖ್ಯಮಂತ್ರಿ ನರೇಂದ್ರ ಮೋದಿ ಮತ್ತು ಅವರ ಸರ್ಕಾರದ ಉನ್ನತ ಅಧಿಕಾರಿಗಳ ಪಾತ್ರದ ಬಗ್ಗೆ ಸ್ಪಷ್ಟನೆ ಸಿಗಬೇಕಿದೆ. 2002ರಲ್ಲಿ ನಡೆದ 9 ನರಮೇಧ ಪ್ರಕರಣದಂತೆ, ಈ ಪ್ರಕರಣದ ನ್ಯಾಯದಾನದ ಪ್ರತಿಯೊಂದು ಹಂತದಲ್ಲೂ ಸರ್ಕಾರ ತಿರುಚುವ ಕೃತ್ಯವೆಸಗಿದೆ. ನರೇಂದ್ರ ಮೋದಿ ಅಧಿಕಾರದಲ್ಲಿ ಇರುವವರೆಗೆ ಪ್ರಕರಣದಲ್ಲಿ ನ್ಯಾಯ ಸಿಗುವ ಸಾಧ್ಯತೆ ಇಲ್ಲ. ಈ ಹಿನ್ನೆಲೆಯಲ್ಲಿ ಮೋದಿ ರಾಜೀನಾಮೆ ನೀಡಬೇಕು.

ವಿಶೇಷ ತನಿಖಾ ತಂಡದ ವರದಿಯಲ್ಲಿ ಕೇಂದ್ರ ತನಿಖಾ ಸಂಸ್ಥೆಯ ಉನ್ನತ ಅಧಿಕಾರಿಗಳ ಪಾತ್ರದ ಬಗ್ಗೆಯೂ ತನಿಖೆ ನಡೆಯಬೇಕಿದೆ. ನಕಲಿ ಸಾಕ್ಷ್ಯಗಳನ್ನು ಸೃಷ್ಟಿಸಿರುವುದನ್ನೂ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರವೂ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

ಬೀದಿ ಪ್ರತಿಭಟನೆಯ ಹಕ್ಕು ಪ್ರತಿಪಾದಿಸಿದ

ಜಯರಾಜನ್ ಜೈಲಿನಿಂದ ಬಿಡುಗಡೆ ಕೆಂಬಾವುಟಗಳ ಅದ್ದೂರಿಯ ಸ್ವಾಗತ

ರಾಜ್ಯ ಹೈಕೋರ್ಟ್ ತೀರ್ಪನ್ನು ಟೀಕೆ ಮಾಡಿದ್ದಾರೆ ಎಂಬ ಆರೋಪದ ಮೇಲೆ ಕೇರಳ ಹೈಕೋರ್ಟ್ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಎಂ.ವಿ. ಜಯರಾಜನ್ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣವನ್ನು ದಾಖಲಿಸಿತ್ತು. ಈ ಪ್ರಕರಣದಲ್ಲಿ ಆರು ತಿಂಗಳ ಸೆರೆವಾಸದ ಶಿಕ್ಷೆಯನ್ನೂ ವಿಧಿಸಿತ್ತು. ಆದರೆ, ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ನವೆಂಬರ್ 15ರಂದು ಜಯರಾಜನ್‌ಗೆ ಸರ್ವೋಚ್ಚ ನ್ಯಾಯಾಲಯ ಜಾಮೀನು ನೀಡಿತು.


ಗೋಖಲೆ ಮತ್ತು ಲೋಧಾ ಅವರನ್ನೊಳಗೊಂಡ ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠ ಷರತ್ತುಬದ್ಧ ಜಾಮೀನು ನೀಡಿದೆ. ಈ ಮೂಲಕ ಮೇಲ್ಮನವಿಗೆ ಅವಕಾಶ ನೀಡದ ಹೈಕೋರ್ಟ್ ನಿರ್ಧಾರಕ್ಕೆ ದೊಡ್ಡ ಹಿನ್ನಡೆ ಉಂಟಾಗಿದೆ. ಹೈಕೋರ್ಟ್‌ನ ಆದೇಶ ಅತಿರೇಕದ್ದು ಎಂದು ವಿಭಾಗೀಯ ಪೀಠ ಹೇಳಿದೆ.

ಜಯರಾಜನ್ ಸುಪ್ರೀಂ ಕೋರ್ಟ್‌ಗೆ ತಮ್ಮ ಮೇಲ್ಮನವಿಯಲ್ಲಿ ಹೈಕೋರ್ಟ್‌ನ ಆದೇಶ ಪೂರ್ವಾಗ್ರಹ ಪೀಡಿತವಾದದ್ದು ಎಂದು ಟೀಕಿಸಿದ್ದರು. ಇದನ್ನು ಮೇಲ್ನೋಟಕ್ಕೆ ಪುರಸ್ಕರಿಸಿದ ನ್ಯಾಯಾಲಯ, ಹೈಕೋರ್ಟ್ ನ್ಯಾಯದಾನ ದ್ವೇಷದಿಂದ ಕೂಡಿತ್ತು ಎಂದು ಅಭಿಪ್ರಾಯಪಟ್ಟಿದೆ.

ಈ ತೀರ್ಪಿಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಅತೀವ ಸಂತಸ ವ್ಯಕ್ತಪಡಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ಆದೇಶದಿಂದ ನ್ಯಾಯಾಂಗ ವ್ಯವಸ್ಥೆಗೆ ಬಲ ಬಂದಿದೆ. ಜೊತೆಗೆ ಇದು ಪಕ್ಷದ ನಿಲುವಿಗೆ ದೊರೆತ ಜಯ ಎಂದು ಅಭಿಪ್ರಾಯಪಟ್ಟಿದ್ದಾರೆ.

ತಿರುವನಂತಪುರ ಸೆಂಟ್ರಲ್ ಜೈಲಿನಿಂದ ಹೊರಬಂದ ರಾಜ್ಯ ನಾಯಕನಿಗೆ ಮುಗಿಲು ಮುಟ್ಟಿದ ಘೋಷಣೆಗಳು ಹಾಗೂ ಕೆಂಬಾವುಟಗಳ ಅದ್ದೂರಿಯ ಸ್ವಾಗತ ನೀಡಲಾಯಿತು.

ಬಿಡುಗಡೆಗೂ ಮುನ್ನ, ಕೇಂದ್ರ ಸಮಿತಿ ಸದಸ್ಯೆ ಪಿ.ಕೆ. ಶ್ರೀಮತಿ ಮತ್ತು ವೈಕಂ ವಿಶ್ವಂ ಜೈಲಿನಲ್ಲಿ ಜಯರಾಜನ್ ಅವರನ್ನು ಭೇಟಿ ಮಾಡಿದ್ದರು.



ಬಿಡುಗಡೆಗೊಂಡ ಜಯರಾಜನ್‌ಗೆ ಭಾರೀ ಸ್ವಾಗತ

ಶಾಸಕರಾದ ವಿ. ಶಿವನ್‌ಕುಟ್ಟಿ, ಕೆ.ವಿ. ಅಬ್ದುಲ್ ಖಾದರ್ ಹಾರ ಹಾಕಿ ನಾಯಕನನ್ನು ಸ್ವಾಗತಿಸಿದರು. ಆ ಕ್ಷಣಕ್ಕೆ ಜೈಲಿನ ಅಂಗಣದಲ್ಲಿ ಸಾವಿರಾರು ಕೆಂಬಾವುಟಗಳು ಹಾರಾಡಿದವು, ಉತ್ಸಾಹಭರಿತ ಘೋಷಣೆಗಳು ಮೊಳಗಿದವು.

ಪೂಜಾಪ್ಪುರದಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಜಯರಾಜನ್ ಮತ್ತು ಇತರ ನಾಯಕರು ಭಾಷಣ ಮಾಡಿದರು. ಬೀದಿ ಬದಿಯಲ್ಲಿ ಹೋರಾಟ ಮಾಡುವುದು ಜನತೆಯ ಹಕ್ಕು, ಇದಕ್ಕೆ ಪ್ರಸಕ್ತ ಸರ್ಕಾರ ಅವಕಾಶ ಮಾಡಿಕೊಡಬೇಕು, ಕಾನೂನನ್ನು ಅಂಗೀಕರಿಸಬೇಕು ಎಂದು ಉಮ್ಮನ್ ಚಾಂಡಿ ಸರ್ಕಾರವನ್ನು ಆಗ್ರಹಿಸಲಾಯಿತು.

ಇದಕ್ಕೂ ಮುನ್ನ, ಕೇರಳ ಹೈಕೋರ್ಟ್ ಮುಂದೆಯೂ ಬೃಹತ್ ಪ್ರತಿಭಟನೆ ನಡೆಸಲಾಯಿತು. ಸಾವಿರಾರು ಮಂದಿ ಈ ಬೃಹತ್ ಚಳವಳಿಯ ಭಾಗವಾಗಿದ್ದರು. ಮಾನವ ಹಕ್ಕುಗಳನ್ನು ರಕ್ಷಿಸುವ, ಜಯರಾಜನ್ ಬಂಧನವನ್ನು ಪ್ರತಿಭಟಿಸುವ ಚಳವಳಿಯಾಗಿ ಈ ಬೃಹತ್ ಸಭೆ ರೂಪುಗೊಂಡಿತ್ತು. ಇದು ಕೇರಳ ಹೈಕೋರ್ಟ್‌ನ ಇತಿಹಾಸದಲ್ಲೇ ದಾಖಲಾದ ಮೊದಲ ಪ್ರತಿಭಟನಾ ಸಭೆಯಾಯಿತು.

ಇಲ್ಲಿ ಸ್ಲೋಗನ್‌ಗಳಿರಲಿಲ್ಲ, ಭಾಷಣಗಳೂ ಇರಲಿಲ್ಲ. ಧರಣಿಗಳಾಗಲೀ, ಪ್ರತಿಭಟನಾ ರ್‍ಯಾಲಿಗಳಾಗಿ ಕಾಣಸಿಗಲಿಲ್ಲ. ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 2 ಗಂಟೆಯ ವರೆಗೆ ಜನರು ಹೈಕೋರ್ಟ್ ಪ್ರಾಂಗಣದಿಂದ ಕದಲಲಿಲ್ಲ. ವಿನೂತನ ಪ್ರತಿರೋಧದಿಂದ ಕೋರ್ಟ್ ಕಟ್ಟಡದ ಯಾವುದೇ ಕಚೇರಿ ಕಾರ್ಯನಿರ್ವಹಿಸಲಿಲ್ಲ. ರಸ್ತೆಯಲ್ಲಿ ವಾಹನ ಸಂಚಾರವೂ ಸ್ಥಗಿತಗೊಂಡಿತ್ತು.

ಇದಕ್ಕೂ ಒಂದು ದಿನದ ಹಿಂದೆ, ಸಿಟಿ ಪೊಲೀಸ್ ಕಮಿಷನರ್ ಅಜಿತ್ ಕುಮಾರ್, ಪಿಣರಾಯಿ ವಿಜಯನ್ ಅವರಿಗೊಂದು ನೋಟೀಸ್ ಕಳಿಸಿ ಹೈಕೋರ್ಟ್ ಕಲಾಪ ಮತ್ತು ಜನಜೀವನಕ್ಕೆ ಅಡ್ಡಿಪಡಿಸಬಾರದು

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ



ಒಕ್ಕಲೆಬ್ಬಿಸುವ ನೋಟಿಸಿಗೆ ಪ್ರತಿರೋಧ

ಉತ್ತರ ಕನ್ನಡ ಜಿಲ್ಲೆ ಅರಣ್ಯ ಭೂಮಿ ಸಾಗುವಳಿದಾರರಿಂದ ಭಾರಿ ಪ್ರತಿಭಟನೆ

ಉತ್ತರ ಕನ್ನಡ ಜಿಲ್ಲೆ ಅರಣ್ಯ ಜಿಲ್ಲೆ. ಶೇ. 80 ಚ್ಚು ಅರಣ್ಯ ಪ್ರದೇಶ. ಜನವಸತಿ ಪ್ರದೇಶಗಳು ಸ ಹಲವಾರು ರಾಷ್ಟ್ರೀಯ ಯೋಜನೆಗಳಿಂದ ರವುಗೊಂಡಿವೆ. ಕಾಳಿ ಜಲ ವಿದ್ಯುತ್ ೋಜನೆಗಳಿಗೆ, ಶರಾವತಿ ವಿದ್ಯುತ್ ೋಜನೆಗಳಿಗೆ, ಸೀಬರ್ಡ ನೌಕಾನೆಲೆಗೆ, ಕೈಗಾ ಣು ವಿದ್ಯುತ್‌ಗೆ, ಕೊಂಕಣ ರೇಲ್ವೆಗೆ ಹೀಗೆ ತ್ತು ಹಲವು ಯೋಜನೆಗಳು. ಮತ್ತೆ ಸಾವಿರಾರು ಕ್ಟೇರ್ ವ್ಯಾಪಿಸಿರುವ 'ಹುಲಿ ಯೋಜನೆ' ಂಧಿದೆ. ಸಿ.ಆರ್.ಝಡ್. ಕರಾವಳಿಯನ್ನು ್ಯಾಪಿಸಿದೆ.

ಜಿಲ್ಲೆಯ ಜನತೆ ನಿರಾಶ್ರಿತರ ಪಟ್ಟಿಗೆ ಸಾವಿರ ಾವಿರ ಸಂಖ್ಯೆಯಲ್ಲಿ ಹೊಸದಾಗಿ ೇರುತ್ತಿದ್ದಾರೆ. ಇಂತಹ ಸಂದಭದಲ್ಲೆ ರಾಶ್ರಿತರು, ಭೂಮಿಯಿಲ್ಲದವರು, ರೈತರು, ೂಲಿಕಾರರು, ಬುಡಕಟ್ಟು ಜನರು ಲಾತಲಾಂತರಗಳಿಂದ ಅರಣ್ಯ ಭೂಮಿಯಲ್ಲಿ ಾಸ ಮಾಡುತ್ತ, ವ್ಯವಸಾಯ ಮಾಡುತ್ತ ತಮ್ಮ ದಕನ್ನು ಕಟ್ಟಿಕೊಂಡಿದ್ದಾರೆ. ಸರಕಾರಕ್ಕೆ ಬೇರೆ ೇರೆ ಸಂದರ್ಭದಲ್ಲಿ ತಮ್ಮ ವಶದಲ್ಲಿರುವ ೂಮಿಯನ್ನು ಸಕ್ರಮಗೊಳಿಸಕೊಡಲು ರ್ಜಿಗಳನ್ನು ಹಾಕಿಕೊಂಡಿದ್ದಾರೆ ಒಂದು ಂದಾಜಿನ ಪ್ರಕಾರ ಕನಿಷ್ಠ 15 ಸಲ ಅರ್ಜಿ ಾಕಿರುವ ದಾಖಲೆಗಳು ಜಿಲ್ಲೆಯಲ್ಲಿವೆ. 980ರ ಅರಣ್ಯ ಕಾಯ್ದೆಯಂತೆ 1978ರ ಂದಿನ ಅರಣ್ಯ ಅತಿಕ್ರಮಣ ಮಂಜೂರಿಗೆ ವತ್ತು ಅರ್ಜಿ ಹಾಕಿಕೊಂಡವರಿಗೂ ರಕಾರ ಅರಣ್ಯ ಭೂಮಿ ಸಕ್ರಮ ಮಾಡಿಲ್ಲ. ಾವಿರಾರು ಅರ್ಜಿಗಳು ಪರಿಶೀಲನೆ ಂತದಲ್ಲೆ ಇವೆ. ಹೆಚ್ಚಿನವರನ್ನು ರಸ್ಕರಿಸಿದ್ದಾರೆ.

2006ರ ಅರಣ್ಯ ಕಾಯ್ದೆಯಂತೆ ಜಿಲ್ಲೆಯಲ್ಲಿ 009ನೆ ಸಾಲಿನಲ್ಲಿ 45 ಸಾವಿರಕ್ಕೂ ಹೆಚ್ಚು ರಣ್ಯ ಅತಿಕ್ರಮಣದಾರರು ಅರ್ಜಿ ಾಕಿಕೊಂಡಿದ್ದಾರೆ. ಇದರಲ್ಲಿ 2,500 ಕ್ಕಿಂತ ೆಚ್ಚು ಬುಡಕಟ್ಟು ಜನರ ಅರ್ಜಿಗಳಿವೆ. ಆದರೆ ರಕಾರಿ ಅಧಿಕಾರಿಗಳು ಈ 3 ವರ್ಷದಲ್ಲಿ 00 ಬುಡಕಟ್ಟು ಕುಟುಂಬಗಳಿಗೆ ಮಾತ್ರ ಪಟ್ಟಾ ನೀಡಿದ್ದಾರೆ. ಬಾಕಿ ಪೆಂಡಿಂಗ್ ಉಳಿಸಲಾಗಿದೆ. ಇತರೆ ಅರಣ್ಯವಾಸಿಗಳಿಗೆ 75 ವರ್ಷದ ದಾಖಲೆ ಇಲ್ಲ ಎಂದು ಹೇಳಿ ತಿರಸ್ಕರಿಸಲಾಗಿದೆ. ತಿರಸ್ಕಾರಗೊಂಡವರು ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿ ಹಾಕಮಿಕೊಂಡು ಕಾಯುತ್ತಿದ್ದಾರೆ.



ಈ ಮಧ್ಯ ಸಪ್ಟೆಂಬರ್‌ನಲ್ಲಿ ಕೆಲವು ವಲಯ ಅರಣ್ಯಾಧಿಕಾರಿಗಳು ನೂರಾರು ಜನರಿಗೆ ತೆರವುಗೊಳಿಸಲು ನೋಟಿಸ ನೀಡಿದರು. ಇದರಿಂದ ಜನ ರೊಚ್ಚಿಗೆದ್ದರು. ಅಧಿಕಾರಿಗಳ, ಮಂತ್ರಿಗಳ ಆಶ್ವಾಸನೆಗೆ ಬೆಲೆಯಿಲ್ಲದಂತಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ತೀವ್ರ ಪ್ರತಿಭಟನೆಗೆ ಮುಂದಾದರು.

ನವೆಂಬರ 18 ರಂದು ಅಂಕೋಲಾದ ಮಾದನಗೇರಿಯಲ್ಲಿ ರಾಷ್ಟ್ರೀಯ ಹೆದ್ದಾರಿ 17ನ್ನು 1 ತಾಸಿಗೂ ಹೆಚ್ಚು ಕಾಲ ತಡೆದು ಉಗ್ರ ಪ್ರತಿಭಟನೆ ನಡೆಸಲಾಯಿತು. ಸಾವಿರಾರು ಜನ ಅತಿಕ್ರಮಣದಾರರು ಅಂಕೋಲಾ ತಾಲೂಕ ವ್ಯಾಪ್ತಿಯಿಂದ ಪಾಲ್ಗೊಂಡಿದ್ದರು. ತಾಲೂಕಿನ ಗ್ರಾಮ ಪಂಚಾಯತ, ತಾಲೂಕ ಪಂಚಾಯತ, ಜಿಲ್ಲಾ ಪಂಚಾಯತನ ಜನಪ್ರತಿನಿಧಿಗಳು ಅನಿವಾರ್ಯವಾಗಿ ಪ್ರತಿಭಟನೆ ನಡೆಯುವ ಸ್ಥಳಕ್ಕೆ ಆಗಮಿಸಿ ಪ್ರತಿಭಟನೆ ಬೆಂಬಲಿಸಬೇಕಾಯಿತು. ಕುಮಟಾ ಶಾಸಕ ದಿನಕರ ಶೆಟ್ಟಿ, ಕಾಂಗ್ರೆಸ್ ಮತ್ತು ಜೆ.ಡಿ.(ಎಸ್.) ಪಕ್ಷಗಳ ತಾಲೂಕ ಮುಖಂಡರು ಹೋರಾಟ ಬೆಂಬಲಿಸಿ ಪಾಲ್ಗೊಳ್ಳಬೇಕಾದ ಅನಿವಾರ್ಯತೆ ಬಂತು. ಅಂಕೋಲಾ ತಾಲೂಕಿನ ಎಲ್ಲಾ ಪಂಚಾಯತಗಳಿಂದ ಸಾವಿರಾರು ಜನ ಪಾಲ್ಗೊಂಡಿದ್ದರಿಂದ ಸರಕಾರದ ಗಮನ ಸೆಳೆಯಲಾಯಿತು. ಜಿಲ್ಲಾಧಿಕಾರಿಗಳ ಪರವಾಗಿ ಅಂಕೋಲಾ ತಹಶೀಲ್ದಾರ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘ ಅಂಕೋಲಾ ತಾಲೂಕ ಸಮಿತಿ ಮತ್ತು ಜಿಲ್ಲಾ ಅರಣ್ಯ ಅತಿಕ್ರಮಣದಾರರ ಹೋರಾಟ ಸಮಿತಿ ಅಂಕೋಲಾ ಜಂಟಿಯಾಗಿ ಈ ಕಾರ್ಯಕ್ರಮ ಸಂಘಟಿಸಿದ್ದೆವು. ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತಾರಾಮ ನಾಯಕ, ತಾಲೂಕ ಸಮಿತಿ ಅಧ್ಯಕ್ಷರಾದ ಗೌರೀಶ ನಾಯಕ, ಕಾರ್ಯದರ್ಶಿ ಗಿರೀಶ ಗೌಡ, ಸಿ.ಐ.ಟಿ.ಯು. ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವಕರ, ರೈತ ಸಂಘದ ಪದಾಧಿಕಾರಿಗಳಾದ ರಮಾನಂದ ಆರ್. ನಾಯಕ, ದೇವರಾಯ ನಾಯಕ ಸಗಡಗೇರಿ, ರಮಾನಂದ ನಾಯಕ ಹಿಲ್ಲೂರ, ನಾಗರಾಜ ಹೆಗಡೆ ಕೊಡ್ಲಗದ್ದೆ, ನಾರಾಯಣ ನಾಯಕ ಸುಂಕಸಾಳ, ಚಂದ್ರಕಾಂತ ಮರಾಠೆ, ಪಾಂಡುರಂಗ ಪಟಗಾರ, ರಾಜು ಗೌಡ, ಮಾದೇವ ನಾಯ್ಕ, ಬಾಲಚಂದ್ರ ಶೆಟ್ಟಿ ಮುಂತಾದವರು ನೇತೃತ್ವ ವಹಿಸಿದ್ದರು.

ಹೊನ್ನಾವರದಲ್ಲಿ ಪ್ರತಿಭಟನೆ : ನವೆಂಬರ್ 30 ರಂದು ಹೊನ್ನಾವರದ ತಹಶೀಲ್ದಾರ ಕಛೇರಿ ಎದುರು ಅರಣ್ಯ ಅತಿಕ್ರಮಣದಾರರು ಬೃಹತ್ ಪ್ರತಿಭಟನಾ ಧರಣಿ ನಡೆಸಿದರು. ತಾಲೂಕಿನ ಗ್ರಾಮ ಪಂಚಾಯತ ಅಧ್ಯಕ್ಷರ–ಉಪಾಧ್ಯಕ್ಷರ ಒಕ್ಕೂಟ ಈ ಕಾರ್ಯಕ್ರಮ ಸಂಘಟಿಸಿತ್ತು. ತಾಲೂಕಾ ಅಧ್ಯಕ್ಷ ತಿಲಕ ಗೌಡ ನೇತೃತ್ವ ವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಸಿ.ಐ.ಟಿ.ಯು. ಮುಖಂಡರಾದ ಸುಭಾಶ ಕೊಪ್ಪಿಕರ ಮುಂತಾದವರು ಪಾಲ್ಗೊಂಡಿದ್ದರು. ತಾಲೂಕಿನ ಪ್ರತಿನಿಧಿಗಳಲ್ಲದೆ ಅರಣ್ಯ ಅತಿಕ್ರಮಣದಾರರು ಮತ್ತು ಶಾಸಕರಾದ ಜೆ.ಡಿ. ನಾಯ್ಕ, ದಿನಕರ ಶೆಟ್ಟಿ ಹೋರಾಟಕ್ಕೆ ಬೆಂಬಲಿಸಿ ಮಾತನಾಡಿದರು.

ಜಯರಾಜನ್ ಬಿಡುಗಡೆ

ಪುಟ 14 ರಿಂದ

ಎಂದು ಸೂಚಿಸಿದ್ದರು. ಆದರೆ, ಜನ ಮೌನ ಪ್ರತಿಭಟನೆ ಮೂಲಕ ಈ ನೋಟೀಸ್‌ಗೆ ಉತ್ತರ ೀಡಿದ್ದಾರೆ. ಇದು ಪಕ್ಷದಿಂದ ನಡೆದ ಾರ್ಯಕ್ರಮವೂ ಆಗಿರಲಿಲ್ಲ ಎನ್ನುವುದು ವಿಶೇಷ.

ಪ್ರಜಾಪ್ರಭುತ್ವದಲ್ಲಿ ಜನರೇ ಸುಪ್ರೀಂ ಎಂಬ ಕಾರ್ಡ್‌ಗಳನ್ನು 30 ಸಾವಿರಕ್ಕೂ ಹೆಚ್ಚು ಜನ ಪ್ರದರ್ಶಿಸಿ ಜನ ಚಳವಳಿಯ ತಾಕತ್ತನ್ನು ೋರಿಸಿದ್ದರು.

ಅಂತೂ ಜಯರಾಜನ್ ಬಿಡುಗಡೆ ಯಾಗಿದ್ದಾರೆ. ಪ್ರಕರಣದ ವಿವರವಾದ ವಿಚಾರಣೆ 2012ರ ಜುಲೈನಲ್ಲಿ ನಡೆಯಲಿದೆ.

ಯುಪಿಎ ದರ್ಬಾರ್

ಪುಟ 13 ರಿಂದ

ಪ್ರತ್ಯುತ್ತರವಾಗಿ ಕಾರ್ಮಿಕ ಮುಖಂಡರು ಯುರೋಪಿನ ಉದಾಹರಣೆಯನ್ನು ಮುಂದಿಟ್ಟರು. ಅಲ್ಲಿಯೂ ಪೆನ್ಶನ್ 'ಸುಧಾರಣೆ' ಎಂಬುದು ಆಗಿದ್ದು ಆರ್ಥಿಕ ಬಿಕ್ಕಟ್ಟಿನಲ್ಲಿ ನೌಕರರ ಪೆನ್ಶನ್ ನಿಧಿಗಳೆಲ್ಲ ಕೊಚ್ಚಿ ಹೋದವು ಎಂದು ನೆನಪಿಸಿದರು. ಈ ಮಸೂದೆಯಲ್ಲಿ ಕನಿಷ್ಠ ಪೆನ್ಶನ್‌ನ ಪ್ರಸ್ತಾಪವೂ ಇಲ್ಲ. ಸಂಸದೀಯ ಸ್ಥಾಯೀ ಸಮಿತಿ ಈ ಬಗ್ಗೆ ಮಾಡಿರುವ ಒಮ್ಮತದ ಶಿಫಾರಸನ್ನು ಕೂಡ ಈ ಮಸೂದೆ ಗಮನಿಸಿಲ್ಲ ಎಂದು ತಪನ್ ಸೆನ್ ಹೇಳಿದಾಗ ಪ್ರಧಾನ ಮಂತ್ರಿಗಳ ಬಳಿ ಉತ್ತರವೇ ಇರಲಿಲ್ಲ. ವಾಸ್ತವವಾಗಿ ಅವರ ಬಾಯಿಂದ ಮಾತೇ ಹೊರಡಲಿಲ್ಲ. ಈ ಎಲ್ಲ ಅಂಶಗಳನ್ನು ಗಮನಿಸಲಾಗುವುದು ಎಂದಷ್ಟೇ ಅವರು ಹೇಳಿದರು.

2011ರ ಈ ಮಸೂದೆ ವಾಸ್ತವವಾಗಿ 2005ರಲ್ಲಿ ಯುಪಿಎ–1 ಸರಕಾರ ಮಂಡಿಸಿದ ಮಸೂದೆಯೇ ಆಗಿದೆ. ಅಲ್ಪ–ಸ್ವಲ್ಪ ಬದಲಾವಣೆಗಳಿವೆಯಷ್ಟೇ. ಆಗ ಎಡಪಕ್ಷಗಳ ವಿರೋಧದಿಂದಾಗಿ ಅದನ್ನು ಮಂಡಿಸುವುದು ಸಾಧ್ಯವಾಗಿರಲಿಲ್ಲ. ಈಗ ಎಡಪಕ್ಷಗಳ 'ಹಂಗಿಲ್ಲ'ವಾದ್ದರಿಂದ ಈ ನೌಕರ–ವಿರೋಧಿ ಮಸೂದೆ ಸಂಸತ್ತಿನ ಮುಂದೆ ಬರಲಿದೆ. ಇದರ ನಿಜವಾದ ಉದ್ದೇಶ ಮತ್ತೆ ಅದೇ. ಮುಂದುವರೆದ ದೇಶಗಳಲ್ಲಿ ಆರ್ಥಿಕ ಬಿಕ್ಕಟ್ಟಿನಿಂದಾಗಿ ಬೇರೆಡೆಗಳಲ್ಲಿ ಲಾಭದ ಹುಡುಕಾಟದಲ್ಲಿರುವ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡದಿಂದ ಬಂದಿರುವ ಮಸೂದೆ ಇದು. ಈಗ ಕೇವಲ ಸರಕಾರೀ ನೌಕರರು ಮಾತ್ರವಲ್ಲ, ಕೋಟ್ಯಂತರ ಅಸಂಘಟಿತ ಕಾರ್ಮಿಕರ ಬೆವರಿನಿಂದ ನಿರ್ಮಾಣವಾದ ಪೆನ್ಶನ್ ನಿಧಿಗಳನ್ನು ದೇಶಿ–ವಿದೇಶಿ ಬಂಡವಾಳಿಗರ ಜೂಜುಕೋರ ವ್ಯವಹಾರಗಳಿಗೆ ತೆರೆದು ಕೊಡುವುದು ಇದರ ಹಿಂದಿರುವ ಹುನ್ನಾರ ಎಂದು ಕಾರ್ಮಿಕ ಸಂಘಗಳು ಹೇಳುತ್ತಿವೆ. ಪ್ರಧಾನಮಂತ್ರಿಗಳು ನಿರುತ್ತರರಾದುದು ಅವರ ಅಭಿಪ್ರಾಯವನ್ನು ಪುಷ್ಟಿಗೊಳಿಸಿದೆ.

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO



ಎಸ್‌ಎಫ್‌ಐ 12ನೇ ರಾಜ್ಯ ಸಮ್ಮೇಳನ

ವಿದ್ಯಾರ್ಥಿ ಚಳುವಳಿಯ ಬಲವರ್ಧನೆಗೆ ನಿರ್ಧಾರ

ಭ್ರಷ್ಟಾಚಾರ ಶಿಕ್ಷಣದ ವ್ಯಾಪಾರೀಕರಣ, ಕೋಮುವಾದೀಕರಣ ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) 12 ನೇ ರಾಜ್ಯ ಸಮ್ಮೇಳನ 3-5 ನವೆಂಬರ್ 2011 ಹಾವೇರಿಯ, ಗುರುಭವನದಲ್ಲಿ ಯಶಸ್ವಿಯಾಗಿ ನಡೆಯಿತು. ಸಮ್ಮೇಳನವು ಹಲವು ಮಹತ್ತರವಾದ ನಿರ್ಣಯಗಳನ್ನು ಕೈಗೊಂಡಿದೆ. ಇವುಗಳನ್ನು ಜಾರಿಗೊಲಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ರಾಜ್ಯ - ಕೇಂದ್ರ ಸರ್ಕಾರಗಳನ್ನು ಸಮ್ಮೇಳನ ಒತ್ತಾಯಿಸಿದೆ.

1. ಸರ್ಕಾರಿ ಶಾಲೆಗಳನ್ನು ಮುಚ್ಚುವುದರ ವಿರುದ್ಧ ರಾಜ್ಯಾದ್ಯಂತ ಪ್ರಬಲ ಹೋರಾಟಗಳನ್ನು ಸಂಘಟಿಸಲು ಸಮ್ಮೇಳನ ನಿರ್ಣಯಿಸಿದೆ. ಈ ಕುರಿತು ನವೆಂಬರ್ 23 ರಂದು ಎಸ್.ಎಫ್.ಐ ರಾಜ್ಯ ಸಮಿತಿ ಸಾಹಿತಿಗಳು, ಚಿಂತಕರು, ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಂಸ್ಕೃತಿ ಇಲಾಖೆ, ಪ್ರಾಥಮಿಕ ಶಿಕ್ಷಣ ಪ್ರೇಮಿಗಳು, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು, ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಸಂಘಟನೆಗಳು, ಕನ್ನಡ ಪರ ಸಂಘಟನೆಗನ್ನೊಳಗೊಂಡ ರಾಜ್ಯ ಸಮಾವೇಶವನ್ನು ಬೆಂಗಳೂರಿನಲ್ಲಿ ನಡೆಸಲು ತೀರ್ಮಾನಿಸಲಾಯಿತು. ಶಾಲೆಗಳ ವಿಲೀನವನ್ನು ವಿರೋಧಿಸುತ್ತಿರುವ ವಿರೋಧಿಗಳು ಬಹಿರಂಗ ಚರ್ಚೆಗೆ ಬರಲಿ ಎಂದು ಹೇಳಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗ್ಡೆ ಕಾಗೇರಿಯವರನ್ನೂ ಸಮಾವೇಶಕ್ಕೆ ಆಹ್ವಾನಿಸಲು ಎಸ್.ಎಫ್.ಐ ರಾಜ್ಯ ಸಮಿತಿ ನಿರ್ಧರಿಸಿದೆ.
2. ಮಕ್ಕಳ ಶಿಕ್ಷಣ ಹಕ್ಕು ಮಸೂದೆಯನ್ನು ಜಾರಿಗೊಳಿಸಲು ಸೂಕ್ತ ನಿಯಮಗಳನ್ನ ರೂಪಿಸಿ ಅಗತ್ಯ ಹಣಕಾಸನ್ನು ಒದಗಿಸಬೇಕು.
3. ಡೊನೇಷನ್ ಹಾವಳಿ ತಡೆಗೆ ಒತ್ತಾಯಿಸಿ, ಜಿಲ್ಲಾ ರೆಗ್ಯುಲೇಟಿಂಗ್ ಪ್ರಾಧಿಕಾರ (1983 ಕ.ಶಿ.ಕಾ) ರಚಿಸಬೇಕು.
4. ಶುಲ್ಕ ಏರಿಕೆ ತೀರ್ಮಾನ ಕೈಬಿಡಬೇಕು.
5. ಶಿಕ್ಷಣದ ಕೇಸರೀಕರಣ ನಿಲ್ಲಿಸಬೇಕು.
6. ಹಾಸ್ಟೆಲ್‌ಗಳ ವ್ಯವಸ್ಥೆ ಬಲಪಡಿಸಬೇಕು.
7. ರಾಜ್ಯ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಶೇ 30ರಷ್ಟು ಹಣ ಮೀಸಲಿಡಬೇಕು.
8. ಶಾಲಾ-ಕಾಲೇಜುಗಳಿಗೆ ಮೂಲ ಸೌಲಭ್ಯ ಒದಗಿಸಬೇಕು.
9. ವಿದ್ಯಾರ್ಥಿನಿಯರ ಮೇಲಿನ ದೌರ್ಜನ್ಯ ತಡೆಗಟ್ಟಲು ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಸುಪ್ರೀಂ ಕೋರ್ಟ ನಿರ್ದೇಶನದಂತೆ ಲೈಂಗಿಕ ಕಿರುಕುಳ ವಿರೋಧಿ ಸಮಿತಿ ರಚಿಸಬೇಕು.
10. ವಿದ್ಯಾರ್ಥಿಗಳಿಗೆ ಸೂಕ್ತ ಸಾರಿಗೆ ವ್ಯವಸ್ಥೆ ಮತ್ತು ಉಚಿತ ಬಸ್‌ಪಾಸ್ ನೀಡಬೇಕು.
11. ಭ್ರಷ್ಟಾಚಾರ ನಿಯಂತ್ರಿಸಲು ಪ್ರಬಲ ಲೋಕಪಾಲ್ ಮಸೂದೆಗೆ ಜಾರಿಗೆ ಕೇಂದ್ರ ಸರ್ಕಾರ ಮುಂದಾಗಬೇಕು.
12. ರಾಜ್ಯದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಕುರಿತು ನ್ಯಾ ಸಂತೋಷ್ ಹೆಗ್ಡೆಯವರು ಸಲ್ಲಿಸಿರುವ ಲೋಕಾಯುಕ್ತ ವರದಿಯನ್ನು ಸಮರ್ಪಕವಾಗಿ ಜಾರಿಗೊಳಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು.
13. ವಿಧ್ಯಾರ್ಥಿಗಳಿಗೆ ಹೊರೆಯಾಗುವಂತೆ ಸೆಮಿಸ್ಟರ್ ಪದ್ದತಿಯನ್ನು ಅವೈಜ್ಞಾನಿಕವಾಗಿ ಜಾರಿಗೊಳಿಸಲಾಗುತ್ತಿದ್ದು ಇದನ್ನು ಕೈಬಿಡಬೇಕು.
14. ಖಾಸಗೀ, ವಿದೇಶಿ ವಿಶ್ವವಿದ್ಯಾಲಯಗಳ ಸ್ಥಾಪನೆ ಕೈಬಿಟ್ಟು, ಸರ್ಕಾರಿ ವಿಶ್ವ ವಿಶ್ವವಿದ್ಯಾಲಯಗಳನ್ನು ಬಲಪಡಿಸಬೇಕು.
15. ವೃತ್ತಿಶಿಕ್ಷಣ ಬಿಕ್ಕಟ್ಟಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವ ಕೇಂದ್ರೀಯ ಶಾಸನವನ್ನು ರಚಿಸಬೇಕು.
16. ಭಯೋತ್ಪಾದನೆ, ಕೋಮುವಾದ, ವಿಛಿದ್ರಕಾರಿ, ನಕ್ಸಲ್‌ವಾದಿ ಶಕ್ತಿಗಳನ್ನು ಹತ್ತಿಕ್ಕಲು ಕ್ರಮಕೈಗೊಳ್ಳಬೇಕು.
17. ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಸುಪ್ರೀಂಕೋರ್ಟ ನಿರ್ದೇಶನದಂತೆ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ನಡೆಸಬೇಕು, ಸೆನೆಟ್, ಸಿಂಡಿಕೇಟ್ ಗಳಿಗೆ ವಿದ್ಯಾರ್ಥಿ ಪ್ರಾತಿನಿಧ್ಯ ನೀಡಬೇಕು.



ನೂತನ ರಾಜ್ಯಾಧ್ಯಕ್ಷ ಅನಂತ ನಾಯಕ್



ನೂತನ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್

ಇನ್ನೂ ಹಲವು ನಿರ್ಣಯಗಳನ್ನು ರಾಜ್ಯ ಸಮ್ಮೇಳನ ಕೈಗೊಂಡಿದ್ದು ಮುಂದಿನ ದಿನಗಳಲ್ಲಿ ಈ ನಿರ್ಣಯಗಳ ಜಾರಿಗಾಗಿ ರಾಜ್ಯಾದ್ಯಂತ ಪ್ರಭಲ ಹೋರಾಟಗಳನ್ನು ಸಂಘಟಿಸಲು ತೀರ್ಮಾನಿಸಲಾಯಿತು.

ಹಾವೇರಿಯಲ್ಲಿ ನವೆಂಬರ್ 3-5 ವರೆಗೆ ನಡೆದ ಎಸ್.ಎಫ್.ಐ ನ 12ನೇ ರಾಜ್ಯ ಸಮ್ಮೇಳನ ಯಶಸ್ವಿಯಾಗಿದ್ದು ಈ ಸಮ್ಮೇಳನ 67 ಸದಸ್ಯರನ್ನೊಳಗೊಂಡ ನೂತನ ರಾಜ್ಯ ಸಮಿತಿಯನ್ನು ಆಯ್ಕೆಮಾಡಲಾಯಿತು. ಇದರಲ್ಲಿ 21 ಜನರ ರಾಜ್ಯ ಪದಾದಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆಮಾಡಲಾಯಿತು.

ಅಧ್ಯಕ್ಷರು : ಅನಂತ್ ನಾಯ್ಕ್ ಎನ್ (ರಾಜ್ಯ ಕೇಂದ್ರ)
ಉಪಾಧ್ಯಕ್ಷರು : ವಿನಯ್ ಕುಮಾರ್ ಎಂ.ಜಿ (ರಾಜ್ಯಕೇಂದ್ರ)
ನಾರಾಯಣ ಕಾಳೆ (ರಾಜ್ಯ ಕೇಂದ್ರ)
ಅಂಬರೀಷ್ ವಿ (ಕೋಲಾರ)
ಗುರುರಾಜ್ ದೇಸಾಯಿ (ಕೊಪ್ಪಳ)
ಜಗದೀಶ್ ಸೂರ್ಯ (ಮೈಸೂರು)
ಸುರೇಶ್ ಚೌಹಾಣ್ (ಬಳ್ಳಾರಿ)
ಕಾರ್ಯದರ್ಶಿ :ಹುಳ್ಳಿ ಉಮೇಶ್ (ರಾಜ್ಯ ಕೇಂದ್ರ)
ಜಂಟಿ ಕಾರ್ಯದರ್ಶಿಗಳು
ಪೃಥ್ವಿ ಎಂ.ಜಿ (ಹಾಸನ)
ಸೌಮ್ಯ ಪಾಟೀಲ್ (ಬಳ್ಳಾರಿ)
ರಂಗನಾಥ್ (ರಾಯಚೂರು)
ಬಸವರಾಜ್ ಪೂಜಾರ್ (ಹಾವೇರಿ)
ಜೀವನ್ ರಾಜ್ ಕುತ್ತಾರ್ (ದಕ್ಷಿಣ ಕನ್ನಡ)
ಮುನಿರಾಜ್ (ಬೆಂಗಳೂರು)
ಕಾರ್ಯದರ್ಶಿ ಮಂಡಳಿ ಸದಸ್ಯರು :
ರಾಜೇಂದ್ರ ಸಿಂಗ್ ಬಾಬು (ಮಂಡ್ಯ)
ರೇಣುಕಾ ಕಹಾರ್ (ಹಾವೇರಿ)
ಪ್ರಕಾಶ್ ಆಲಹಾಳ್ (ಯಾದಗಿರಿ)
ದುರ್ಗೇಶ್ ಡೆಗ್ಗಿ (ಕೊಪ್ಪಳ)
ರೇಖಾ ಎಂ. (ವಿದ್ಯಾರ್ಥಿನಿಯರ ಉಪಸಮಿತಿ)
ಜ್ಯೋತಿ ಪುಟ್ಟರೆಡ್ಡರ್ (ವಿದ್ಯಾರ್ಥಿನಿಯರ ಉಪಸಮಿತಿ)
ದಿವ್ಯ (ವಿದ್ಯಾರ್ಥಿನಿಯರ ಉಪಸಮಿತಿ)

40 ವರ್ಷಗಳ ನೆನಪುಗಳ ಮೆಲುಕು - ವಿದ್ಯಾರ್ಥಿ ಚಳುವಳಿಯ ಮಾಜಿ ರಾಜ್ಯ ಮುಖಂಡರುಗಳಿಂದ



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH